ವಿದ್ವಾನ್ ಎನ್. ರಂಗನಾಥ ಶರ್ಮಾ

ಪುರಾಣಗಳ ನೆಲೆ ಮತ್ತು ತತ್ತ್ವವಿಚಾರ



ಉದಯ ಪ್ರಕಾಶನ

ಉದಯ ಪ್ರಕಾಶನದ ೮೨ನೇ ಪ್ರಕಟಣೆ

ಪುರಾಣಗಳ ನೆಲೆ ಮತ್ತು ತತ್ತ್ವವಿಚಾರ

ಮಹಾಮಹೋಪಾಧ್ಯಾಯ
ವಿದ್ವಾನ್ ಎನ್. ರಂಗನಾಥ ಶರ್ಮಾ

ಉದಯ ಪ್ರಕಾಶನ
೯೮೪, ೧೧ನೇ ಮುಖ್ಯರಸ್ತೆ, ೩ನೇ ವಿಭಾಗ
ರಾಜಾಜಿನಗರ, ಬೆಂಗಳೂರು –೫೬೦೦೧೦
ದೂರವಾಣಿ : ೨೩೩೪೯೧೪೩

Puranagala Nele Mattu Tatva Vichara

A book Written By:
Mahamahopadhyaya
Vidwan N. Ranganatha Sharma
Ph.. 2672 0505

Pages: viii + 76 = 84

First Impression: 2010

Price: Rs: 50/-

D.T.P..
Smt. Rajeswari T.A.

Publisher:
Udaya Prakashana
No. 984, 11th Main Road, III Block
Rajajinagar, Bangalore - 560 010

ಪುರಾಣಗಳ ನೆಲೆ ಮತ್ತು ತತ್ತ್ವವಿಚಾರ

ಮಹಾಮಹೋಪಾಧ್ಯಾಯ
ವಿದ್ವಾನ್ ಎನ್. ರಂಗನಾಥ ಶರ್ಮಾ

ಪುಟಗಳು: viii + 76 = 84

ಪ್ರಥಮ ಮುದ್ರಣ: 2010

ಬೆಲೆ: ರೂ. 50/-

ಡಿ.ಟಿ.ಪಿ.:
ಶ್ರೀಮತಿ ಟಿ.ಎ. ರಾಜೇಶ್ವರಿ
ದೂ.: 97407 81474

ಪ್ರಕಾಶಕರು:
ಉದಯ ಪ್ರಕಾಶನ
ರಾಜಾಜಿನಗರ, ಬೆಂಗಳೂರು

ಸ್ವಾನ್ ಪ್ರಿಂಟರ್ಸ್
svon printers
☎ 080-2674 2233

ಪ್ರಸ್ತಾವನೆ

ಭಾರತೀಯರು ಸಾಧಿಸಿದ ವಿಸ್ತಾರವಾದ ಸಾಹಿತ್ಯಕ್ಷೇತ್ರದಲ್ಲಿ ಸೇರಿದ ವೇದೋಪನಿಷತ್ತುಗಳು, ಶ್ರೀಮದ್ರಾಮಾಯಣ, ಮಹಾಭಾರತವೆಂಬ ಇತಿಹಾಸ ಗ್ರಂಥಗಳು, ಸ್ಕಾಂದಪುರಾಣ, ವಿಷ್ಣುಪುರಾಣ ಮುಂತಾದ ಪುರಾಣ ಗ್ರಂಥಗಳು ಯಾವ ರಾಷ್ಟ್ರಕ್ಕಾದರೂ ಹೆಮ್ಮೆಯನ್ನು ತರುವ ವಿಖ್ಯಾತವಾದ ಪ್ರೌಢಗ್ರಂಥಗಳು. ಇವುಗಳಲ್ಲಿ ನಾನಾ ಬಗೆಯ ಕಥೆಗಳು, ಸುಭಾಷಿತಗಳು ಮುಖ್ಯವಾಗಿ ಆತ್ಮದರ್ಶನಕ್ಕೆ ವಿಸ್ತರಿಸಿದ ತತ್ತ್ವವಿಚಾರಗಳು, ವಿದ್ವಾಂಸರಿಗೆ ಆಕರ್ಷಕವಾದ ವಿಚಾರ ಪ್ರಬಂಧಗಳಾಗಿರುತ್ತವೆ. ರಾಮಾಯಣ ಮಹಾಭಾರತಗಳನ್ನು ಇತಿಹಾಸ ಗ್ರಂಥಗಳೆಂದು ನಮ್ಮವರು ಹಿಂದಿನಿಂದಲೂ ಹೇಳುತ್ತಲೇ ಬಂದಿದ್ದಾರೆ. ಆದ್ದರಿಂದ ಶ್ರೀರಾಮ ಲಕ್ಷ್ಮಣ ಭೀಷ್ಮ ದ್ರೋಣಾದಿಗಳು ಒಂದು ಕಾಲದಲ್ಲಿ ಜೀವಿಸಿದ್ದ ಐತಿಹಾಸಿಕ ವ್ಯಕ್ತಿಗಳೆಂದು ನಾವು ತಿಳಿಯಬೇಕು. ಇವು ಮಹಾಕಾವ್ಯಗಳಲ್ಲಿ ಸೇರಿಹೋಗತಕ್ಕವುಗಳಾದ್ದರಿಂದ ಕವಿಕಲ್ಪಿತ ಅಲೌಕಿಕ ವರ್ಣನೆಗಳಿಂದ ಕೂಡಿರುವುದು ಸಂಗತವೇ ಆಗಿದೆ.

ಹದಿನೆಂಟು ಮಹಾಪುರಾಣಗಳು ವಿಖ್ಯಾತವಾಗಿವೆ. ಭಾರತೀಯರ ವಿಚಾರವೆಲ್ಲವೂ ಆತ್ಮದರ್ಶನ ಪರ್ಯಂತವಾದ್ದರಿಂದ ವೇದಾದಿ ಸಾಹಿತ್ಯವು ಆತ್ಮದರ್ಶನಕ್ಕೆ ಪ್ರಾಶಸ್ತ್ಯವನ್ನಿತ್ತು ತತ್ತ್ವವಿಚಾರದಲ್ಲಿ ತೊಡಗಿರುತ್ತದೆ. ವೇದವು ಮಾನವನ ಕಲ್ಪನೆಗೆ ನಿಲುಕತಕ್ಕದ್ದಲ್ಲ. ಪುರಾಣಗಳು ಮಾತ್ರ ಮಾನವ ನಿರ್ಮಿತವೆಂದು ಪ್ರಸಿದ್ಧವಾದ್ದರಿಂದ ಅಲ್ಲಲ್ಲಿ ಮನುಷ್ಯನ ಕೈವಾಡ ಸ್ಪಷ್ಟವಾಗಿ ಗೋಚರಿಸುತ್ತದೆ. ನಾನಾ ಕಾರಣಗಳಿಂದ ಮಾನವ ಚಿಂತನೆಯು ಭಿನ್ನ ರೂಪಗಳನ್ನು ತಳೆದು ಪರಸ್ಪರ ವಿರುದ್ಧವಾಗಿ ಕಂಡುಬರುತ್ತದೆ. ಆದರೆ, ವೇದವು ಅಪೌರುಷೇಯವೆಂದು ವಿಖ್ಯಾತವಾದ್ದರಿಂದ ವಾಕ್ಯಗಳನ್ನು ಬದಲಾಯಿಸಲಾಗುವುದಿಲ್ಲ. ಅರ್ಥವನ್ನು ಮಾತ್ರ ಎಳೆದು ಹಿಗ್ಗಿಸಿ ತಮಗೆ ಇಷ್ಟಬಂದಂತೆ ವಿವರಿಸಲು ಸಾಧ್ಯವಾಗುತ್ತದೆ. ಆದರೆ ಶುದ್ಧಚಿತ್ತನೂ ಸತ್ಯಾನ್ವೇಷಿಯೂ ಆದ ತತ್ತ್ವಚಿಂತಕನಿಗೆ ಸತ್ಯವಾದ ಅರ್ಥವೇನೆಂದು ನಿಶ್ಚಯವಾಗಿ ತಿಳಿದುಬರುತ್ತದೆ.

ಪುರಾಣಗಳ ನೆಲೆ ಮತ್ತು ತತ್ತ್ವವಿಚಾರ

ಭಾರತೀಯ ತತ್ತ್ವವಿಮರ್ಶೆಗೂ, ಪಾಶ್ಚಾತ್ಯರ ತತ್ತ್ವವಿಮರ್ಶೆಗೂ ಒಂದು ಮುಖ್ಯವಾದ ಭೇದವುಂಟು. ನಾವು ಪರಮಾರ್ಥ ವೇನೆಂಬುದನ್ನು ನಿಶ್ಚಯಿಸುವಾಗ ಅದಕ್ಕೆ ಹರಿ, ಹರ, ಗಣಪತಿ, ಸೂರ್ಯ, ಶಕ್ತಿ ಮುಂತಾದ ನಾನಾ ಹೆಸರುಗಳನ್ನಿಟ್ಟು ಅದಕ್ಕೆ ಗುಣ, ರೂಪ, ಸ್ವಭಾವಗಳನ್ನು ಕಲ್ಪಿಸುತ್ತೇವೆ. ಪಾಶ್ಚಾತ್ಯರಿಗೆ ಈ ಬಗೆಯ ಹೆಸರುಗಳಿಲ್ಲದೇ ಆತ್ಮಾ, ಚೇತನ ಮುಂತಾದ ಶಬ್ದಗಳಿಂದ ಅವರ ವಿಚಾರವು ಸಾಗುತ್ತದೆ. ಹರಿಹರಾದಿ ಶಬ್ದಗಳು ವಾಸ್ತವವಾಗಿ ಮತೀಯ ಕಲ್ಪನೆಗಳು. ದೀರ್ಘಕಾಲದ ಮತೀಯಾನುಷ್ಠಾನಕ್ಕೊಳಗಾದ ಭಾರತೀಯನು ಮತದ ಗುಂಗಿನಿಂದ ಬಿಡುಗಡೆ ಹೊಂದದೇ ಅದರಲ್ಲಿಯೇ ಮುಳುಗಿ ಸಾಗುತ್ತಾನೆ. ಇನ್ನು ಕ್ರಿಸ್ತ, ಪೈಗಂಬರ ಮುಂತಾದ ಶಬ್ದಗಳಿಂದ ತತ್ತ್ವವನ್ನು ಕರೆದು ವರ್ಣಿಸುವ ಕ್ರಿಶ್ಚಿಯನ್ ಇಸ್ಲಾಮ್ ಮುಂತಾದ ಮತಧರ್ಮಗಳು ಪರಮಾರ್ಥಕ್ಕೆ ಗುಣಕ್ರಿಯಾದಿಗಳನ್ನು ಕಲ್ಪಿಸಿಕೊಂಡು ಕೆಲವು ಭಾರತೀಯರಂತೆಯೇ ಮತಭ್ರಾಂತಿಯಲ್ಲಿಯೇ ಮುಳುಗಿವೆ. ವಿಶಾಲಮನಸ್ಕನಾದ ಸತ್ಯಾನ್ವೇಷಿ ತತ್ವಜೀವಿಗೆ ಈ ಶಬ್ದಗಳು ನಂಬಿಕೆಗಳು ಮುದವನ್ನು ನೀಡುವುದಿಲ್ಲ. ಆದ್ದರಿಂದ ಮತೀಯ ಕಲ್ಪನೆಯನ್ನು ದೂರವಿಟ್ಟು ತತ್ತ್ವಾನ್ವೇಷಣೆಯಲ್ಲಿ ತೊಡಗಿದವನಿಗೆ ಸತ್ಯದರ್ಶನವು ಆಗುವುದೆಂಬುದು ನನ್ನ ನಂಬಿಕೆ.

ನಮ್ಮ ಪುರಾಣಗಳು ನಿಜವಾಗಿಯೂ ತತ್ತ್ವಾನ್ವೇಷಣೆಗೆ ಹೊರಟಿವೆ. ಮತಾಂಧರಾದ ಕೆಲವರು ತತ್ತ್ವಾನ್ವೇಷಣೆಯನ್ನು ಬದಿಗಿರಿಸಿ ತಮ್ಮ ಮತಗಳಿಗೆ ಪ್ರಾಮಾಣ್ಯವನ್ನು ಕಲ್ಪಿಸುವುದಕ್ಕಾಗಿ ಪುರಾಣವಾಕ್ಯಗಳನ್ನು ಅಲ್ಲಲ್ಲಿ ತಿದ್ದಿದ್ದಾರೆ; ಹೊಸದಾಗಿ ಶ್ಲೋಕಗಳನ್ನು ರಚಿಸಿ ಸೇರಿಸಿದ್ದಾರೆ. ತಮ್ಮ ಮತಕ್ಕೆ ಪೋಷಣೆಯನ್ನೀಯುವ ವಾಕ್ಯಗಳನ್ನು ಸೇರಿಸಿ, ಇಲ್ಲದ ಪ್ರಮೇಯಕ್ಕೆ ಸಲ್ಲದ ಪ್ರಾಮಾಣ್ಯವನ್ನು ಕಲ್ಪಿಸಿದ್ದಾರೆ. ಪುರಾಣ ವಾಕ್ಯಗಳು ವೇದವಾಕ್ಯಗಳಂತೆ ಉದಾತ್ತಾದಿ ಸ್ವರಸಹಿತವಾದವುಗಳಲ್ಲ. ವೈದಿಕ ಶಬ್ದಗಳನ್ನುಳ್ಳವುಗಳೂ ಅಲ್ಲ. ಇವನ್ನು ಕಂಠಪಾಠ ಮಾಡುವ ಪದ್ಧತಿಯೂ ಇಲ್ಲ. ಆದ್ದರಿಂದ ಇವುಗಳಲ್ಲಿ ಪ್ರಕ್ಷೇಪ ಮಾಡುವುದು ಸುಲಭ.

ಪುರಾಣಗಳ ವಿಷಯದಲ್ಲಿ ತುಂಬ ಸಂಶೋಧನೆಯನ್ನು ನಡೆಸಿದ ಡಾ. ಹಾಜ್ರ ಅವರ ಅಭಿಪ್ರಾಯದಂತೆ ವಿಷ್ಣುಪುರಾಣವು ಅತ್ಯಂತ ಪ್ರಾಚೀನವಾದದ್ದು. ಈ ಪುರಾಣದ ಕಾಲ ಕ್ರಿ.ಶ. ನಾನೂರು (ಕ್ರಿ.ಶ. ೪೦೦) ಇರಬಹುದೆಂದು ಅವರ ಅಭಿಪ್ರಾಯ. ಕ್ರಿ.ಶ. ೧೪ನೇ ಶತಮಾನದ ವರೆಗೆ ಇತರ ಪುರಾಣಗಳ ರಚನೆಯಾಗುತ್ತ ಬಂದಿದೆ. ಇವುಗಳಿಗೆ ಮೂಲವಾಗಿ ಕೆಲವು ಪೌರಾಣಿಕ ವಿಚಾರಗಳನ್ನು ವ್ಯಾಸರು ತಮ್ಮ ಶಿಷ್ಯನಾದ ಸೂತ ರೋಮಹರ್ಷಣನಿಗೆ ಉಪದೇಶಿಸಿದ್ದರು. ಆದ್ದರಿಂದ ಎಲ್ಲ ಪುರಾಣಗಳಿಗೂ ವ್ಯಾಸರೇ ಕರ್ತರೆಂಬ ಹೇಳಿಕೆ ಪ್ರಸಿದ್ಧವಾಯಿತು ಎಂಬುದು ಡಾ. ಹಾಜ್ರಾ ಅವರ ಅಭಿಪ್ರಾಯ.

ಪುರಾಣಗಳ ನೆಲೆ ಮತ್ತು ತತ್ತ್ವವಿಚಾರ

ಭಾಗವತದಲ್ಲಿ ಸಚ್ಚಿದಾನಂದ ಸ್ವರೂಪನಾದ ಭಗವಂತನ ಪ್ರಾಪ್ತಿಗೆ ಭಕ್ತಿಯೇ ಮುಖ್ಯ ಸಾಧನವೆಂದು ಬಹು ಸುಂದರವಾಗಿ ಪ್ರತಿಪಾದಿಸಲಾಗಿದೆ. ನವವಿಧ ಭಕ್ತಿಗಳಲ್ಲಿ ಪ್ರೇಮವು ಭಕ್ತಿ ಪ್ರಕಾರಗಳಲ್ಲಿ ಸೇರಿಹೋಗುತ್ತದೆ. ಆದ್ದರಿಂದಲೇ ಗೋಪಿಯರಿಗೆ ಶ್ರೀಕೃಷ್ಣನಲ್ಲಿದ್ದ ಪ್ರೇಮವು ಅವರ ಮುಕ್ತಿಗೆ ಕಾರಣವಾಯಿತೆಂದು ಅನೇಕ ಕವಿಗಳು ವರ್ಣಿಸಿದ್ದಾರೆ. ಜಯದೇವಕವಿಯ ಗೀತಗೋವಿಂದದ ತಾತ್ಪರ್ಯವೂ ಇದೇ ಆಗಿದೆ. ಭಾಗವತವು ಭಕ್ತಿಯ ಪ್ರಾಧಾನ್ಯವನ್ನು ನಿರೂಪಿಸಿ ಮುಕ್ತಿಯ ಸ್ವರೂಪವನ್ನು ಶ್ರುತಿಯ ಪ್ರಾಮಾಣ್ಯದಿಂದ ವಿಸ್ತರಿಸಿದೆ. ಮುಕ್ತಿಯ ಸ್ವರೂಪವಾದರೋ ಜೀವನು ತನ್ನ ನಿಜಸ್ವರೂಪವನ್ನು ತಿಳಿದುಕೊಳ್ಳುವುದೇ ಆಗಿದೆ. ಈ ಗ್ರಂಥದ ಪ್ರತಿಯೊಂದು ಸ್ಕಂಧದಲ್ಲಿಯೂ ಸಹ ಶ್ರೀಶಂಕರಾಚಾರ್ಯರು ಪ್ರತಿಪಾದಿಸಿದ ಅದ್ವೈತ ದರ್ಶನವನ್ನು ಸ್ಪಷ್ಟವಾಗಿ ಗುರುತಿಸಬಹುದು. ಅಂತಹ ಮುಕ್ತಿಗೆ ಭಗವದ್‌ಭಕ್ತಿಯೇ ಪ್ರಧಾನವಾದ ಕಾರಣ ಎಂಬುದು ಶ್ರೀಮದ್‌ಭಾಗವತದ ಪರಮ ತಾತ್ಪರ್ಯ.

ನಾನು ವಿಷ್ಣುಪುರಾಣವನ್ನು ಹಾಗೂ ಭಾಗವತದ ೧೦, ೧೧, ೧೨ನೆಯ ಸ್ಕಂಧಗಳನ್ನು ಕನ್ನಡಕ್ಕೆ ಅನುವಾದಿಸಿ ಬಹಳ ವರ್ಷಗಳೇ ಆದವು. ಈ ಅನುವಾದಗಳಿಗೆ ನಾನು ಬರೆದ ಮುನ್ನುಡಿಗಳು ಬಹಳ ಸೊಗಸಾಗಿ ಬಂದಿವೆಯೆಂದು ವಿದ್ಯಾಪ್ರಿಯರಾದ ಅನೇಕರ ಅಭಿಪ್ರಾಯವಾಗಿತ್ತು. ಈ ಮುನ್ನುಡಿಗಳೆಲ್ಲವನ್ನು ಓದಬೇಕಾದರೆ ಐದು ಪುಸ್ತಕಗಳನ್ನು ಕೊಂಡುಕೊಳ್ಳಬೇಕಾಗುತ್ತದೆ. ಇದು ಎಲ್ಲರಿಗೂ ಶಕ್ಯವಲ್ಲ. ಇವೆಲ್ಲವೂ ಒಂದು ಹೊತ್ತಿಗೆಯ ರೂಪದಲ್ಲಿ ಬಂದಿದ್ದರೆ ಬಹಳ ಜನರು ಓದಿ ಹರ್ಷಿಸಲು ಸಾಧ್ಯವಾಗುತ್ತಿತ್ತು ಎಂದು ಅಭಿಪ್ರಾಯಪಡುತ್ತಿದ್ದರು. ಆದ್ದರಿಂದ, ನಾನು ಈ ಮುನ್ನುಡಿಗಳ ಸಂಕಲನವನ್ನು ಪ್ರಕಟಿಸಲು ಉದ್ದೇಶಿಸಿದೆ. ಅದರ ಫಲವೇ ಈ "ಪುರಾಣಗಳ ನೆಲೆ ಮತ್ತು ತತ್ತ್ವವಿಚಾರ"ವೆಂಬ ಪುಸ್ತಕದ ಪ್ರಕಟಣೆ.

ಈ ಗ್ರಂಥವನ್ನು ಮುದ್ರಿಸಿ ಪ್ರಕಟಿಸತಕ್ಕವರು ಯಾರು? ಇದಕ್ಕೆ ಉತ್ತರವಾಗಿ ನನ್ನ ಮಾನ್ಯ ಮಿತ್ರರಾದ ಶ್ರೀಮಾನ್ ಮ.ಸು. ಶ್ರೀನಿವಾಸರಾಯರು ಮುಂದೆ ಬಂದು ತಾವು ಇದನ್ನು ಪ್ರಕಟಿಸುವುದಾಗಿ ತಿಳಿಸಿದರು. ಹಲವಾರು ಶ್ರೇಷ್ಠಗ್ರಂಥಗಳ ಪ್ರಕಾಶನವನ್ನು ಮಾಡಿರುವ ಉದಯ ಪ್ರಕಾಶನ ಸಂಸ್ಥೆಯ ಮಾಲೀಕರಾದ ಈ ಮಹನೀಯರು ಈ ಗ್ರಂಥದ ಪ್ರಕಾಶನಕ್ಕೆ ಮುಂದೆ ಬಂದಿದ್ದರಿಂದ ನನಗೆ ತುಂಬ ಸಂತೋಷವಾಯಿತು. ಕೂಡಲೇ ಗ್ರಂಥವನ್ನು ಸಿದ್ಧಪಡಿಸಲು ಉದ್ದೇಶಿಸಿದೆನು. ಆದರೆ ಓದಲಾರದ ಮತ್ತು ಬರೆಯಲಾರದ ನಾನು ಗ್ರಂಥದ ಸಿದ್ಧತೆ ಮಾಡುವುದು ಹೇಗೆ? ಎಂದಿನಂತೆ ನನ್ನ ಮಿತ್ರರಾದ ಯಲ್ಲಾಪುರ ಕೃಷ್ಣಶರ್ಮರು ಮುಂದೆ ಬಂದು ಈ ಗ್ರಂಥಗಳ ಮುನ್ನುಡಿಗಳನ್ನು

ಕ್ರಮಬದ್ಧವಾಗಿ ಸಂಗ್ರಹಿಸಿ ಮುದ್ರಣಕ್ಕೆ ಸಜ್ಜುಮಾಡಿಕೊಟ್ಟರು. ಈ ಉಪಕಾರಕ್ಕಾಗಿ ಶ್ರೀ ಕೃಷ್ಣಶರ್ಮರನ್ನೂ ಶ್ರೀ ಮ.ಸು. ಶ್ರೀನಿವಾಸರಾಯರನ್ನೂ ಸದಾ ಸ್ಮರಿಸಿಕೊಳ್ಳುತ್ತೇನೆ.

ಇದರ ಕರಡನ್ನು ಶೋಧಿಸಿ ಕೊಟ್ಟಿರುವ ಮಿತ್ರರಾದ ವಿದ್ವಾನ್ ಶ್ರೀ ಅನಂತ ಶರ್ಮಾ ಭುವನಗಿರಿ ಮತ್ತು ವಿದೂಷಿ ಶ್ರೀಮತಿ ಲೀಲಾವತಿ ಇವರ ಉಪಕಾರವನ್ನು ಸದಾ ಸ್ಮರಿಸುತ್ತೇನೆ.

ಅಂತಿಮವಾಗಿ, ಅಧ್ಯಾಯಗಳನ್ನು ವಿಂಗಡಿಸಿ, ಶೀರ್ಷಿಕೆಕೊಟ್ಟು ನೇರ್ಪುಗೊಳಿಸಿದ್ದಲ್ಲದೆ, ಬೆನ್ನುಡಿಯನ್ನು ಬರೆದುಕೊಟ್ಟ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಕುಲಪತಿಗಳಾದ ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ ಅವರ ಸಕಾಲಿಕ ನೆರವನ್ನು ತುಂಬು ಮನಸ್ಸಿನಿಂದ ನೆನೆಯುತ್ತ ಈ ಗ್ರಂಥವನ್ನು ಓದುಗರ ಮಡಿಲಿಗೆ ಆದರಪೂರ್ವಕವಾಗಿ ಒಪ್ಪಿಸುತ್ತೇನೆ.

ಬೆಂಗಳೂರು – ೮೫ | ವಿದ್ವಾನ್ ಎನ್. ರಂಗನಾಥ ಶರ್ಮಾ
೦೯.೦೭.೨೦೧೦ | ಮಹಾಮಹೋಪಾಧ್ಯಾಯ

ಪರಿವಿಡಿ

ಪ್ರಸ್ತಾವನೆ	iii
ಪುರಾಣಗಳ ನೆಲೆ	1
ವಿಷ್ಣುಪುರಾಣದ ಮಹತ್ತ್ವ	11
ವಿಷ್ಣುಪುರಾಣದ ತತ್ತ್ವವಿಚಾರ	33
ಭಾಗವತದ ವೈಶಿಷ್ಟ್ಯ	50
ಭಾಗವತದ ತತ್ತ್ವವಿಚಾರ	60
ಶ್ರೀ ವಿಷ್ಣುಪುರಾಣ – ಶ್ರೀ ಮದ್ಭಾಗವತ	71
ಅನುಬಂಧ	
ಬ್ರಹ್ಮವಲ್ಲೀ	93

೧. ಪುರಾಣಗಳ ನೆಲೆ

ನಮ್ಮ ಭಾರತೀಯ ಸಾಹಿತ್ಯದಲ್ಲಿ ಪುರಾಣಗಳು ಒಂದು ಮಹತ್ತ್ವದ ಸ್ಥಾನವನ್ನು ಪಡೆದುಕೊಂಡಿವೆ. ಇವುಗಳ ಗುರಿ ಧರ್ಮ, ದರ್ಶನ ಮತ್ತು ಲೋಕನೀತಿಗಳು. ಇವುಗಳ ಬೋಧೆಯನ್ನು ಪ್ರಧಾನವಾಗಿರಿಸಿಕೊಂಡು ದೈವಭಕ್ತಿ, ಕ್ಷೇತ್ರ ತೀರ್ಥಾದಿಗಳ ಮಹಿಮೆ, ಸೃಷ್ಟಿ, ಪ್ರಳಯಗಳ ವಿಚಾರ, ಪರಂಪರೆಯಿಂದ ಬಂದ ರಾಜರ ಮತ್ತು ಋಷಿಗಳ ಚರಿತ್ರೆ ಇವನ್ನು ನಿರೂಪಿಸುವುದು ಪುರಾಣಗಳ ಉದ್ದೇಶವಾಗಿದೆ. ಈ ಪುರಾಣಗಳೇ ಇಂದಿನ ಹಿಂದೂ ಧರ್ಮದ ನಾನಾ ಪ್ರಕಾರಗಳಿಗೆ ಆಧಾರವಾಗಿವೆ. 'ಪುರಾ ಭವಂ ಪುರಾಣಮ್' ಎಂಬ ವ್ಯುತ್ಪತ್ತಿಯಂತೆ ಪುರಾತನ ಸಾಹಿತ್ಯವೆಂದು ಶಬ್ದಾರ್ಥವಾಗುತ್ತದೆ. 'ಪುರಾಪಿ ನವಂ ಪುರಾಣಮ್' ಎಂದೂ ಹೇಳುವುದುಂಟು. ಇದರ ಪ್ರಕಾರ ಸನಾತನವೂ ನಿತ್ಯನೂತನವೂ ಆದ ಧರ್ಮವನ್ನೂ ದಾರ್ಶನಿಕ ತತ್ತ್ವವನ್ನೂ ನಿರೂಪಿಸುವ ಗ್ರಂಥ ಪುರಾಣವೆನಿಸುತ್ತದೆ. ಈ ಎರಡು ಅರ್ಥವೂ ಗ್ರಾಹ್ಯವಾದದ್ದೇ ಸರಿ. ವೇದದ ಗೂಢಾರ್ಥವನ್ನು ಆಖ್ಯಾನ ಉಪಾಖ್ಯಾನಗಳ ಮೂಲಕ ಸರಳಗೊಳಿಸಿ ಪ್ರಕಾರಾಂತರದಿಂದ ಪುರಾಣವು ವರ್ಣಿಸುತ್ತದೆ ಎಂದು ನಮ್ಮವರು ಹೇಳಿದ್ದಾರೆ.

ಇತಿಹಾಸಪುರಾಣಾಭ್ಯಾಂ ವೇದಂ ಸಮುಪಬೃಂಹಯೇತ್।
ಬಿಭೇತ್ಯಲ್ಪಶ್ರುತಾದ್ ವೇದೋ ಮಾಮಯಂ ಪ್ರಹರೇದಿತಿ॥

ಹದಿನೆಂಟು ಮಹಾಪುರಾಣಗಳು ಪ್ರಖ್ಯಾತವಾಗಿವೆಯಷ್ಟೇ. ಇವನ್ನು ನೆನಪಿಡಲು ಈ ಶ್ಲೋಕ ಸಾಧನವಾಗಿದೆ–

ಮ–ದ್ವಯಂ ಭ–ದ್ವಯಂ ಚೈವ ಬ್ರ–ತ್ರಯಂ ವ–ಚತುಷ್ಟಯಮ್।
ಅ–ನಾ–ಪ–ಲಿಂ–ಗ–ಕೂ–ಸ್ಕಾನಿ ಪುರಾಣಾನಿ ಪ್ರಚಕ್ಷತೇ॥

ಮತ್ಸ್ಯ, ಮಾರ್ಕಂಡೇಯ, ಭವಿಷ್ಯ, ಭಾಗವತ, ಬ್ರಹ್ಮ, ಬ್ರಹ್ಮವೈವರ್ತ, ಬ್ರಹ್ಮಾಂಡ, ವಾಮನ, ವರಾಹ, ವಾಯು, ವಿಷ್ಣು, ಅಗ್ನಿ, ನಾರದ, ಪದ್ಮ, ಲಿಂಗ, ಗರುಡ, ಕೂರ್ಮ ಮತ್ತು ಸ್ಕಾಂದ ಎಂಬಿವೇ ಅಷ್ಟಾದಶ ಮಹಾಪುರಾಣಗಳು. ಹೀಗೆಯೇ ಅಷ್ಟಾದಶ

ಉಪಪುರಾಣಗಳೂ ಇವೆ. ಸನತ್ಕುಮಾರ, ನಾರಸಿಂಹ, ಕಾಪಿಲ, ಮಾನವ ಮುಂತಾದ ಈ ಉಪಪುರಾಣಗಳಲ್ಲಿ ಕೆಲವು ಮಾತ್ರ ಈಗ ದೊರೆಯುತ್ತವೆ. ಉಳಿದವು ಹೆಸರಿನಲ್ಲಿ ಮಾತ್ರ ಉಳಿದುಕೊಂಡಿವೆ.

ಈ ವಿಭಾಗದಲ್ಲಿಯೂ ಮತಭೇದವುಂಟು. ಉದಾಹರಣೆಗೆ ಶಿವಪುರಾಣವು ಕೆಲವರ ಮತದಂತೆ ಮಹಾಪುರಾಣದಲ್ಲಿ ಸೇರುತ್ತದೆ. ಕೆಲವರು ಇದನ್ನು ಉಪಪುರಾಣವೆಂದು ಕರೆದಿದ್ದಾರೆ. ಹೀಗೆಯೇ ನಾರದ ಪುರಾಣ, ಭಾಗವತಪುರಾಣಗಳ ವಿಷಯದಲ್ಲಿಯೂ ಮತಭೇದವಿದೆ. ಭಾಗವತವೆಂದರೆ ನಮ್ಮಲ್ಲಿ ಪ್ರಸಿದ್ಧವಾದ ವಿಷ್ಣುಭಾಗವತವೇ ಅಥವಾ ದೇವೀಭಾಗವತವೇ ಎಂಬುದು ವಿವಾದದ ಸುಳಿಯಲ್ಲಿ ಸಿಲುಕಿದೆ. ವಿಷ್ಣುಭಾಗವತಕ್ಕೆ ವ್ಯಾಖ್ಯಾನವನ್ನು ಬರೆದಿರುವ ಶ್ರೀಧರಸ್ವಾಮಿಗಳು ಆರಂಭದಲ್ಲಿಯೇ "ಭಾಗವತಂ ನಾಮ ಅನ್ಯದಿತ್ಯಪಿ ನಾಶಂಕನೀಯಮ್" ಎಂದು ಬರೆದಿದ್ದಾರೆ. ಅವರ ಮತದಂತೆ ಈ ವಿಷ್ಣುಭಾಗವತವೇ ಭಾಗವತವೆಂದು ತಿಳಿಯಬೇಕು.

ಈ ಪುರಾಣಗಳ ಮೂಲಸಾಮಗ್ರಿ ಪ್ರಾಚೀನವೇ ಹೌದು. ಪುರಾಣವೆಂಬ ಶಬ್ದವು ಅಥರ್ವವೇದದಲ್ಲಿಯೂ (೧೧-೭-೨೪) ಶತಪಥ ಬ್ರಾಹ್ಮಣದಲ್ಲಿಯೂ (೧೩-೪-೩-೧೩) ಕಂಡುಬರುತ್ತದೆ. "ಇತಿಹಾಸಂ, ಪುರಾಣಂ, ವಿದ್ಯಾ, ಉಪನಿಷದಃ" ಎಂದು ಬೃಹದಾರಣ್ಯಕ ಉಪನಿಷತ್ತಿನಲ್ಲಿಯೂ, "ಇತಿಹಾಸಪುರಾಣಂ ಪಂಚಮಂ ವೇದಾನಾಂ ವೇದಃ" ಎಂದು ಛಾಂದೋಗ್ಯೋಪ ನಿಷತ್ತಿನಲ್ಲಿಯೂ ಉಲ್ಲೇಖವಿದೆ. ಆಪಸ್ತಂಬಧರ್ಮಸೂತ್ರದಲ್ಲಿ "ಅಥ ಪುರಾಣೇ ಶ್ಲೋಕಾನುದಾಹರಂತಿ" ಎಂಬ ವಾಕ್ಯವಿದೆ. ಇವೆಲ್ಲವನ್ನು ಪರಿಶೀಲಿಸಿದಾಗ ಪುರಾಣವೆಂಬ ಸಾಹಿತ್ಯದ ಪ್ರಾಚೀನತೆ ಸ್ಪಷ್ಟಪಡುವುದಾದರೂ ಈಗ ದೊರಕಿರುವ ಬೃಹತ್ ಪ್ರಮಾಣದ ಪುರಾಣಗಳು ಅಷ್ಟು ಪ್ರಾಚೀನವಲ್ಲವೆಂದು ಆಧುನಿಕ ವಿದ್ವಾಂಸರ ನಿಶ್ಚಿತವಾದ ಅಭಿಪ್ರಾಯವಿದೆ. ಇವುಗಳಲ್ಲಿ ಕೆಲವು ಗುಪ್ತಕಾಲೀನ (ಕ್ರಿ.ಶ. ೩೦೦-೫೫೦)ಗಳೆಂದು ತಿಳಿಯಲಾಗಿದೆ. ಕ್ರಿ.ಶ. ಹತ್ತನೆಯ ಶತಮಾನದವರೆಗೆ ಇವು ಬೆಳೆಯುತ್ತ ಬಂದಿವೆಯೆಂದು ಪರಿಶೋಧಕರ ಅಭಿಪ್ರಾಯ.

ಈ ಪುರಾಣಗಳಲ್ಲಿ ಸ್ಕಾಂದಪುರಾಣವು ಬಹು ದೊಡ್ಡದು. ಇದರಲ್ಲಿ ೮೧,೧೦೦ ಶ್ಲೋಕಗಳಿವೆ. ಮಾರ್ಕಂಡೇಯಪುರಾಣವು ಬಹಳ ಚಿಕ್ಕದು. ಇದರಲ್ಲಿ ೯೦೦೦ ಶ್ಲೋಕಗಳಿವೆ. ಭವಿಷ್ಯಪುರಾಣದಲ್ಲಿ ಸಿಕ್‌ಮತಸ್ಥಾಪಕನಾದ ಗುರುನಾನಕ್, ಸಿದ್ಧಾಂತಕೌಮುದಿಯನ್ನು ಬರೆದ ಭಟ್ಟೋಜಿದೀಕ್ಷಿತ ಮುಂತಾದ ನವೀನರ ನಾಮೋಲ್ಲೇಖವುಂಟು. ಡಾ। ಹಾಜ್ರ ಅವರು ಪುರಾಣಗಳ ವಿಷಯದಲ್ಲಿ ತುಂಬ ಸಂಶೋಧನೆಯನ್ನು ನಡೆಸಿದ್ದಾರೆ. ಅವರ ಅಭಿಪ್ರಾಯದಂತೆ ಪುರಾಣಗಳಲ್ಲಿ

ಪ್ರಾಚೀನತಮವಾದದ್ದು ವಿಷ್ಣುಪುರಾಣ-ಕ್ರಿ.ಶ. ೪೦೦. ಅನಂತರ ವಾಯುಪುರಾಣ-ಕ್ರಿ.ಶ. ೫೦೦, ಭಾಗವತ-ಕ್ರಿ.ಶ. ೬೦೦-೭೦೦ ಕೂರ್ಮಪುರಾಣದ ಕಾಲ ಕ್ರಿ.ಶ. ೭೦೦. ಬಾಣನ ಹರ್ಷ ಚರಿತೆಯಲ್ಲಿ (ಕ್ರಿ.ಶ. ೬೦೦) ವಾಯುಪುರಾಣದ ಉಲ್ಲೇಖವಿರುವುದು ಗಮನಾರ್ಹ. ಒಟ್ಟಿನಲ್ಲಿ ಡಾ॥ ಹಾಜ್ರ ಅವರ ಅಭಿಪ್ರಾಯದಂತೆ ಕ್ರಿ.ಶ. ಹದಿನಾಲ್ಕನೆಯ ಶತಮಾನದವರೆಗೂ ಸ್ಕಾಂದಾದಿ ಪುರಾಣಗಳಲ್ಲಿ ಹೊಸದಾಗಿ ಬರೆದು ಸೇರಿಸಿರುವ ಕೆಲವು ಆಖ್ಯಾನಗಳು, ಪ್ರಕರಣಗಳು, ಶ್ಲೋಕಗಳು ಇವೆಯೆಂದು ಹೇಳಬೇಕಾಗುವುದು.

ಪುರಾಣಗಳಲ್ಲಿ ಪ್ರತಿಪಾದ್ಯವಾದ ವಿಷಯ: ಪುರಾಣಕ್ಕೆ ಐದು ಮುಖ್ಯ ಲಕ್ಷಣಗಳನ್ನು ಅಮರಸಿಂಹನು ಹೇಳಿದ್ದಾನೆ.

ಸರ್ಗಶ್ಚ ಪ್ರತಿಸರ್ಗಶ್ಚ ವಂಶೋ ಮನ್ವಂತರಾಣಿ ಚ।
ವಂಶಾನುಚರಿತಂ ಚೇತಿ ಪುರಾಣಂ ಪಂಚಲಕ್ಷಣಮ್॥

ಸರ್ಗ = ಜಗತ್ತಿನ ಪ್ರಥಮ ಸೃಷ್ಟಿ. ಪ್ರತಿಸರ್ಗ = ಅವಾಂತರ ಸೃಷ್ಟಿ. ವಂಶ = ದೇವತೆಗಳ ಮತ್ತು ಪಿತೃಗಳ ವಂಶಕ್ರಮ. ಮನ್ವಂತರ = ಸ್ವಾಯಂಭುವಾದಿ ಚತುರ್ದಶ ಮನುಗಳ ಇತಿಹಾಸ. ವಂಶಾನುಚರಿತ = ಸೂರ್ಯ ಮತ್ತು ಚಂದ್ರರ ವಂಶಾವಳಿ.

ಈ ರೀತಿಯಲ್ಲಿ ಪುರಾಣಲಕ್ಷಣವಿದ್ದರೂ ಸಾಮಾನ್ಯವಾಗಿ ಈ ಎಲ್ಲ ಲಕ್ಷಣಗಳು ಪುರಾಣಗಳಲ್ಲಿ ಕಂಡುಬರುವುದಿಲ್ಲ. ಇದಕ್ಕೆ ವಿನಾಯಿತಿ ಎಂದರೆ ವಿಷ್ಣುಪುರಾಣವೊಂದೇ. ವಿಷ್ಣುಪುರಾಣದಲ್ಲಿ ಈ ಎಲ್ಲ ಲಕ್ಷಣಗಳಿಗೂ ಸಮನ್ವಯವಿರುವುದರಿಂದ ಇದಕ್ಕೆ ಪ್ರಾಧಾನ್ಯವನ್ನು ಕೊಡುವುದು ಯುಕ್ತವೇ ಆಗಿದೆ. ಈ ವಿಷಯಗಳಿಗೆ ಹೊರತಾಗಿ ಧರ್ಮಶಾಸ್ತ್ರ, ವೇದಾಂತ, ಯೋಗ, ಸಾಂಖ್ಯ, ಜ್ಯೌತಿಷ, ವೈದ್ಯ, ವ್ಯಾಕರಣ, ಧನುರ್ವೇದ, ಸಂಗೀತ, ಶಿಲ್ಪ, ಅಲಂಕಾರ-ಮುಂತಾದ ವಿಷಯಗಳೂ ಸಹ ಪುರಾಣಗಳಲ್ಲಿ ಕಂಡುಬರುತ್ತವೆ. ಮತೀಯ ದೃಷ್ಟಿಯೇ ಕೆಲವು ಪುರಾಣಗಳಲ್ಲಿ ಕಂಡುಬರುತ್ತದೆ. ಶೈವ-ವೈಷ್ಣವ ಮತಗಳ ಸ್ಪರ್ಧೆ ಇಲ್ಲಿ ಗೋಚರವಾಗುತ್ತದೆ. ಒಬ್ಬ ದೇವತೆಯನ್ನು ಹೊಗಳಿ ಇನ್ನೊಬ್ಬ ದೇವತೆಯನ್ನು ತೆಗಳುವ ಪ್ರಸಂಗಗಳು ಉಂಟು. ಸಂಕುಚಿತ ಭಾವನೆಗಳನ್ನು ಪ್ರದರ್ಶಿಸುವ ಮತೀಯ ಅಂಶಗಳು ಬೇರೆ ಬೇರೆ ಕಾಲದಲ್ಲಿ ಆಸಕ್ತರಿಂದ ಪ್ರಕ್ಷಿಪ್ತವಾಗಿವೆ. ಪುರಾಣಗಳನ್ನು ವ್ಯಾಸಂಗ ಮಾಡತಕ್ಕವರು ಇಂತಹ ವಿಚಾರಗಳಲ್ಲಿ ಎಚ್ಚರಿಕೆಯಿಂದಿರುವುದು ಆವಶ್ಯಕ.

ಪುರಾಣಗಳ ಕರ್ತೃತ್ವ ಮತ್ತು ಕಾಲ: ಅಷ್ಟಾದಶ ಪುರಾಣಗಳ ಶ್ಲೋಕಸಂಖ್ಯೆ ಸುಮಾರು ನಾಲ್ಕು ಲಕ್ಷವಾಗುತ್ತದೆ. ಇಷ್ಟೊಂದು ಬೃಹತ್ ಪ್ರಮಾಣದ ಗ್ರಂಥರಾಶಿಯನ್ನು

ಬರೆದವರು ಯಾರು-ಎಂಬ ಪ್ರಶ್ನೆ ಹುಟ್ಟುವುದು ಸಹಜ. "ಅಷ್ಟಾದಶಪುರಾಣಾನಾಂ ಕರ್ತಾ ಸತ್ಯವತೀಸುತಃ" ಎಂದು ಸಂಪ್ರದಾಯ ಹೇಳುತ್ತದೆ. ಪದ್ಮಪುರಾಣದಲ್ಲಿ-

> **ನಿಸ್ತಾರಾಯ ತು ಲೋಕಾನಾಂ ಸ್ವಯಂ ನಾರಾಯಣಃ ಪ್ರಭುಃ।**
> **ವ್ಯಾಸರೂಪೇಣ ಕೃತವಾನ್ ಪುರಾಣಾನಿ ಮಹೀತಲೇ॥**

ಎಂದು ಹೇಳಿದೆ. ಇದರ ಪ್ರಕಾರ ದ್ವೈಪಾಯನ ವೇದವ್ಯಾಸರು ಹದಿನೆಂಟು ಪುರಾಣಗಳನ್ನು ರಚಿಸಿದ್ದಾರೆ ಎಂದು ಹೇಳಬೇಕಾಗಿದೆ. ಆದರೆ ಪರಿಶೋಧಕರಾದ ಪ್ರಾಚ್ಯ ಮತ್ತು ಪಾಶ್ಚಾತ್ಯ ವಿದ್ವಾಂಸರ ಅಭಿಪ್ರಾಯಗಳನ್ನು ತೂಗಿ ನೋಡಿದ ಬಂಗಾಳದ ಶ್ರೀ ಬಂಕಿಂಚಂದ್ರ ಚಟ್ಟೋಪಾಧ್ಯಾಯರು 'ಶ್ರೀಕೃಷ್ಣಚರಿತ್ರೆ' ಎಂಬ ತಮ್ಮ ಗ್ರಂಥದಲ್ಲಿ* (*ಶ್ರೀಕೃಷ್ಣ ಚರಿತ್ರೆಯ ಕನ್ನಡ ಪರಿವರ್ತನೆ: ಶ್ರೀ ಆರ್. ವ್ಯಾಸರಾವ್, ೧೪, ೧೫ ಪರಿಚ್ಛೇದಗಳು.) ಮನನೀಯವಾದ ಕೆಲವು ಅಂಶಗಳನ್ನು ತಿಳಿಸಿದ್ದಾರೆ. ಅದರ ಸಾರವನ್ನು ಹೀಗೆ ಸಂಗ್ರಹಿಸಬಹುದು-"ಹದಿನೆಂಟು ಪುರಾಣಗಳನ್ನು ಪರೀಕ್ಷಿಸಿದಾಗ ಅನೇಕ ಶ್ಲೋಕಗಳು ಎಲ್ಲವುಗಳಲ್ಲಿಯೂ ಒಂದೇ ಆಗಿವೆ. ಕೆಲವೆಡೆಗಳಲ್ಲಿ ಕೊಂಚ ಪಾಠಾಂತರವುಂಟು. ಬ್ರಹ್ಮಪುರಾಣದ ಉತ್ತರ ಭಾಗದಲ್ಲಿ ಶ್ರೀಕೃಷ್ಣಚರಿತ್ರೆ ವಿಸ್ತಾರವಾಗಿ ಬಂದಿದೆ. ವಿಷ್ಣುಪುರಾಣದ ಐದನೆಯ ಅಂಶದಲ್ಲೂ ಇದೇ ಚರಿತ್ರೆ ಇದೆ. ಎರಡಕ್ಕೂ ಏನೂ ವ್ಯತ್ಯಾಸವಿಲ್ಲ. ಅಕ್ಷರಕ್ಷರವೂ ಒಂದೇ. ವಿಷ್ಣುಪುರಾಣದ ಐದನೆಯ ಅಂಶದಲ್ಲಿರುವ ಇಪ್ಪತ್ತೆಂಟು ಅಧ್ಯಾಯಗಳಲ್ಲಿರುವ ಎಲ್ಲ ಶ್ಲೋಕಗಳೂ ಬ್ರಹ್ಮಪುರಾಣದಲ್ಲಿ ಕಂಡುಬರುತ್ತವೆ. ಇವೆರಡು ಪುರಾಣಗಳ ಕರ್ತೃ ಒಬ್ಬನೇ ಆಗಿದ್ದರೆ, ಇಷ್ಟು ವಿಸ್ತಾರವಾದ ಪುನರುಕ್ತಿ ಬರಲು ಸಾಧ್ಯವಿಲ್ಲ. ಅಲ್ಲದೆ, ಒಬ್ಬ ಗ್ರಂಥಕಾರನ ಭಾಷಾಶೈಲಿ ಅತ್ಯಂತಭಿನ್ನವಾಗಿರುವುದು ಸಾಧ್ಯವಿಲ್ಲ. ವಿಷ್ಣುಪುರಾಣ ಮತ್ತು ಭಾಗವತಪುರಾಣಗಳ ಶೈಲಿಯು ಅನ್ಯೋನ್ಯವಾಗಿ ಯಾವ ಸಂಬಂಧವೂ ಇಲ್ಲದಷ್ಟು ವಿಭಿನ್ನವಾಗಿದೆ. ಇವೆರಡು ಗ್ರಂಥಗಳನ್ನು ಓದಿದವರಿಗೆ ಕರ್ತೃ ಒಬ್ಬನೇ ಅಲ್ಲವೆಂಬುದು ಸ್ಪಷ್ಟವಾಗಿ ತಿಳಿದುಬರುತ್ತದೆ. ಮತ್ತು ಒಬ್ಬನು ಒಂದೇ ವಿಷಯವನ್ನು ಕುರಿತು ಹಲವು ಗ್ರಂಥಗಳನ್ನು ಬರೆಯುವುದಿಲ್ಲ. ಒಂದೇ ವಿಷಯವನ್ನು ತಿರುತಿರುಗಿ ಬರೆದು ವರ್ಣಿಸುವುದಕ್ಕಾಗಲಿ, ವಿಸ್ತರಿಸುವುದಕ್ಕಾಗಲಿ, ಪ್ರಯತ್ನಿಸುವುದಿಲ್ಲ. ಅಷ್ಟಾದಶ ಪುರಾಣಗಳಲ್ಲಾದರೂ ಒಂದೇ ಕಥೆ, ಒಂದೇ ಶಾಸ್ತ್ರವಿಚಾರ-ಇವು ಮತ್ತೆ ಮತ್ತೆ ಪುನರುಕ್ತವಾಗಿರುವುದನ್ನು ಕಾಣಬಹುದು. ಇದಕ್ಕೆ ಶ್ರೀಕೃಷ್ಣಚರಿತ್ರೆಯೇ ಒಂದು ಉದಾಹರಣೆ ಯಾಗಿದೆ. ಇದು ಬ್ರಹ್ಮ ಪುರಾಣದ ಪೂರ್ವಭಾಗದಲ್ಲಿಯೂ ವಿಷ್ಣು ಪುರಾಣದ ಐದನೆಯ ಅಂಶದಲ್ಲಿಯೂ ವಾಯುಪುರಾಣದಲ್ಲಿಯೂ ಶ್ರೀಮದ್ಭಾಗವತದ ಹತ್ತನೆಯ ಸ್ಕಂಧದಲ್ಲಿಯೂ ಬ್ರಹ್ಮವೈವರ್ತಪುರಾಣದ ಮೂರನೆಯ ಖಂಡದಲ್ಲಿಯೂ

ಮತ್ತೆ ಪದ್ಮಪುರಾಣ, ವಾಮನಪುರಾಣ ಮತ್ತು ಕೂರ್ಮಪುರಾಣಗಳಲ್ಲಿಯೂ ಬಂದಿದೆ. ಇದೇ ರೀತಿ ಹಲವಾರು ವಿಷಯಗಳು ವಿಸ್ತಾರವಾಗಿ ಪುನರುಕ್ತವಾಗಿರುವುದನ್ನು ಕಾಣಬಹುದು. ಅಲ್ಲದೆ, ಇನ್ನೊಂದು ಗಮನಾರ್ಹವಾದ ವಿಚಾರವುಂಟು. ಈ ಹದಿನೆಂಟು ಪುರಾಣಗಳನ್ನು ಒಬ್ಬನೇ ಬರೆದಿದ್ದರೆ ಇವುಗಳೊಳಗೆ ಬಲವಾದ ಪರಸ್ಪರ ವಿರೋಧಾಂಶಗಳು ಇರುತ್ತಿರಲಿಲ್ಲ. ಅಷ್ಟಾದಶ ಪುರಾಣಗಳಲ್ಲಾದರೋ ಪರಸ್ಪರ ವಿರುದ್ಧವಾದ ಕೆಲವು ವಿಚಾರಗಳು ಬಂದಿವೆ. ಹರಿವಂಶದಲ್ಲಿಯೂ ಶ್ರೀಕೃಷ್ಣಚರಿತ್ರೆಯು ವಿಸ್ತಾರವಾಗಿದೆ."

ವಿಷ್ಣುಪುರಾಣದಲ್ಲಿ ಹೀಗಿರುವುದು: "ಪುರಾಣಾರ್ಥ ವಿಶಾರದರಾದ ವ್ಯಾಸರು ಆಖ್ಯಾನ, ಉಪಾಖ್ಯಾನ, ಗಾಥಾ, ಕಲ್ಪಶುದ್ಧಿ–ಇವುಗಳಿಂದ ಸಹಿತವಾದ ಪುರಾಣಸಂಹಿತೆಯುನ್ನು ರಚಿಸಿದರು. ಅದನ್ನು ತಮ್ಮ ಶಿಷ್ಯನಾದ ಸೂತ ರೋಮಹರ್ಷಣನಿಗೆ ಉಪದೇಶಿಸಿದರು. ರೋಮಹರ್ಷಣನು ತನ್ನ ಶಿಷ್ಯರಾದ ಸುಮತಿ, ಅಗ್ನಿವರ್ಚ, ಮಿತ್ರಾಯು, ಶಾಂಸಪಾಯನ, ಅಕೃತವ್ರಣ ಮತ್ತು ಸಾವರ್ಣಿ ಎಂಬ ಆರು ಮಂದಿಗೆ ಇದನ್ನು ಕಲಿಸಿದನು. ಅವರಲ್ಲಿ ಕಾಶ್ಯಪ ಗೋತ್ರದವನಾದ ಅಕೃತವ್ರಣ, ಸಾವರ್ಣಿ ಮತ್ತು ಶಾಂಸಪಾಯನ ಈ ಮೂವರೂ ಸಂಹಿತಾ ಕರ್ತರಾದರು. ಈ ಮೂರು ಸಂಹಿತೆಗಳಿಗೆ ಮೂಲಭೂತವಾದದ್ದು ರೋಮಹರ್ಷಣನ ಸಂಹಿತೆ. ಒಟ್ಟು ಈ ನಾಲ್ಕು ಸಂಹಿತೆಗಳ ಆಧಾರದಿಂದ ಹದಿನೆಂಟು ಪುರಾಣಗಳು ರಚಿತವಾದವು. ಇವುಗಳಲ್ಲದೆ ಮುನಿಗಳು ಉಪಪುರಾಣಗಳನ್ನು ರಚಿಸಿದರು." (ಅಂಶ ೩, ಅಧ್ಯಾಯ ೬, ಶ್ಲೋಕ ೧೫–೨೬)

ಹೀಗೆ ರೋಮಹರ್ಷಣನ ಶಿಷ್ಯರಿಂದ ಮುಂದಕ್ಕೆ ಹದಿನೆಂಟು ಪುರಾಣಗಳು ರಚಿತವಾದವೆಂದು ಗೊತ್ತಾಗುತ್ತದೆ. ಇವುಗಳಲ್ಲಿ ವಿಷ್ಣು ಪುರಾಣವೂ ಒಂದು. ಇದನ್ನು ವ್ಯಾಸರ ತಂದೆ ಪರಾಶರರು ಮೈತ್ರೇಯನಿಗೆ ಹೇಳಿದರೆಂದು ವಿಷ್ಣುಪುರಾಣದಲ್ಲಿ ಸ್ಪಷ್ಟವಾಗಿದೆ! ಶ್ರೀಮದ್ಭಾಗವತದಲ್ಲಿ ತ್ರೈಯಾರುಣಿ, ಕಶ್ಯಪ, ಸಾವರ್ಣಿ, ಅಕೃತವ್ರಣ, ಶಾಂಸಪಾಯನ, ಹಾರೀತ ಈ ಆರು ಮಂದಿ ವ್ಯಾಸಶಿಷ್ಯನಾದ ರೋಮಹರ್ಷಣನಿಂದ ಮೂಲ ಸಂಹಿತೆಗಳನ್ನು ಅಧ್ಯಯನ ಮಾಡಿದರೆಂದು ಹೇಳಿದೆ (ಸ್ಕಂಧ ೧೨, ಅಧ್ಯಾಯ ೭, ಶ್ಲೋಕ ೪–೬). ಆದರೆ ವ್ಯಾಸಪುತ್ರರಾದ ಶುಕಮುನಿಗಳು ಪರೀಕ್ಷಿತ ರಾಜನಿಗೆ ಭಾಗವತವನ್ನು ಶ್ರವಣ ಮಾಡಿಸಿದರೆಂದು ಆ ಗ್ರಂಥದಲ್ಲಿಯೇ ಹೇಳಿದೆ. ಈ ಪುರಾಣಸಂಹಿತಾಕ್ರಮವು ವಾಯುಪುರಾಣ, ಅಗ್ನಿಪುರಾಣ ಗಳಲ್ಲಿಯೂ ಬಂದಿದೆ. ಶಿಷ್ಯರ ಹೆಸರುಗಳಲ್ಲಿ ಸ್ವಲ್ಪ ಬದಲಾವಣೆ ಯಿದ್ದರೂ ಅಭಿಪ್ರಾಯವೊಂದೇ. ಈ

ವಿಚಾರಗಳಿಂದ ಮಥಿತ ವಾಗುವುದೇನೆಂದರೆ ವ್ಯಾಸರು ಒಂದು ಪುರಾಣಸಂಹಿತೆಯನ್ನು ಮಾತ್ರ ರಚಿಸಿರಬೇಕು. ಅನಂತರ ಶಿಷ್ಯಪ್ರಶಿಷ್ಯರ ಮೂಲಕ ಅದು ಬೆಳೆದು ಅಷ್ಟಾದಶ ಪುರಾಣಗಳ ರೂಪವನ್ನು ಪಡೆದಿರಬೇಕು. ವ್ಯಾಸರ ಮೂಲ ಸಂಹಿತೆಯಲ್ಲಿದ್ದ ಒಂದೊಂದು ವಿಷಯವನ್ನೂ ಈ ಶಿಷ್ಯಪ್ರಶಿಷ್ಯರು ಬಹುಮುಖವಾಗಿ ವಿಸ್ತರಿಸಿರಬೇಕು. ಈ ಮಾತನ್ನು ಒಪ್ಪಿಕೊಳ್ಳು ವುದಾದರೆ ಅಷ್ಟಾದಶ ಪುರಾಣಗಳಿಗೂ ವ್ಯಾಸರು ಕರ್ತರೆಂಬ ಸಂಪ್ರದಾಯದ ಹೇಳಿಕೆ ಒಂದು ರೀತಿಯಲ್ಲಿ ಸಂಗತವಾಗುತ್ತದೆ. ನಾನಾ ಪುರಾಣಗಳನ್ನಾಗಿ ವಿಸ್ತರಿಸಿದ ಶಿಷ್ಯಪ್ರಶಿಷ್ಯರು ಭಿನ್ನದೇಶದವರೂ ಭಿನ್ನಕಾಲದವರೂ ಆದ್ದರಿಂದ ಒಂದೇ ವಿಷಯವು ಪುನರುಕ್ತ ವಾಯಿತೆಂಬ ದೋಷವು ಪರಿಹೃತವಾಗುತ್ತದೆ. ಅಲ್ಲದೆ, ವ್ಯಾಸರಿಗೆ ಪುರಾಣಸಾಮಗ್ರಿ ಹಿಂದಿನಿಂದ ಪರಂಪರೆಯಾಗಿ ಬಂದದ್ದು, ಅಥರ್ವವೇದ ಮತ್ತು ಶತಪಥಬ್ರಾಹ್ಮಣದಲ್ಲಿ ಪುರಾಣಶಬ್ದ ಪ್ರಯೋಗವಿರುವುದನ್ನು ಹಿಂದೆಯೇ ತೋರಿಸಿಕೊಡಲಾಗಿದೆ. ಹೀಗೆ ಅತಿಪ್ರಾಚೀನವಾದ ಪುರಾಣ ಸಾಮಗ್ರಿಯನ್ನು ಹಿಡಿದು ವ್ಯಾಸರು ಒಂದು ಮೂಲ ಸಂಹಿತೆಯನ್ನು ಗ್ರಂಥರೂಪದಲ್ಲಿ ನಿರ್ಮಿಸಿದ್ದರೆಂಬುದು ಯುಕ್ತವಾಗಿದೆ. ಅನಂತರ ಅಷ್ಟಾದಶ ಮಹಾಪುರಾಣಗಳು ಉಪಪುರಾಣಗಳು ಕಾಲಕ್ರಮದಲ್ಲಿ ವ್ಯಾಸರಚಿತ ಮೂಲಸಂಹಿತೆಯ ಆಧಾರದಿಂದ ರಚಿತವಾದವು ಎಂದು ಹೇಳುವುದೇ ಸಂಗತವೆಂದು ನಮಗೆ ತೋರುತ್ತದೆ. ಇಷ್ಟು ಮಾತ್ರದಿಂದ ಈಗ ಉಪಲಬ್ಧವಾಗಿರುವ ಗ್ರಂಥರಾಶಿಯೆಲ್ಲವೂ ಪ್ರಾಚೀನ ಮುನಿ ಪ್ರಣೀತವೆಂದೇ ತಿಳಿಯಬಾರದು. ಮಧ್ಯಯುಗದಲ್ಲಿ ಶೈವ, ವೈಷ್ಣವ ಪಂಥಗಳು ಪರಸ್ಪರ ವೈಷಮ್ಯದಿಂದ ಸೆಣಸುತ್ತಿದ್ದಾಗ ಅಪ್ರಾಮಾಣಿಕರಾದ ಕೆಲವು ಜನರು ತಮಗೆ ತೋಚಿದಂತೆ ಶ್ಲೋಕಗಳನ್ನು ರಚಿಸಿ ಈ ಪುರಾಣಗಳಲ್ಲಿ ಅಲ್ಲಲ್ಲಿ ತೂರಿಸಿದ್ದಾರೆ. ಮುದ್ರಣ ಸೌಕರ್ಯವಿಲ್ಲದ ಆ ಕಾಲದಲ್ಲಿ ಹೀಗೆ ಪ್ರಕ್ಷೇಪಮಾಡುವುದೇನೂ ಕಷ್ಟವಾಗಿರಲಿಲ್ಲ. ಆದ್ದರಿಂದಲೇ ಈ ಪುರಾಣಗಳಲ್ಲಿ ಪರಸ್ಪರ ವಿರುದ್ಧವಾದ ಅಂಶಗಳು ಕಾಣುತ್ತವೆ–ಎಂಬ ಆಕ್ಷೇಪಕ್ಕೆ ಸಮಂಜಸವಾದ ಉತ್ತರ ದೊರೆಯುತ್ತದೆ.

ಮೇಲ್ಕಂಡಂತೆ ರಚಿತವಾದ ಪುರಾಣಗಳಿಗೆ ಸೂಕ್ತವಾದ ಉಪೋದ್ಘಾತ ಉಪಸಂಹಾರಗಳನ್ನು ಬರೆದು ಆಮೇಲೆ ಸೇರಿಸಿರಬೇಕು. ಇವನ್ನು ಆಯಾ ಪುರಾಣಕರ್ತರೇ ಬರೆದರೋ ಅಥವಾ ಅನ್ಯರು ಬರೆದರೋ ಎಂಬುದನ್ನು ನಿರ್ಧರಿಸಲಾಗುವುದಿಲ್ಲ. ವ್ಯಾಸರು ಬರೆದ ವಿಷ್ಣುಪುರಾಣವನ್ನು ವ್ಯಾಸರ ತಂದೆ ಪರಾಶರರು ಹೇಳಿದ್ದು ಹೇಗೆ ಎಂಬ ಪ್ರಶ್ನೆಗೆ ಈಗ ಉಪಪತ್ತಿ ದೊರೆಯುತ್ತದೆ. ಇದೇ ರೀತಿ ಅನ್ಯಪುರಾಣಗಳಲ್ಲಿಯೂ ಉಪಪತ್ತಿಯನ್ನು ಊಹಿಸಿಕೊಳ್ಳಬೇಕು. ಈ ಪರಿಸ್ಥಿತಿ

ಇತಿಹಾಸಗಳಾದ ರಾಮಾಯಣ ಮಹಾಭಾರತಗಳಿಗೂ ತಪ್ಪಿದ್ದಲ್ಲ. ಮಹಾಭಾರತವನ್ನು ವ್ಯಾಸರೇ ರಚಿಸಿದರೆಂದು ಒಪ್ಪೋಣ. ವ್ಯಾಸರು ತಮ್ಮ ಶಿಷ್ಯ ರೋಮಹರ್ಷಣನಿಗೆ ಬೋಧಿಸಿದರೆಂದೂ, ರೋಮಹರ್ಷಣನು ತನ್ನ ಮಗನಾದ ಉಗ್ರಶ್ರವನಿಗೆ ಉಪದೇಶಿಸಿದನೆಂದೂ ಆತನು ಶೌನಕಾದಿಗಳಿಗೆ ಮಹಾಭಾರತವನ್ನು ಶ್ರವಣ ಮಾಡಿಸಿದನೆಂದೂ ಆ ಗ್ರಂಥದಲ್ಲಿಯೇ ಹೇಳಿದೆ. ವ್ಯಾಸರು ಉಗ್ರಶ್ರವನ ವಿಷಯನ್ನು ಬರೆಯಲು ಕಾರಣವೇ ಇಲ್ಲ. ಆದ್ದರಿಂದ ಈ ಉಪೋದ್ಘಾತವು ಅನ್ಯ ರಚಿತವೆಂಬುದು ಸ್ಪಷ್ಟ.

ಇನ್ನು ಆಧುನಿಕ ವಿದ್ವಾಂಸರು ಈ ಪುರಾಣಗಳಿಗೆ ಬೇರೆ ಬೇರೆ ಕಾಲವನ್ನು ಗೊತ್ತು ಮಾಡಿರುವುದು ಯುಕ್ತವಲ್ಲವೆಂದು ಹೇಳಬೇಕಾಗಿದೆ. ವಿಷ್ಣುಪುರಾಣದ ನಾಲ್ಕನೆಯ ಅಂಶದಲ್ಲಿ ಕಲಿಯುಗದ ರಾಜರ ವಂಶಾವಳಿಯನ್ನು ಹೇಳುವಾಗ ನವನಂದರ ವಿಚಾರವೂ ಬಂದಿದೆ (ಅಧ್ಯಾಯ ೨೪). ಹೀಗೆಯೇ ಅನ್ಯ ಪುರಾಣಗಳಲ್ಲಿ ಇತಿಹಾಸಗೋಚರವಾದ ವಸ್ತು ದೊರೆಯುತ್ತದೆ. ಇವುಗಳ ಆಧಾರದಿಂದ ಇತಿಹಾಸಕಾಲವನ್ನನುಸರಿಸಿ ಪುರಾಣಗಳ ಕಾಲನಿರ್ಣಯಕ್ಕೆ ಈ ವಿದ್ವಾಂಸರು ತೊಡಗುತ್ತಾರೆ. ಸಾಂಪ್ರದಾಯಿಕರು ಈ ಕಾಲನಿರ್ಣಯವನ್ನು ಒಪ್ಪುವುದಿಲ್ಲ. ಋಷಿಗಳು ತಮ್ಮ ದಿವ್ಯಜ್ಞಾನದಿಂದ ಕಲಿಯುಗದಲ್ಲಿ ನಡೆಯುವ ಭವಿಷ್ಯತ್ತನ್ನು ತಿಳಿದು ಹಾಗೆ ಬರೆದಿದ್ದಾರೆ ಎನ್ನುತ್ತಾರೆ. ಆಧುನಿಕರಿಗೆ ಈ ಮಾತು ವಿಶ್ವಸನೀಯವಲ್ಲ. ಭವಿಷ್ಯತ್ತಿನ ಸಂಗತಿ ಮತ್ತು ಇತಿಹಾಸಗೋಚರವಾದ ಅಂಶ ಇದೆಲ್ಲವೂ ಆಯಾ ಕಾಲಗಳಲ್ಲಿ ಪ್ರಕ್ಷಿಪ್ತವಾಗಿ ಸೇರಿಕೊಂಡಿದೆ–ಎಂದು ಹೇಳುವುದೇ ಯುಕ್ತವೆಂದು ತೋರುತ್ತದೆ. ಒಟ್ಟಿನಲ್ಲಿ ಮಥಿತವಾದ ನಿರ್ಣಯ ಇಷ್ಟು–

1. ಪುರಾಣದ ಮೂಲಸಾಮಗ್ರಿ ಅತ್ಯಂತ ಪ್ರಾಚೀನವಾದದ್ದು.
2. ವೇದವ್ಯಾಸರು ಆ ಪುರಾಣಸಾಮಗ್ರಿಯನ್ನು ಸ್ವಲ್ಪ ವಿಸ್ತರಿಸಿ ಒಂದು ಪುರಾಣಸಂಹಿತೆಯನ್ನು ರಚಿಸಿದ್ದರು.
3. ವ್ಯಾಸರಚಿತ ಮೂಲಸಂಹಿತೆಯ ಆಧಾರದಿಂದ ಅವರ ಶಿಷ್ಯ ಪ್ರಶಿಷ್ಯರು ವಿಷಯಭೇದವನ್ನನುಸರಿಸಿ ಹದಿನೆಂಟು ಪುರಾಣ ಗಳನ್ನು ರಚಿಸಿದರು.
4. ಈಗ ಉಪಲಬ್ಧವಿರುವ ಪುರಾಣಗಳಲ್ಲಿ ಪ್ರಕ್ಷಿಪ್ತ ಭಾಗವಿರುವುದು ನಿಜ.
5. "ಮುನಿಗಳು ಉಪಪುರಾಣಗಳನ್ನು ರಚಿಸಿದರು" ಎಂದು ವಿಷ್ಣು ಪುರಾಣದಲ್ಲಿ ಹೇಳಿರುವುದರಿಂದ ಅವನ್ನು ರಚಿಸಿದವರು ಯಾರೋ ಮುನಿಗಳೆಂದು ಹೇಳಬಹುದು. ಆಧುನಿಕರು ಉಪಪುರಾಣಗಳನ್ನು ಬರೆದರೆನ್ನುವುದು ಯುಕ್ತವಲ್ಲ.

6. ಸಾಮಾನ್ಯವಾಗಿ ಎಲ್ಲ ಪುರಾಣಗಳಲ್ಲಿಯೂ ಅಷ್ಟಾದಶ ಪುರಾಣಗಳ ಮತ್ತು ಉಪ ಪುರಾಣಗಳ ಪ್ರಸ್ತಾವವಿದೆ. ಆದ್ದರಿಂದ ಈ ಪ್ರಸ್ತಾವದ ಭಾಗವೂ ಉಪೋದ್ಘಾತವೂ ಬೇರೆ ಯಾರಿಂದಲೋ ಬರೆದು ಸೇರಿಸಲ್ಪಟ್ಟಿವೆ.
7. ಈ ಪುರಾಣಗಳನ್ನು ವಿಸ್ತರಿಸಿದವರು ಪ್ರಾಚೀನ ಮುನಿಗಳೇ ಹೊರತು ನವೀನರಲ್ಲ.
8. ಆಧುನಿಕ ಸಂಶೋಧಕರು ಬೇರೆ ಬೇರೆ ಕಾಲವನ್ನು ಗೊತ್ತುಮಾಡಿ ಪುರಾಣಗಳು ಅರ್ವಾಚೀನವೆನ್ನುತ್ತಾರೆ. ಯಾವ ಪುರಾಣವೂ ಅರ್ವಾಚೀನವಲ್ಲ. ಇವುಗಳ ಕಾಲ ಮಹಾಭಾರತದ ಕಾಲಕ್ಕಿಂತ ಈಚಿನದೆಂದು ಮಾತ್ರ ಹೇಳಬಹುದು.

೨. ವಿಷ್ಣುಪುರಾಣದ ಮಹತ್ತ್ವ

ಶ್ರೀ ವಿಷ್ಣುಪುರಾಣವು ಅನೇಕ ದೃಷ್ಟಿಗಳಿಂದ ಮುಖ್ಯವಾದದ್ದು. ಹಿಂದೆ ಹೇಳಿದಂತೆ ಪುರಾಣದ ಪಂಚಲಕ್ಷಣಗಳು ಇದರಲ್ಲಿ ಸಮನ್ವಿತವಾಗಿವೆ. ಇದರಲ್ಲಿ ಅನ್ಯಪುರಾಣಗಳಲ್ಲಿ ಸಾಮಾನ್ಯವಾಗಿ ಬರುವಂತೆ ವ್ರತಗಳ ವಿಷಯವಿಲ್ಲ. ತೀರ್ಥಕ್ಷೇತ್ರಗಳ ಮಾಹಾತ್ಮ್ಯದ ವಿಸ್ತರಣೆಯಿಲ್ಲ. ವಿಧಿಸಿರುವ ಅನುಷ್ಠಾನಗಳು ವೇದಾನುಸಾರಿಯಾಗಿ ಧರ್ಮಸೂತ್ರಗಳಿಗೆ ಅನುಗುಣವಾಗಿವೆ. ಭಸ್ಮಧಾರಣೆ, ಮುದ್ರೆ, ನಾಮಗಳು ಮುಂತಾದ ಕೇವಲ ಮತೀಯ ಚಿಹ್ನೆಗಳ ವಿಷಯವಾಗಲಿ, ಮತೀಯ ಆಚಾರ ವಿಶೇಷಗಳಾಗಲಿ ಇದರಲ್ಲಿ ಬಂದಿಲ್ಲ. ಯಾವುದೊಂದು ಧಾರ್ಮಿಕ ವಿಚಾರವು ಅತಿ ದೀರ್ಘವಾಗಿ ಉಕ್ತವಾಗಿಲ್ಲ. ಈ ಕಾರಣಗಳಿಂದ ಇದು ಪ್ರಾಮಾಣಿಕವಾಗಿದ್ದು ಹೆಚ್ಚಿನ ಪ್ರಕ್ಷೇಪಗಳಿಗೆ ಅವಕಾಶವನ್ನಿತ್ತಿಲ್ಲವೆನ್ನುವುದು ಗಮನಾರ್ಹವಾದ ಸಂಗತಿಯಾಗಿರುತ್ತದೆ. ಮೂರನೇ ಅಂಶದಲ್ಲಿ ಶ್ರಾದ್ಧವಿಷಯವು ವಿಸ್ತಾರವಾಗಿರುವುದು ನಿಜ. ಉಳಿದ ವಿಚಾರಗಳಿಗೆ ಹೋಲಿಸಿದಾಗ ಈ ಶ್ರಾದ್ಧಪ್ರಶಂಸಾದಿಗಳು ಮಿತಿಯನ್ನು ಮೀರಿ ಅನನುರೂಪವಾಗಿರುವುದು ಅಚ್ಚರಿಯೆನಿಸುತ್ತದೆ. ಈ ಭಾಗದಲ್ಲಿ ಬಹ್ವಂಶಗಳು ಪ್ರಕ್ಷಿಪ್ತವಾಗಿರಲೂಬಹುದು.

ವಿಷ್ಣುಪುರಾಣದ ಭಾಷಾಶೈಲಿ ಲಲಿತವಾಗಿದೆ. ಅಲ್ಲಲ್ಲಿ ಬರುವ ಗದ್ಯ ವಾಕ್ಯಗಳು ರಮಣೀಯವಾಗಿವೆ. ಆರ್ಷಪ್ರಯೋಗಗಳು ಬಹಳ ಪರಿಮಿತವಾಗಿರುವುದು ಈ ಪುರಾಣದ ಮತ್ತೊಂದು ವೈಶಿಷ್ಟ್ಯ. ಪೌರಾಣಿಕವಾದ ಯಾವ ಆಖ್ಯಾನವನ್ನೂ ಅತಿಯಾಗಿ ಬೆಳೆಸಿಲ್ಲ. ಧ್ರುವಚರಿತ್ರೆ ಮತ್ತು ಪ್ರಹ್ಲಾದಚರಿತ್ರೆಗಳು ಉತ್ತಮಕಾವ್ಯದಂತೆ ರಮಣೀಯವಾಗಿವೆ. ಹಾಗೆಯೇ ಪಂಚಮ ಅಂಶದಲ್ಲಿ ಬರುವ ಶ್ರೀಕೃಷ್ಣನ ಚರಿತ್ರೆಯು ಒಂದು ಉತ್ತಮಕಾವ್ಯವೆನ್ನಲಡ್ಡಿಯಿಲ್ಲ.

ಪರಾಶರಮುನಿಗಳು ತಮ್ಮ ಶಿಷ್ಯರಾದ ಮೈತ್ರೇಯರಿಗೆ ಈ ಪುರಾಣವನ್ನು

ಹೇಳಿದ್ದಾರೆ. ಇದರಲ್ಲಿ ಆರು ಅಂಶಗಳಿದ್ದು ಒಂದೊಂದು ಅಂಶವು ಹಲವಾರು ಅಧ್ಯಾಯಗಳಿಂದ ಕೂಡಿದೆ. ವಿಷ್ಣುಪುರಾಣ ದಲ್ಲಿರುವ ಒಟ್ಟು ಶ್ಲೋಕಗಳ ಸಂಖ್ಯೆ ಸುಮಾರು ಇಪ್ಪತ್ತಮೂರು ಸಾವಿರ ಆಗಬಹುದು. ಈ ಪುರಾಣಕ್ಕೆ ಶ್ರೀಧರಸ್ವಾಮಿಗಳು ಆತ್ಮಪ್ರಕಾಶ ಎಂಬ ವ್ಯಾಖ್ಯಾನವನ್ನು ಬರೆದಿದ್ದಾರೆ. ಇವರು ಶ್ರೀಮದ್ಭಾಗವತಕ್ಕೂ ಭಗವದ್ಗೀತೆಗೂ ವ್ಯಾಖ್ಯಾನವನ್ನು ಬರೆದ ಸುಪ್ರಸಿದ್ಧವಿದ್ವಾಂಸರು. ಭಕ್ತಿಮಾರ್ಗದಲ್ಲಿ ಇವರಿಗೆ ಅಪಾರವಾದ ಆಸಕ್ತಿ ಇದೆ. ಶ್ರೀಧರ ಸ್ವಾಮಿಗಳ ಕಾಲ ನಿಶ್ಚಿತವಾಗಿ ತಿಳಿದುಬಂದಿಲ್ಲ. ಬಹುಶಃ ಕ್ರಿ.ಶ. ಹದಿನಾರನೆಯ ಶತಮಾನವಿರಬಹುದು. ಇವರು ಚಿತ್‌ಸುಖಯೋನಿ ಮುಂತಾದ ಕೆಲವು ಪ್ರಾಚೀನ ವ್ಯಾಖ್ಯಾನಕಾರರನ್ನು ಸ್ಮರಿಸಿದ್ದಾರೆ. ವಿಷ್ಣುಚಿತ್ತೀಯ ಎಂಬ ಇನ್ನೊಂದು ವ್ಯಾಖ್ಯಾನವೂ ದೊರಕುತ್ತದೆ. ಇದರ ಕರ್ತೃವಿನ ಹೆಸರು ತಿಳಿಯದು. ವ್ಯಾಖ್ಯಾನದ ಆರಂಭದಲ್ಲಿ ಶ್ರೀವಿಷ್ಣುಚಿತ್ತಯತಿಗಳ ಸ್ತುತಿಯಿರುವುದರಿಂದ ಅವರ ಶಿಷ್ಯರಾದ ಯಾರೋ ತಮ್ಮ ಗುರುಗಳ ಸ್ಮರಣೆಗಾಗಿ ವಿಷ್ಣುಚಿತ್ತೀಯ ಎಂದು ಹೆಸರಿಟ್ಟು ಈ ವ್ಯಾಖ್ಯಾನವನ್ನು ಬರೆದಿರುವುದಾಗಿ ತೋರುತ್ತದೆ. ಅಲ್ಲದೆ ರತ್ನಗರ್ಭ ಎಂಬವರು ವೈಷ್ಣವಾಕೂತಚಂದ್ರಿಕಾ ಎಂಬ ಟೀಕೆಯನ್ನು ರಚಿಸಿದ್ದಾರೆ. ಹೀಗೆ ಅನೇಕ ವ್ಯಾಖ್ಯಾನಗಳಿರುವುದೇ ವಿಷ್ಣುಪುರಾಣದ ಪ್ರಾಶಸ್ತ್ಯವನ್ನು ಎತ್ತಿ ತೋರಿಸುತ್ತದೆ.

ವಿಷ್ಣುಪುರಾಣದಲ್ಲಿ ಪ್ರತಿಪಾದಿತವಾಗಿರುವ ವಿಷಯುಗಳನ್ನು ಹೀಗೆ ಸಂಗ್ರಹಿಸಬಹುದು:

ಪ್ರಥಮಾಂಶ – ಇಪ್ಪತ್ತುನಾಲ್ಕು ತತ್ತ್ವಗಳ ವಿಚಾರಪೂರ್ವಕವಾಗಿ ಜಗತ್ತಿನ ಉತ್ಪತ್ತಿ; ಪ್ರಜಾಪತಿಗಳು, ದೇವತೆಗಳು, ಪಿತೃಗಣಗಳು ಇತ್ಯಾದಿಗಳ ಸೃಷ್ಟಿಕ್ರಮ. ಧ್ರುವಚರಿತ್ರೆ; ಪ್ರಹ್ಲಾದಚರಿತ್ರೆ; ಮರುದ್‌ಗಣಗಳ ಉತ್ಪತ್ತಿ; ವಿಷ್ಣುವಿನ ಮಹಿಮೆ.

ದ್ವಿತೀಯಾಂಶ – ಭೂಗೋಳದ ವಿವರಣೆ; ನವಖಂಡಗಳ ವಿಭಾಗ; ಅಧೋಲೋಕ ಮತ್ತು ಊರ್ಧ್ವಲೋಕಗಳು; ಜ್ಯೋತಿಶ್ಚಕ್ರ ಮತ್ತು ನವಗ್ರಹಗಳ ವರ್ಣನೆ; ಜಡಭರತ, ಋಭು–ನಿದಾಘರ ಆಖ್ಯಾನ.

ತೃತೀಯಾಂಶ – ಮನುಪುತ್ರರ ವರ್ಣನೆ; ಚತುರ್ಯುಗಾನುಸಾರ ಭಿನ್ನ ಭಿನ್ನ ವ್ಯಾಸರು; ಚತುರ್ವೇದಗಳ ವಿಭಾಗ; ಚಾತುರ್ವರ್ಣ್ಯಧರ್ಮ; ಬ್ರಹ್ಮಚರ್ಯ ಮತ್ತು ಗಾರ್ಹಸ್ಥ್ಯದ ಆಚಾರಗಳು, ವಿಸ್ತೃತವಾದ ಶ್ರಾದ್ಧವಿಧಿ.

ಚತುರ್ಥಾಂಶ – ವೈವಸ್ವತಮನುವಿನ ವಂಶ; ಇಕ್ಷ್ವಾಕುವಂಶ; ಶ್ರೀರಾಮನ ಸಂಕ್ಷಿಪ್ತ ಕಥೆ; ಸೋಮವಂಶ, ಯದುವಂಶವರ್ಣನೆ; ಕುರುವಂಶ; ಭವಿಷ್ಯತ್ತಿನಲ್ಲಿ ಆಳುವ ರಾಜರು; ಮಗಧವಂಶ; ಕಲಿಯುಗದ ರಾಜರು ಮತ್ತು ಕಲಿಧರ್ಮ.

ಪಂಚಮಾಂಶ – ವಿಸ್ತಾರವಾಗಿ ಶ್ರೀಕೃಷ್ಣಚರಿತ್ರೆ; ಯಾದವರ ಅಂತ್ಯ; ಪರೀಕ್ಷಿತರಾಜನ ಪಟ್ಟಾಭಿಷೇಕ; ಪಾಂಡವರ ಸ್ವರ್ಗಾರೋಹಣ.

ಷಷ್ಠಾಂಶ – ಕಲಿಧರ್ಮನಿರೂಪಣ; ಶೂದ್ರ ಮತ್ತು ಸ್ತ್ರೀಯರ ಮಹತ್ತ್ವ; ಕಾಲವಿಚಾರ; ನೈಮಿತ್ತಿಕಪ್ರಳಯ; ಪ್ರಾಕೃತಪ್ರಳಯ; ಭಗವಂತನ ಪಾರಮಾರ್ಥಿಕಸ್ವರೂಪ; ಬ್ರಹ್ಮಯೋಗ; ಶಿಷ್ಯಪರಂಪರೆ; ಉಪಸಂಹಾರ.

ಈ ವಿಷ್ಣುಪುರಾಣವು ವೇದಸಂಮತವಾದದ್ದೆಂದು ಪರಾಶರರು ಹೇಳಿದ್ದಾರೆ. 'ಏತತ್ತೇ ಯನ್ಮಯಾಖ್ಯಾತಂ ಪುರಾಣಂ ವೇದಸಂಮತಮ್' (೬–೮–೧೨). ಇದರಿಂದ ವೇದಪ್ರತಿಪಾದಿತವಾದ ವಿಷಯವೇ ಈ ಪುರಾಣದಲ್ಲಿ ಬಂದಿದೆ ಎಂದು ಗೊತ್ತಾಗುತ್ತದೆ. ಉದಾಹರಣೆಗೆ, 'ನಾಹೋ ನ ರಾತ್ರಿರ್ನನಭೋ ನ ಭೂಮಿಃ ನಾಸೀತ್ತಮೋ ಜ್ಯೋತಿರಭೂಚ್ಚ ನಾನ್ಯತ್' (೧–೨–೨೩). ಈ ಶ್ಲೋಕವು ಋಗ್ವೇದದಲ್ಲಿರುವ 'ನಾಸದಾಸೀತ್ ನೋ ಸದಾಸೀತ್' ಎಂಬ ನಾಸದೀಯಸೂಕ್ತದ ಉಪಬೃಂಹಣವೇ ಆಗಿದೆ. 'ಸಹಸ್ರಶೀರ್ಷಾ ಪುರುಷಃ ಸಹಸ್ರಾಕ್ಷಃ ಸಹಸ್ರಪಾತ್' ಇತ್ಯಾದಿ ಶ್ಲೋಕಗಳು (೧–೧೨–೫೮ ರಿಂದ ೬೫) ಪುರುಷಸೂಕ್ತದ ವಿವರಣೆಯಾಗಿರುತ್ತವೆ. ಇದೇ ರೀತಿಯಲ್ಲಿ ಉಪನಿಷತ್ತುಗಳ ಮತ್ತು ಭಗವದ್ಗೀತೆಯ ಅರ್ಥವನ್ನು ಅಲ್ಲಲ್ಲಿ ವಿವರಿಸಿರುವುದು ಕಂಡುಬರುತ್ತದೆ. ವಿಷ್ಣುಪುರಾಣ ಮತ್ತು ವೇದ, ಉಪನಿಷತ್, ಭಗವದ್ಗೀತೆಗಳಿಗೆ ಅರ್ಥಸಾಮ್ಯದೊಡನೆ ಶಬ್ದಸಾಮ್ಯವನ್ನು ಹಲವಾರು ಕಡೆಗಳಲ್ಲಿ ನಾವು ಕಾಣಬಹುದು. ಅಂತೂ ಈ ವಿಷ್ಣು ಪುರಾಣವು ಪ್ರಾಚೀನಕಾಲದಿಂದಲೂ ಅತ್ಯಂತವಿಖ್ಯಾತವೂ ಜನಪ್ರಿಯವೂ ಆಗಿತ್ತೆಂಬುದರಲ್ಲಿ ಸಂದೇಹವಿಲ್ಲ. ಮಹಾಕವಿ ಕಾಳಿದಾಸನು ವಿಷ್ಣುಪುರಾಣವನ್ನು ಓದಿದ್ದನೆಂದೂ ಅದರಿಂದ ಪ್ರಭಾವಿತನಾಗಿದ್ದನೆಂದೂ ಹೇಳಬಹುದು. ಆತನ ರಘುವಂಶ ಮಹಾಕಾವ್ಯದಲ್ಲಿ ಬಂದಿರುವ ಇಕ್ಷ್ವಾಕುವಂಶದ ರಾಜರ ವಂಶಾವಳಿಗೂ ವಿಷ್ಣುಪುರಾಣದಲ್ಲಿ ಬಂದಿರುವ ಇಕ್ಷ್ವಾಕುವಂಶಾವಳಿಗೂ ಸಾಮ್ಯವಿದೆ. ರಘುವನ್ನು ವರ್ಣಿಸುವಾಗ 'ರಾಜಾ ಪ್ರಕೃತಿರಂಜನಾತ್' (೪–೧೨) ಎಂದು ಹೇಳಿದ್ದಾನೆ. ಪ್ರಜಾರಂಜನೆಯಿಂದ ರಾಜಾ ಎಂಬ ವ್ಯುತ್ಪತ್ತಿಯನ್ನು ವಿಷ್ಣುಪುರಾಣದಲ್ಲಿಯೂ ಕಾಣಬಹುದು – 'ರಾಜಾಭೂಜ್ಜನರಂಜನಾತ್' (೧–೧೩–೯೩). ರಘುವಂಶದಲ್ಲಿ ನಂದಿನೀಧೇನುವನ್ನು ದಿಲೀಪನು ಸೇವಿಸುವ ವಿಧಾನ ವಸಿಷ್ಠರಿಂದ ಹೀಗೆ ಉಕ್ತವಾಗಿದೆ–

> **ಪ್ರಸ್ಥಿತಾಯಾಂ ಪ್ರತಿಷ್ಠೇಥಾಃ ಸ್ಥಿತಾಯಾಂ ಸ್ಥಿತಿಮಾಚರೇಃ।**
> **ನಿಷಣ್ಣಾಯಾಂ ನಿಷೀದಾಸ್ಯಾಂ ಪೀತಾಂಭಸಿ ಪಿಬೇರಪಃ॥**

(ರಘು-೧-೮೯). ವಿಷ್ಣುಪುರಾಣದಲ್ಲಿ ಶಿಷ್ಯನು ಗುರುಸೇವೆಯನ್ನು ಮಾಡಬೇಕಾದ ವಿಧಾನ ಈ ರೀತಿ ಉಕ್ತವಾಗಿದೆ-

ಸ್ಥಿತೇ ತಿಷ್ಠೇತ್ ವ್ರಜೇದ್ಯಾತೇ ನೀಚೈರಾಸೀತ ಚಾಸತಿ।

(೩-೯-೪). ಈ ಹೋಲಿಕೆಗಳನ್ನು ಗಮನಿಸಿದಾಗ ಕಾಳಿದಾಸನ ಮೇಲೆ ವಿಷ್ಣುಪುರಾಣದ ಪ್ರಭಾವ ಆಗಿತ್ತೆಂಬುದು ಸ್ಪಷ್ಟವಾಗುತ್ತದೆ.

ವಿಷ್ಣುಪುರಾಣದಲ್ಲಿ ರಾಷ್ಟ್ರಭಕ್ತಿ ಪ್ರಚೋದಕವಾದ ಈ ಶ್ಲೋಕಗಳು ಗಮನಾರ್ಹವಾದವುಗಳು. ಭರತಖಂಡವು ಕರ್ಮಭೂಮಿಯೆಂದೂ ಇಲ್ಲಿ ಜನಿಸುವುದು ಪುಣ್ಯಬಲದಿಂದಲೇ ಎಂದೂ ಇದು ಅನ್ಯರಿಗೆ ದುರ್ಲಭವೆಂದೂ ಹೇಳಲಾಗಿದೆ-

ಅತ್ರ ಜನ್ಮಸಹಸ್ರಾಣಾಂ ಸಹಸ್ರೈರಪಿ ಸತ್ತಮ।
ಕದಾಚಿಲ್ಲಭತೇ ಜಂತುರ್ಮಾನುಷ್ಯಂ ಪುಣ್ಯಸಂಚಯಾತ್॥
ಗಾಯಂತಿ ದೇವಾಃ ಕಿಲ ಗೀತಕಾನಿ
ಧನ್ಯಾಸ್ತು ತೇ ಭಾರತಭೂಮಿಭಾಗೇ।
ಸ್ವರ್ಗಾಪವರ್ಗಾಸ್ಪದಮಾರ್ಗಭೂತೇ
ಭವಂತಿ ಭೂಯಃ ಪುರುಷಾಃ ಸುರತ್ವಾತ್॥

(೨-೩-೨೩, ೨೪)

ವಿಷ್ಣುಪುರಾಣವು ಉತ್ತಮ ಕಾವ್ಯದಂತೆ ರಮಣೀಯ ವರ್ಣನೆಗಳಿಂದ ತುಂಬಿದೆ ಎಂದು ಹಿಂದೆ ಹೇಳಿದ್ದೇವೆ. ದೃಷ್ಟಾಂತವಾಗಿ ಈ ಶರದ್ವರ್ಣನೆಯನ್ನು ನೋಡಬಹುದು.

ಮಯೂರಾ ಮೌನಮಾತಸ್ಥುಃ ಪರಿತ್ಯಕ್ತಮದಾ ವನೇ।
ಅಸಾರತಾಂ ಪರಿಜ್ಞಾಯ ಸಂಸಾರಸ್ಯೇವ ಯೋಗಿನಃ॥
ಉತ್ಸೃಜ್ಯ ಜಲಸರ್ವಸ್ವಂ ವಿಮಲಾಃ ಸಿತಮೂರ್ತಯಃ।
ತತ್ಯಜುಶ್ಚಾಂಬರಂ ಮೇಘಾ ಗೃಹಂ ವಿಜ್ಞಾನಿನೋ ಯಥಾ॥
ತಾರಕಾ ವಿಮಲೇ ವ್ಯೋಮ್ನಿ ರರಾಜಾಖಂಡಮಂಡಲಃ।
ಚಂದ್ರಶ್ಚರಮದೇಹಾತ್ಮಾ ಯೋಗೀ ಸಾಧುಕುಲೇ ಯಥಾ॥

ಪಂಚಮಾಂಶದ ಹತ್ತನೆಯ ಅಧ್ಯಾಯದಲ್ಲಿ ಬಂದಿರುವ, ಉಪಮಾ ಪರಂಪರೆಗಳಿಂದ ಕೂಡಿದ ಈ ಶರದ್ವರ್ಣನೆ ಅತ್ಯಂತ ಮೋಹಕವಾದುದು. ಗೋಪಕನ್ನಿಕೆಯರು ಶ್ರೀಕೃಷ್ಣನಲ್ಲಿ ಪ್ರೇಮಾಂಧರಾಗಿ ಆತನನ್ನೇ ಧ್ಯಾನಿಸುತ್ತಿದ್ದರೆಂಬ ವರ್ಣನೆ ರಮಣೀಯವಾಗಿದೆ-

ತಚ್ಚಿತ್ತ ವಿಮಲಾಹ್ಲಾದ ಕ್ಷೀಣಪುಣ್ಯಚಯಾ ತಥಾ।
ತದಪ್ರಾಪ್ತಿ ಮಹಾದುಃಖವಿಲೀನಾಶೇಷಪಾತಕಾ॥

(೫-೧೩-೨೧, ೨೨)

ಈ ಎರಡು ಶ್ಲೋಕಗಳನ್ನು ಮಮ್ಮಟನು ಕಾವ್ಯಪ್ರಕಾಶದಲ್ಲಿ ಉದಾಹರಿಸಿರುವುದು ಗಮನಾರ್ಹ. (ಉಲ್ಲಾಸ ೪, ಶ್ಲೋಕ ೮೧-೮೨). ಶ್ರೀಕೃಷ್ಣಚರಿತೆಯಿರುವ ಪಂಚಮಾಂಶವೇ ಒಂದು ಮಹಾಕಾವ್ಯವಾಗಿದೆ.

ವಿಷ್ಣುಪುರಾಣವು ಆಧ್ಯಾತ್ಮಿಕ ವಿಷಯವಾಗಿ ಗಂಭೀರವಾದ ಸಮಾಲೋಚನೆಯನ್ನು ಮಾಡಿದೆಯಲ್ಲದೆ ಮನನೀಯವಾದ ಲೋಕನೀತಿಗಳನ್ನು ಅರ್ಥವತ್ತಾಗಿ ತಿಳಿಸುತ್ತದೆ. ಇದರಲ್ಲಿರುವ ಹಲವಾರು ಶ್ಲೋಕಗಳನ್ನು ಸುಭಾಷಿತಕಾರರು ತಮ್ಮ ನೀತಿ ಗ್ರಂಥಗಳಲ್ಲಿ ಸಂಗ್ರಹಿಸಿದ್ದಾರೆ. ಈ ಶ್ಲೋಕಗಳನ್ನು ನೋಡಿ–

ಯಾ ದುಸ್ತ್ಯಜಾ ದುರ್ಮತಿಭಿಃ ಯಾ ನ ಜೀರ್ಯತಿಜೀರ್ಯತಃ।
ತಾಂ ತೃಷ್ಣಾಂ ಸಂತ್ಯಜೇತ್ ಪ್ರಾಜ್ಞಃ ಸುಖೇನೈವಾಭಿಪೂರ್ಯತೇ॥
ಜೀರ್ಯಂತಿ ಜೀರ್ಯತಃ ಕೇಶಾ ದಂತಾ ಜೀರ್ಯಂತಿ ಜೀರ್ಯತಃ।
ಧನಾಶಾ ಜೀವಿತಾಶಾ ಚ ಜೀರ್ಯತೋಽಪಿ ನ ಜೀರ್ಯತಃ॥

(೪-೧೦-೨೬, ೨೭)

ಕಲಿಯುಗದಲ್ಲಿ ನಡೆಯುವ ಅನಾಚರವನ್ನು ಕುರಿತು ಆರನೆಯ ಅಂಶದಲ್ಲಿ ಬಂದಿರುವ ಶ್ಲೋಕಗಳು ಕುತೂಹಲಕರವಾದವುಗಳು–

ಸರ್ವಮೇವ ಕಲೌ ಶಾಸ್ತ್ರಂ ಯಸ್ಯ ಯದ್ವಚನಂ ದ್ವಿಜ॥
ವಿವಾಹಾ ನ ಕಲೌ ಧರ್ಮ್ಯಾ ನ ಶಿಷ್ಯಗುರುಸಂಸ್ಥಿತಿಃ।
ನ ದಾಂಪತ್ಯಕ್ರಮೋ ನೈವ ವಹ್ನಿದೇವಾತ್ಮಕಃ ಕ್ರಮಃ॥
ವೇದಾದಾನಂ ಕರಿಷ್ಯಂತಿ ವಟವಶ್ಚಾಕೃತವ್ರತಾಃ।
ಯಶ್ಚ ಯಶ್ಚಾಬಲಃ ಸರ್ವಃ ಸ ಸ ಭೃತ್ಯಃ ಕಲೌ ಯುಗೇ॥

ಇತ್ಯಾದಿ.

ಈ ಪುರಾಣದಲ್ಲಿ ಉಕ್ತವಾಗಿರುವ ಖಗೋಳಶಾಸ್ತ್ರದ ವಿಚಾರಗಳು ಈಗಿನ ವಿಜ್ಞಾನವು ಸಮರ್ಥಿಸುವಂತಹವೇ ಸರಿ. ಪುರಾಣಕರ್ತೃವಿಗೆ ಶಾಸ್ತ್ರೀಯವಾದ ಜ್ಯೋತಿಃಶಾಸ್ತ್ರವಿಜ್ಞಾನ ತಿಳಿದಿತ್ತೆಂಬುದಕ್ಕೆ ಪ್ರಮಾಣವುಂಟು. ಇದರಲ್ಲಿ ಉಕ್ತವಾದ ಖಗೋಳ ವಿಜ್ಞಾನವನ್ನು ಹೀಗೆ ಸಂಗ್ರಹಿಸಿ ಹೇಳಬಹುದು. ಈ ವಿಚಾರವು ದ್ವಿತೀಯಾಂಶದ ಎಂಟನೆಯ ಅಧ್ಯಾಯದಿಂದ ಹನ್ನೆರಡನೆಯ ಅಧ್ಯಾಯದವರೆಗೆ ಪ್ರಸ್ತುತವಾಗಿದೆ: "ಸೂರ್ಯನಿಗೆ ಉದಯಾಸ್ತ ಮಾನಗಳಿಲ್ಲ. ಅವನನ್ನು ಜನರು ಕಂಡಾಗ ಉದಿತನಾದನೆಂದೂ ಮರೆಯಾದಾಗ ಅಸ್ತಂಗತನಾದನೆಂದೂ ವ್ಯವಹರಿಸುತ್ತಾರೆ. ಅಹಃ ಪ್ರಮಾಣ, ರಾತ್ರಿಪ್ರಮಾಣಗಳು ಹೆಚ್ಚುಕಡಿಮೆಯಾಗುವುದಕ್ಕೆ ಕಾರಣಗಳನ್ನು ಹೇಳಲಾಗಿದೆ. ಸೂರ್ಯನು ಸಮುದ್ರದಿಂದ ಜಲವನ್ನು ಹೀರಿ ಮಳೆ ಸುರಿಸುತ್ತಾನೆ. ಚಂದ್ರನು ಭೂಮಿಗೂ

ಸೂರ್ಯನಿಗೂ ಸಮ ಕಕ್ಷೆಯಲ್ಲಿ ಬಂದಾಗ ಅಮಾವಾಸ್ಯೆಯಾಗುತ್ತದೆ. ದಕ್ಷಿಣಾಯನ, ಉತ್ತರಾಯಣ. ವಿಷುವದ್ರೇಖೆ ಮತ್ತು ಮೇಷಾದಿ ರಾಶಿಗಳನ್ನು ಶಾಸ್ತ್ರೀಯವಾಗಿ ಗುರುತಿಸಲಾಗಿದೆ. ಭೂಮಿಯ ಛಾಯೆಗೆ ರಾಹು ಎಂದು ಹೆಸರು. ಈ ರಾಹು ಹುಣ್ಣಿಮೆಯಂದು ಚಂದ್ರನ ಬಳಿಯೂ ಅಮಾವಾಸ್ಯೆಯಂದು ಸೂರ್ಯನ ಬಳಿಯೂ ಇರುತ್ತಾನೆ. ಆಕಾಶದಲ್ಲಿ ಅನಂತ ತಾರಾ ಪುಂಜಗಳಿವೆ. ಈ ಜ್ಯೋತಿಶ್ಚಕ್ರವು 'ವಾಯುರಶ್ಮಿ'ಗಳಿಂದ ಒಂದಕ್ಕೊಂದು ಬದ್ಧವಾಗಿ ಹಿಡಿಯಲ್ಪಟ್ಟು ಆಕಾಶದಲ್ಲಿ ನಿಂತಿವೆ. ಭೂಮಿಯನ್ನು ಸೂರ್ಯನು ಹಿಡಿದು ನಿಲ್ಲಿಸಿದ್ದಾನೆ. ಸೂರ್ಯಾದಿಗ್ರಹಗಳು ಧ್ರುವನಕ್ಷತ್ರದಿಂದ ವಾಯುರಶ್ಮಿಗಳ ಮೂಲಕ ಧರಿಸಲ್ಪಟ್ಟಿವೆ. ಧ್ರುವನಕ್ಷತ್ರವನ್ನು ಶಿಶುಮಾರನಕ್ಷತ್ರಚಕ್ರವು ಹಿಡಿದು ನಿಲ್ಲಿಸಿದೆ. ಶಿಶುಮಾರ ಚಕ್ರವನ್ನು ಅದರ ಸ್ಥಳದಲ್ಲಿ ಹಿಡಿದು ನಿಲ್ಲಿಸಿದವನು ಶ್ರೀಮನ್ನಾರಾಯಣನೇ."

ವಾತರಶ್ಮಿಯೆಂದರೆ ವಿಜ್ಞಾನಿಗಳು ಹೇಳುವ ಆಕರ್ಷಣ ಶಕ್ತಿಯೇ (Power of gravity).

ಅಧ್ಯಾತ್ಮ

ಶ್ರೀವಿಷ್ಣುಪುರಾಣವು ಪ್ರತಿಪಾದಿಸುವ ಅಧ್ಯಾತ್ಮ ತತ್ತ್ವವೇನೆಂಬುದು ಈಗ ಪರಿಶೀಲನೀಯ. ಈ ಪುರಾಣವು 'ವೇದಸಂಮತ'ವಾದ್ದರಿಂದ ಇದರಲ್ಲಿ ಉಕ್ತವಾದದ್ದು ವೇದಾಂತ ಅಥವಾ ಔಪನಿಷದವಾಗಬಹುದೇ ಹೊರತು ಇನ್ನೊಂದಾಗಲು ಶಕ್ಯವಿಲ್ಲ. ಸಾಂಖ್ಯ ಮತದ ಪ್ರಕ್ರಿಯೆ ಅಲ್ಲಲ್ಲಿ ಕಾಣಿಸಿಕೊಂಡಿರುವುದಾದರೂ ಅದು ವೇದಾಂತೋಪ ಯೋಗಿಯೇ ಹೊರತು ಕಾಪಿಲ ಸಾಂಖ್ಯವಲ್ಲ. ಅನ್ಯದರ್ಶನಗಳ ನಿಂದೆಯೂ ಇದರಲ್ಲಿಲ್ಲ. ಚಾರ್ವಾಕ, ಬೌದ್ಧ, ಜೈನ ಸಿದ್ಧಾಂತಗಳನ್ನು ದೂಷಿಸಿರುವುದೇನೋ ನಿಜ. ವೇದವನ್ನು ಪ್ರಮಾಣವಾಗಿ ಆ ದರ್ಶನಗಳು ಸ್ವೀಕರಿಸಿಲ್ಲವಾದ್ದರಿಂದ ಇದೊಂದು ಸಾಮಾನ್ಯಾಕಾರದ ದೂಷಣೆ ಎಂದು ತಿಳಿದುಕೊಳ್ಳಬೇಕು. ಹೆಸರೇ ತಿಳಿಸುವಂತೆ ಈ ಪುರಾಣವು ವಿಷ್ಣುವಿನ ಮಹಿಮೆಯನ್ನು ವಿವರಿಸುವುದಕ್ಕಾಗಿ ಹೊರಟಿದೆ. ವಿಷ್ಣುವೆಂದರೆ ತ್ರಿಮೂರ್ತಿಗಳಿಗೆ ಕಾರಣ ಭೂತವೂ ಆದ ಪರಬ್ರಹ್ಮವೆ? ಎಂಬುದು ವಿಚಾರಣೀಯ. ಈ ಪುರಾಣವನ್ನು ಸಮಗ್ರವಾಗಿ ಪರಿಶೀಲಿಸಿದರೆ ಸಗುಣನಾದ ವಿಷ್ಣುವಿಗೆ ಕಾರಣವಾದ ನಿರ್ಗುಣವೂ ನಿರಾಕಾರವೂ ಆದ, ಸತ್ತಾಮಾತ್ರಸ್ವರೂಪವಾದ ಮತ್ತು ಜ್ಞಾನ ಸ್ವರೂಪವಾದ ಅದ್ವೈತ ಬ್ರಹ್ಮವನ್ನು ಇದು ಪ್ರತಿಪಾದಿಸುತ್ತದೆ ಎಂದು ತಿಳಿದುಬರುತ್ತದೆ. ಈ ಬ್ರಹ್ಮವು ತನ್ನ ಮಾಯಾಶಕ್ತಿಯಿಂದ ಸಗುಣವಾಗಿ ಏರ್ಪಟ್ಟಾಗ ವಿಷ್ಣು, ಬ್ರಹ್ಮ, ಶಿವ ಎಂಬ

ತ್ರಿಮೂರ್ತಿಯಾಗಿ ತೋರುತ್ತದೆ. ಈ ತ್ರಿಮೂರ್ತಿಗಳಲ್ಲಿ ವಿಷ್ಣುಮೂರ್ತಿ ಸತ್ತ್ವಗುಣ ಪ್ರಧಾನವಾದ್ದರಿಂದ ವಿಷ್ಣುರೂಪಕ್ಕೆ ಪ್ರಾಶಸ್ತ್ಯವನ್ನಿತ್ತು ವಿಷ್ಣುವನ್ನು ವಿಶೇಷವಾಗಿ ಸ್ತುತಿಸಲಾಗಿದೆ ಎಂದು ನಿಶ್ಚಿತವಾಗುತ್ತದೆ. ಈ ವಿಷಯವನ್ನು ಇಲ್ಲಿ ಸಂಕ್ಷಿಪ್ತವಾಗಿ ಪ್ರಮಾಣೀಕರಿಸಬಹುದು.

ಪರಮಾತ್ಮನ ಸ್ವರೂಪ – ಪರಮಾರ್ಥ ತತ್ತ್ವವು ಜ್ಞಾನಸ್ವರೂಪವೂ ಅತ್ಯಂತ ನಿರ್ಮಲವೂ ಆಗಿದೆ. ಭ್ರಾಂತಿಯಿಂದ ಅದು ಅರ್ಥರೂಪದಲ್ಲಿ ತೋರುತ್ತದೆ ಎಂದು ಈ ಶ್ಲೋಕ ತಿಳಿಸುತ್ತದೆ–

ಜ್ಞಾನಸ್ವರೂಪಮತ್ಯಂತನಿರ್ಮಲಂ ಪರಮಾರ್ಥತಃ।
ತಮೇವಾರ್ಥಸ್ವರೂಪೇಣ ಭ್ರಾಂತಿದರ್ಶನತಃ ಸ್ಥಿತಮ್॥

(೧–೨–೬)

ಬ್ರಹ್ಮವು ಜಗದ್ರೂಪವಾಗಿ ಕಾಣುವುದು ಭ್ರಾಂತಿಯಿಂದ ಎಂದು ಸ್ಫುಟವಾಗಿ ಇಲ್ಲಿ ಹೇಳಿದೆ. ವಿಷ್ಣುವು ಜ್ಞಾನಮಯನೆಂದೂ ಆ ಜ್ಞಾನಕ್ಕೆ ಬ್ರಹ್ಮ ಎಂದು ಹೆಸರಿದೆ ಎಂದೂ ತಿಳಿಯಬೇಕು–

ವಿಷ್ಣೋರ್ಜ್ಞಾನಮಯಸ್ಯೋಕ್ತಂ ತಜ್ಜ್ಞಾನಂ ಬ್ರಹ್ಮಸಂಜ್ಞಿತಮ್॥

(೧–೨೨–೫೧)

‘ವಿಜ್ಞಾನಮದ್ವೈತಮಯಮ್’ (೧–೨೨–೪೮) ಎಂಬ ಮಾತು ಇದನ್ನೇ ಸಮರ್ಥಿಸುತ್ತದೆ. ಸರ್ವಭೇದರಹಿತವಾಗಿಯೂ ಸತ್ತಾಮಾತ್ರವಾಗಿಯೂ ವಾಕ್ಕುಗಳಿಗೆ ಅಗೋಚರವಾಗಿಯೂ ಅನುಭವೈಕಗಮ್ಯವಾಗಿಯೂ ಇರುವ ಜ್ಞಾನವೇ ಬ್ರಹ್ಮ–

ಪ್ರತ್ಯಸ್ತಮಿತ ಭೇದಂ ಯತ್ ಸತ್ತಾಮಾತ್ರಮಗೋಚರಮ್।
ವಚಸಾಮಾತ್ಮಸಂವೇದ್ಯಂ ತಜ್ಜ್ಞಾನಂ ಬ್ರಹ್ಮಸಂಜ್ಞಿತಮ್॥

(೬–೭–೫೩)

ಈ ಸತ್ತಾಮಾತ್ರವಾದ ಬ್ರಹ್ಮವೇ ಸಗುಣವಾದ ವಿಷ್ಣುವಿನ ಪರಮಾರ್ಥ ಸ್ವರೂಪವೆಂದೂ ಅದು ಅರೂಪವೆಂದೂ ಇದರ ಮುಂದಿನ ಶ್ಲೋಕದಲ್ಲಿಯೇ ಹೇಳಿದೆ–

ತಚ್ಚ ವಿಷ್ಣೋಃ ಪರಂ ರೂಪಮರೂಪಾಖ್ಯಮನುತ್ತಮಮ್॥

(೬–೭–೫೪)

ತ್ರಿಮೂರ್ತಿಗಳಲ್ಲೊಬ್ಬನಾದ ವಿಷ್ಣು ಸಗುಣನೆಂದೂ ರೂಪ ಸಹಿತನೆಂದೂ ಭಕ್ತರು ಆರಾಧಿಸುತ್ತಾರೆ. ಆತನಿಗೆ ಅರೂಪವಾದ ಇನ್ನೊಂದು ಸ್ವರೂಪ ಇದೆ ಎಂದಾದರೆ ಅದು ಅದ್ವೈತವಾದ ಪರಬ್ರಹ್ಮವೇ ಆಗುತ್ತದೆ. ಬ್ರಹ್ಮ ವಿಷ್ಣು ಶಿವ–ಎಂಬುವರು ಒಬ್ಬನೇ ಪರಮಾತ್ಮನ ವಿಭಿನ್ನರೂಪಗಳು. ಪರಮಾತ್ಮನು ಸತ್ತ್ವಗುಣವನ್ನಾಶ್ರಯಿಸಿ ವಿಷ್ಣುವೆನಿಸುತ್ತಾನೆ.

ರಜೋಗುಣವನ್ನಾಶ್ರಯಿಸಿ ಬ್ರಹ್ಮನೆಂದೂ ತಮೋಗುಣವನ್ನಾಶ್ರಯಿಸಿ ಶಿವನೆಂದೂ ಆರಾಧಿತನಾಗುತ್ತಾನೆ. ಗುಣೋಪಾಧಿಯಿಂದ ಹೆಸರು ಬೇರೆ ಬೇರೆಯಾಗಿವೆಯೇ ಹೊರತು ತಾತ್ತ್ವಿಕವಾಗಿ ವಸ್ತುವಿನಲ್ಲಿ ಯಾವ ಭೇದವೂ ಇಲ್ಲ. ಸೃಷ್ಟಿ ಸ್ಥಿತಿ ಲಯಗಳು ಒಬ್ಬನೇ ಈಶ್ವರನಿಂದ ತ್ರಿಮೂರ್ತಿರೂಪವನ್ನಾಶ್ರಯಿಸಿ ನಡೆಯುತ್ತವೆ. ಈ ಮಾತನ್ನು ವಿಷ್ಣುಪುರಾಣವು ಹೆಜ್ಜೆ ಹೆಜ್ಜೆಗೂ ಪ್ರತಿಪಾದಿಸುತ್ತ ಬಂದಿದೆ. ಕೆಲವು ವಾಕ್ಯಗಳನ್ನು ಈ ವಿಷಯದ ದೃಢತೆಗಾಗಿ ಉದಾಹರಿಸಬಹುದು–

೧. ವಿಷ್ಣುರ್ಬ್ರಹ್ಮಸ್ವರೂಪೇಣ ಸ್ವಯಮೇವ ವ್ಯವಸ್ಥಿತಃ॥
(೧–೨–೫೬)

೨. ಸೃಷ್ಟಿಸ್ಥಿತ್ಯಂತ ಕರಣೀಂ ಬ್ರಹ್ಮವಿಷ್ಣುಶಿವಾತ್ಮಿಕಾಮ್।
ಸ ಸಂಜ್ಞಾಂ ಯಾತಿ ಭಗವಾನೇಕ ಏವ ಜನಾರ್ದನಃ॥
(೧–೨–೬೬)

೩. ತ್ವಂ ಕರ್ತಾ ಸರ್ವಭೂತಾನಾಂ ತ್ವಂ ಪಾತಾ ತ್ವಂ ವಿನಾಶಕೃತ್।
ಸರ್ಗಾದಿಷು ಪ್ರಭೋ ಬ್ರಹ್ಮವಿಷ್ಣುರುದ್ರಾತ್ಮರೂಪಧೃಕ್॥
(೧–೪–೧೫)

೪. ಶಕ್ತಯೋ ಯಸ್ಯ ದೇವಸ್ಯ ಬ್ರಹ್ಮವಿಷ್ಣುಶಿವಾತ್ಮಿಕಾಃ।
ಭವಂತ್ಯಭೂತಪೂರ್ವಸ್ಯ ತದ್ವಿಷ್ಣೋಃ ಪರಮಂ ಪದಮ್॥
(೧–೯–೫೬)

೫. ಪ್ರಸೀದ ಸರ್ವ ಸರ್ವಾತ್ಮನ್ ಕ್ಷರಾಕ್ಷರಮಯೇಶ್ವರ।
ಬ್ರಹ್ಮವಿಷ್ಣುಶಿವಾಖ್ಯಾಭಿಃ ಕಲ್ಪನಾಭಿರುದೀರಿತಃ॥
(೫–೧೮–೫೧)

೬. ಸರ್ಗಸ್ಥಿತಿವಿನಾಶಾನಾಂ ಕರ್ತಾ ಕರ್ತೃಪತಿರ್ಭವಾನ್।
ಬ್ರಹ್ಮವಿಷ್ಣುಶಿವಾಖ್ಯಾಭಿರಾತ್ಮಮೂರ್ತಿಭಿರೀಶ್ವರ॥
(೫–೩೦–೧೦)

ಮೇಲ್ಕಂಡ ವಚನಗಳಿಂದ ಈಶ್ವರನು ಒಬ್ಬನೇ ಇರುವನೆಂದೂ ಭಕ್ತರು ಆರಾಧನೆಗೋಸ್ಕರ ಸಗುಣಮೂರ್ತಿಗಳನ್ನು ಕಲ್ಪಿಸಿ ಕೊಂಡಿದ್ದಾರೆಂದೂ ತಿಳಿದುಬರುತ್ತದೆ. ನಾವು ಮೊದಲು ಹೇಳಿದಂತೆ ಸತ್ತ್ವಗುಣಮೂರ್ತಿಯಾದ ವಿಷ್ಣುವನ್ನು ಪರಮೇಶ್ವರನೆಂದು ಹೊಗಳಿರುವುದು, ಆತನು ಬ್ರಹ್ಮವಸ್ತುವಿಗೆ ಸಮೀಪದಲ್ಲಿರುವ ಉತ್ಕೃಷ್ಟ ಮೂರ್ತಿ ಎಂದೇ. ಸತ್ತ್ವಗುಣವೇ ಇದಕ್ಕೆ ನಿಮಿತ್ತ. ಈ ಮಾತನ್ನು ಮುಂದಿನ ಶ್ಲೋಕವು ಸಮರ್ಥಿಸುತ್ತದೆ–

ಸ ಪರಃ ಪರಶಕ್ತೀನಾಂ ಬ್ರಹ್ಮಣಃ ಸಮನಂತರಮ್।
ಮೂರ್ತಂ ಬ್ರಹ್ಮ ಮಹಾಭಾಗ ಸರ್ವಬ್ರಹ್ಮಮಯೋ ಹರಿಃ॥
(೧-೨೨-೬೩)

ಪರಬ್ರಹ್ಮದ ಪರಮಶಕ್ತಿಗಳಲ್ಲಿ ಮೂರ್ತಸ್ವರೂಪವಾಗಿ ಕಾಣಿಸಿಕೊಂಡಿರುವ ಶ್ರೀಹರಿಯು ಪರಬ್ರಹ್ಮದ ಅನಂತರ ಶ್ರೇಷ್ಠವಾದ ರೂಪವೆಂದು ಈ ಶ್ಲೋಕ ತಿಳಿಸುತ್ತದೆ. ಬ್ರಹ್ಮವಸ್ತುವಿನ ಮಹಾಶಕ್ತಿಗಳಲ್ಲಿ ಬ್ರಹ್ಮ ವಿಷ್ಣು ಶಿವ ಎಂಬಿವು ಪ್ರಧಾನವಾದವು-

ಬ್ರಹ್ಮ ವಿಷ್ಣು ಶಿವಾ ಬ್ರಹ್ಮನ್ ಪ್ರಧಾನಾ ಬ್ರಹ್ಮಶಕ್ತಯಃ॥
(೧-೨೨-೫೮)

ಈ ಶಕ್ತಿಗಳಲ್ಲಿ ವಿಷ್ಣುಶಕ್ತಿ ಸರ್ವೋತ್ತಮವೆಂದು ವಿಷ್ಣುಪುರಾಣ ಭಾವಿಸುತ್ತದೆ. ವಿಷ್ಣುವೇ ಒಂದು ಕಡೆ ಶಂಕರನನ್ನು ಕುರಿತು, 'ನನಗೂ ನಿನಗೂ ಭೇದವಿಲ್ಲ. ಈ ಜಗತ್ತೆಲ್ಲವೂ ನಮ್ಮಿಬ್ಬರ ಸ್ವರೂಪವೇ. ಅವಿದ್ಯಾಮೋಹಿತರಾದ ದ್ವೈತಿಗಳು ನಮ್ಮಿಬ್ಬರಲ್ಲಿ ಭೇದವಿದೆಯೆಂದು ತಿಳಿದಿದ್ದಾರೆ'-ಎಂದು ಸ್ಪಷ್ಟವಾಗಿ ನುಡಿದಿದ್ದಾನೆ-

ಯೋಽಹಂ ಸತ್ತ್ವಂ ಜಗಚ್ಚೇದಂ ಸದೇವಾಸುರಮಾನುಷಮ್।
ಮತ್ತೋ ನಾನ್ಯದಶೇಷಂ ಯತ್ ತತ್ತ್ವಂ ಜ್ಞಾತುಮಿಹಾರ್ಹಸಿ॥
ಅವಿದ್ಯಾಮೋಹಿತಾತ್ಮಾನಃ ಪುರುಷಾ ಭಿನ್ನದರ್ಶಿನಃ।
ವದಂತಿ ಭೇದಂ ಪಶ್ಯಂತಿ ಚಾವಯೋರಂತರಂ ಹರ॥
(೫-೩೩-೪೮, ೪೯)

ವಿಶ್ವದ ಉತ್ಪತ್ತಿ

ವಿಷ್ಣುಪುರಾಣದಲ್ಲಿ ಹೇಳಿದ ವಿಶ್ವದ ಉತ್ಪತ್ತಿಕ್ರಮವು ಬಹುಮಟ್ಟಿಗೆ ಕಾಪಿಲಸಾಂಖ್ಯದ ಕ್ರಮವನ್ನು ಹೋಲುತ್ತದೆ. ಸಾಂಖ್ಯಮತದಂತೆ ಪುರುಷ, ಪ್ರಕೃತಿ ಎಂಬಿವು ಜಗತ್ತಿನ ಎರಡು ಸ್ವತಂತ್ರವಾದ ಮೂಲತತ್ತ್ವಗಳು. ಅದರಲ್ಲಿ ಪುರುಷನೆಂದರೆ ಜೀವಾತ್ಮ. ಜೀವಾತ್ಮರು ಅಸಂಖ್ಯರಾಗಿದ್ದಾರೆ. ಪ್ರಧಾನವು ಸ್ವತಂತ್ರವಾಗಿದ್ದು ಪುರುಷನಿಂದ ನಿರ್ಮಿತವಾಗಿಲ್ಲ. ಆದರೆ ವಿಷ್ಣುಪುರಾಣದ ಪ್ರಕಾರ ವಿಷ್ಣು ಎಂಬುದೊಂದೇ ಸ್ವತಂತ್ರವಾದ ಮೂಲ ತತ್ತ್ವ. ಅದರಿಂದ ಅವಿದ್ಯಾರೂಪವಾದ ಪ್ರಧಾನವು ಅಥವಾ ಪ್ರಕೃತಿಯು ಕಾಣಿಸಿಕೊಂಡಿದ್ದು ಈ ಪ್ರಕೃತಿ ವಿಶ್ವದ ಅನಂತರೂಪಗಳಿಗೆ ಕಾರಣವಾಗಿದೆ. ಈ ಜಗತ್ತು ಮತ್ತು ಅದಕ್ಕೆ ಕಾರಣವಾದ ಪ್ರಕೃತಿ ವಿಷ್ಣುವಿಗಿಂತ ಪೃಥಕ್ಕಾಗಿ ಇಲ್ಲ. ಕ್ಷೇತ್ರಜ್ಞನೆನಿಸಿದ ಜೀವಾತ್ಮನೂ ಸಹ ವಿಷ್ಣುವಿನ ಒಂದು ರೂಪವೇ ಹೊರತು ಬೇರೆಯಾದ ತತ್ತ್ವವಲ್ಲ. ಈ ಪ್ರಕ್ರಿಯೆ ಅದ್ವೈತವೇದಾಂತದ ಸಿದ್ಧಾಂತವೆಂದು ಬೇರೆಯಾಗಿ ಹೇಳುವ ಕಾರಣವಿಲ್ಲ. ಪ್ರಥಮಾಂಶದ ಎರಡರಿಂದ ಐದನೆಯ ಅಧ್ಯಾಯದವರೆಗೆ ಜಗತ್ತಿನ ಸೃಷ್ಟಿಕ್ರಮವು ವಿಸ್ತಾರವಾಗಿ

ನಿರೂಪಿತವಾಗಿದೆ. ಆ ಕ್ರಮವು ಸಾಂಖ್ಯಮತಾನು ಸಾರಿಯೆಂದು ಸಾಮಾನ್ಯ ಓದುಗಗಿಗೆ ತೋರಬಹುದಾದ್ದರಿಂದ ಈ ಮಾತನ್ನು ಇಲ್ಲಿ ಹೇಳಬೇಕಾಯಿತು. ಶ್ರೀಮದ್ ಭಗವದ್ಗೀತೆ, ಶ್ರೀಮದ್ಭಾಗವತ ಮುಂತಾದ ಗ್ರಂಥಗಳಲ್ಲಿ ಹೇಳಿರುವ ವೇದಾಂತಸಮ್ಮತವಾದ ಸೃಷ್ಟಿಪ್ರಕ್ರಿಯೆ ಮತ್ತು ಪರಮಾರ್ಥ ತತ್ತ್ವಗಳ ನಿರೂಪಣೆಯೇ ವಿಷ್ಣುಪುರಾಣದಲ್ಲಿಯೂ ಬಂದಿದೆ. ಈ ಶ್ಲೋಕಗಳನ್ನು ಈಗ ಪರಿಶೀಲಿಸಬಹುದು. ಜಗತ್ತಿನ ಸೃಷ್ಟಿ ಸ್ಥಿತಿಲಯಗಳಿಗೆ ವಿಷ್ಣು ಕಾರಣನೆಂದೂ ಆತನೇ ಜಗತ್ತಾಗಿ ಕಾಣುವನೆಂದೂ ಈ ಶ್ಲೋಕ ಹೇಳುತ್ತದೆ-

ವಿಷ್ಣೋಃ ಸಕಾಶಾದುದ್ಭೂತಂ ಜಗತ್‌ತತ್ರೈವ ಚ ಸ್ಥಿತಮ್।
ಸ್ಥಿತಿಸಂಯಮಕರ್ತಾಸೌ ಜಗತೋಽಸ್ಯ ಜಗಚ್ಚ ಸಃ॥

(೧-೧-೩೧)

ಜೀವಾತ್ಮನೂ ವ್ಯಕ್ತ, ಅವ್ಯಕ್ತ, ಕಾಲ ಇವೆಲ್ಲವೂ ಪರಬ್ರಹ್ಮದ ರೂಪವೆಂದು ಈ ಶ್ಲೋಕ ಹೇಳುತ್ತದೆ-

ಪರಸ್ಯ ಬ್ರಹ್ಮಣೋ ರೂಪಂ ಪುರುಷಃ ಪ್ರಥಮಂ ದ್ವಿಜ।
ವ್ಯಕ್ತಾವ್ಯಕ್ತೇ ತಥೈವಾನ್ಯೇ ರೂಪೇ ಕಾಲಸ್ತಥಾ ಪರಮ್॥

(೧-೨-೧೫)

ವಿಷ್ಣುವಿನಿಂದ ಸೃಷ್ಟಿಯ ಆರಂಬದಲ್ಲಿ ಅವಿದ್ಯೆ ಕಾಣಿಸಿತು, ಅವಿದ್ಯೆ ಇಲ್ಲದೆ ಜಗತ್ತೇ ಇಲ್ಲವಾದ್ದರಿಂದ, "ಅವಿದ್ಯಾ ಪಂಚ ಪರ್ವೈಷಾ ಪ್ರಾದುರ್ಭೂತಾ ಮಹಾತ್ಮನಃ" (೧-೫-೫).

ವಿಷ್ಣುಪುರಾಣದಲ್ಲಿ ಪ್ರತಿಪಾದಿಸಿರುವ ಅಧ್ಯಾತ್ಮ ತತ್ತ್ವವು ಅದ್ವೈತ ಸಿದ್ಧಾಂತವೇ ಆಗಿದೆಯೆಂದು ಮೇಲೆ ತಿಳಿಸಿದ್ದಾಯಿತು. ಇನ್ನೂ ಹೆಚ್ಚಿನ ಕೆಲವು ಪ್ರಮಾಣಗಳನ್ನು ಈಗ ಪರಿಶೀಲಿಸಬಹುದು. ಪರಮಾತ್ಮನಿಗೆ ರೂಪ, ವರ್ಣ, ನಾಮ ಇತ್ಯಾದಿ ವಿಶೇಷಗಳಾವುವೂ ಇಲ್ಲವೆಂದು ಹೇಳಲಾಗಿದೆ-

ಪರಃ ಪರಾಣಾಂ ಪರಮಃ ಪರಮಾತ್ಮಾತ್ಮಸಂಸ್ಥಿತಃ।
ರೂಪವರ್ಣಾದಿನಿರ್ದೇಶವಿಶೇಷಣವಿವರ್ಜಿತಃ॥

(೧-೨-೧೦)

ಶ್ರೀಕೃಷ್ಣನು ನಿರಾಕೃತಿ ಪರಬ್ರಹ್ಮನೆಂದೂ ಆತನು ಲೋಕಾನು ಗ್ರಹಾರ್ಥವಾಗಿ ಸರೂಪನಾಗಿ ಅವತರಿಸಿದನೆಂದೂ ಹೇಳಿದೆ-"ಯತ್ರಾವತೀರ್ಣಂ ಕೃಷ್ಣಾಖ್ಯಂ ಪರಬ್ರಹ್ಮ ನಿರಾಕೃತಿ" (೪-೧೨-೪).

ಆಕಾಶ, ಕಾಲ ಮುಂತಾದವು ಸನ್ನಿಧಾನಮಾತ್ರದಿಂದ ವೃಕ್ಷದ ಉತ್ಪತ್ತಿಗೆ ಹೇಗೆ

ಕಾರಣವಾಗುತ್ತವೆಯೋ ಹಾಗೆ ಶ್ರೀಹರಿಯು ವಿಶ್ವಕ್ಕೆ ಸ್ವತಃಪರಿಣಾಮವಿಲ್ಲದೆಯೇ ಕಾರಣವಾಗಿರುತ್ತಾನೆ-"ತಥೈವಾಪರಿಣಾಮೇನ ವಿಶ್ವಸ್ಯ ಭಗವಾನ್ ಹರಿಃ" (೨-೭-೨೭). ಆತನೇ ಮೂಲಪ್ರಕೃತಿ ಯಾಗಿದ್ದೂ ವ್ಯಕ್ತರೂಪಿಯಾಗುತ್ತಾನೆ ಎಂದು ನುಡಿದು ವಿವರ್ತವಾದವನ್ನು ಇಲ್ಲಿ ಸೂಚಿಸಲಾಗಿದೆ-'ಸ ಏವ ಮೂಲಪ್ರಕೃತಿಃ ವ್ಯಕ್ತರೂಪೀ ಜಗಚ್ಚ ಸಃ.' ಅದ್ವೈತವೇದಾಂತಿಗಳು ಈ ವಿಷಯದಲ್ಲಿ "ಮೃತ್ತಿಕೇತ್ಯೇವ ಸತ್ಯಮ್" ಎಂದು ಉದಾಹರಿಸುವ ಶ್ರುತಿಯ ಅರ್ಥ 'ಮಹೀ ಘಟತ್ತ್ವಂ ಘಟತಃ ಕಪಾಲಿಕಾ....' ಎಂಬ ಶ್ಲೋಕದಲ್ಲಿ ಸ್ಪಷ್ಟವಾಗಿ ವಿವರಿಸಲ್ಪಟ್ಟಿದೆ. ಆದ್ದರಿಂದ ವಿಜ್ಞಾನದ ಹೊರತಾಗಿ ಯಾವ ವಸ್ತುಜಾತವೂ ಇಲ್ಲವೆಂದು 'ತಸ್ಮಾನ್ನ ವಿಜ್ಞಾನಮೃತೇಽಸ್ತಿ ಕಿಂಚಿತ್, ಕ್ವಚಿತ್ ಕದಾಚಿತ್ ದ್ವಿಜ ವಸ್ತುಜಾತಮ್' ಎಂಬ ಮುಂದಿನ ಶ್ಲೋಕದಲ್ಲಿ ಸ್ಪಷ್ಟಪಡಿಸಲಾಗಿದೆ (೨-೧೨-೪೧, ೪೨).

ಹಾಗಿದ್ದರೆ ಲೋಕದಲ್ಲಿ ದ್ವೈತರೂಪವಾದ ಈ ಜಗತ್ತು ಕಾಣಿಸುವುದು ಹೇಗೆ? ಎಂಬ ಪ್ರಶ್ನೆ ಏಳುತ್ತದೆ. ಜ್ಞಾನಾತ್ಮನಾದ ಪರಮಾತ್ಮನಿಗೆ ಯಾವ ರೂಪವೂ ಇಲ್ಲವೆಂದೂ, ಮೂರ್ತವಾದ ಜಗತ್ತು ಅಜ್ಞಾನಿಗಳಿಗೆ ಭ್ರಾಂತಿಯಿಂದ ಕಾಣಿಸುತ್ತಿದೆಯೆಂದೂ ವಿಷ್ಣುಪುರಾಣ ಹೇಳುತ್ತದೆ. ಜ್ಞಾನ ಸ್ವರೂಪವನ್ನು ಅರ್ಥಸ್ವರೂಪವಾಗಿ ಕಾಣುತ್ತ ಬುದ್ಧಿಹೀನರು ಮೋಹಸಂಪ್ಲವದಲ್ಲಿ ತೊಳಲಾಡುತ್ತಿದ್ದಾರೆ ಎಂದು ಹೇಳುತ್ತದೆ (೧-೪-೩೯, ೪೦). ಶೈಲಾದಿಗಳೆಲ್ಲವೂ ವಿಜ್ಞಾನ ವಿಜೃಂಭಿತಗಳು. ಯಾವಾಗ ಕರ್ಮಕ್ಷಯವಾಗಿ ಜ್ಞಾನವು ದೋಷರಹಿತ ವಾಗುತ್ತದೆಯೋ ಆಗ ವಸ್ತುಭೇದಗಳಾವವೂ ಕಾಣಿಸುವುದಿಲ್ಲ (೨-೧೨-೩೯, ೪೦). ಭಿನ್ನದರ್ಶಿಗಳಾದ ಜನರು ಅವಿದ್ಯಾ ಮೋಹಿತಾತ್ಮರು (೫-೩೩-೪೯). ಈ ಜಗತ್ತು ಭಿನ್ನವಾಗಿ ಕಾಣುವುದು ಅವಿದ್ಯಾ ವಶದಿಂದ (೧೩-೧೭-೩೮). ಶುದ್ಧನೂ ಏಕನೂ ಆದ ಪರಮಾತ್ಮನನ್ನು ಈಶ್ವರನೆನ್ನುವುದು ಹೇಗೆ, ಈಶಿತವ್ಯವೇ ಇಲ್ಲದ್ದರಿಂದ? ಎಂಬ ಪ್ರಶ್ನೆಗೆ ಆತನು ಈಶ್ವರನೆನ್ನುವುದು ಔಪಚಾರಿಕವಾಗಿ ಎಂದು ವಿಷ್ಣು ಪುರಾಣವು ಉತ್ತರ ಕೊಡುತ್ತದೆ (೧-೯-೪೬). ಒಬ್ಬನೇ ಪರಮಾತ್ಮನು ಸೃಜ್ಯನೂ ಸರ್ಗಕರ್ತನೂ ಆಗಿದ್ದಾನೆ. ಆತನೇ ಪಾಲಕನೂ, ಪಾಲನೀಯನೂ, ಸಂಹಾರಕರ್ತನೂ ಆಗಿದ್ದಾನೆ (೧-೨-೭೦). ಆತನೇ ಭೋಕ್ತೃವೂ, ಭೋಗ್ಯವೂ, ಕರ್ತೃವೂ, ಕಾರ್ಯವೂ ಆಗಿದ್ದಾನೆ (೨-೯-೫೦).

ಇದಕ್ಕಿಂತ ಸ್ಪಷ್ಟವಾದ ಉಲ್ಲೇಖಗಳನ್ನು ಪ್ರಹ್ಲಾದಚರಿತ್ರೆಯಲ್ಲಿಯೂ, ಋಭು-ನಿದಾಘರ ಕಥೆಯಲ್ಲಿಯೂ ಕಾಣಬಹುದು. ಪ್ರಹ್ಲಾದನು ತಂದೆ ಹಿರಣ್ಯಕಶಿಪುವಿಗೆ

ವಿಷ್ಣು ಯಾರೆಂಬುದನ್ನು ತಿಳಿಸುತ್ತ, ಈ ವಿಶ್ವವು ಯಾರಿಂದ ಹುಟ್ಟಿದೆಯೋ ಯಾವಾತನು ಸ್ವಯಂ ವಿಶ್ವವಾಗಿದ್ದಾನೋ ಆತನೇ ವಿಷ್ಣುವೆನ್ನುತ್ತಾನೆ-

> ಯತೋ ಯಶ್ಚ ಸ್ವಯಂ ವಿಶ್ವಂ ಸ ವಿಷ್ಣುಃ ಪರಮೇಶ್ವರಃ।
> (೧-೧೭-೨೨)

ಇನ್ನೊಂದೆಡೆ, ದೇವ ಮನುಷ್ಯಾದಿಗಳೆಲ್ಲರೂ ವಿಷ್ಣುವಿನ ರೂಪವೆಂದೂ ತೋರಿಕೆಗೆ ಮಾತ್ರ ವಿಭಿನ್ನವಾಗಿರುವುದೆಂದೂ ಹೇಳುತ್ತಾನೆ (೧-೧೯-೪೭). ಹಿರಣ್ಯಕಶಿಪು ಪ್ರಹ್ಲಾದನನ್ನು ಸರ್ಪಗಳಿಂದ ಬಂಧಿಸಿದಾಗ, ಪ್ರಹ್ಲಾದನು ತಾನೇ ವಿಷ್ಣುವೆಂದು ಅಭೇದ ಜ್ಞಾನದಿಂದ ಸ್ತುತಿಸಿದನೆಂದೂ, ಆಗ ಆತನ ಪಾಪಗಳೆಲ್ಲವೂ ತೊಳೆದು ಅಂತಃಕರಣ ಶುದ್ಧಿಯಾಯಿತೆಂದೂ, ಸರ್ಪಬಂಧಗಳು ಕಳಚಿ ಹೋದುವೆಂದೂ ಹೇಳಿರುವ ಈ ಭಾಗವು ಅತ್ಯಂತ ಮನನೀಯವಾಗಿದೆ-

> ಸರ್ವಗತ್ವಾದನಂತಸ್ಯ ಸ ಏವಾಹಮವಸ್ಥಿತಃ।
> ಮತ್ತಃ ಸರ್ವಮಹಂ ಸರ್ವಂ ಮಯಿ ಸರ್ವಂ ಸನಾತನೇ॥
> ಅಹಮೇವಾಕ್ಷಯೋ ನಿತ್ಯಃ ಪರಮಾತ್ಮಾತ್ಮಸಂಶ್ರಯಃ।
> ಬ್ರಹ್ಮಸಂಜ್ಞೋಽಹಮೇವಾಗ್ರೇ ತಥಾಂತೇ ಚ ಪರಃ ಪುಮಾನ್॥
> (೧-೧೯-೮೫, ೮೬)

ಮತ್ತೆ ಮುಂದಿನ ಶ್ಲೋಕಗಳನ್ನು ನೋಡಿ-

> ಏವಂ ಸಂಚಿನ್ತಯನ್ ವಿಷ್ಣುಂ ಅಭೇದೇನಾತ್ಮನೋ ದ್ವಿಜ।
> ತನ್ಮಯತ್ವಮವಾಪ್ಯಾಗ್ರ್ಯಂ ಮೇನೇ ಚಾತ್ಮಾನಮಚ್ಯುತಮ್॥
> ವಿಸಸ್ಮಾರ ತಥಾತ್ಮಾನಂ ನಾನ್ಯತ್ ಕಿಂಚಿದಜಾನತ।
> ಅಹಮೇವಾವ್ಯಯೋಽನನ್ತಃ ಪರಮಾತ್ಮೇತ್ಯಚಿಂತಯತ್॥
> (೧-೨೦-೧, ೨)

ಹೀಗೆಯೇ ಋಭು-ನಿದಾಘರ ಚರಿತ್ರೆಯಲ್ಲಿ ಅಭೇದಸಿದ್ಧಾಂತ ಎದ್ದು ಕಾಣುತ್ತದೆ. ಅಲ್ಲಿ ಅದ್ವೈತ ಶಬ್ದವೇ ಅನೇಕ ಬಾರಿ ಪ್ರಯುಕ್ತವಾಗಿದೆ. ಈ ಕಥೆಯಲ್ಲಿ ಜಡಭರತನು ಸೌವೀರ ರಾಜನಿಗೆ ಹೇಳಿದ್ದಾನೆ. 'ವಿಜ್ಞಾನಂ ಪರಮಾರ್ಥೋಽಸೌ ದ್ವೈತಿನೋಽತಥ್ಯದರ್ಶಿನಃ' ಎಂದು ಸ್ಪಷ್ಟವಾಗಿ ತಿಳಿಸಿ ಏಕಸ್ವರೂಪನಾದ ಆತ್ಮನ ಭೇದವು ಬಾಹ್ಯವಾದ ದೇಹಾದಿ ಕರ್ಮನಿಮಿತ್ತವೆಂದೂ ದೇಹಾದಿರೂಪವಾದ ಆವರಣವು ನಷ್ಟವಾಗಲು ಭೇದ ಉಳಿಯುವುದಿಲ್ಲವೆಂದೂ ತಿಳಿಸಿ 'ಅದ್ವೈತಾಂತರ್ಗತವಾದ ಕಥೆ'ಯನ್ನು ಜಡಭರತನು ಹೇಳಿದ್ದಾನೆ. ನಿದಾಘನು ಋಭುವಿನ ಶಿಷ್ಯ. ಎಷ್ಟು ಕಾಲ ಕಳೆದರೂ ನಿದಾಘನಿಗೆ 'ಅದ್ವೈತವಾಸನಾ' ಹುಟ್ಟಲಿಲ್ಲವೆಂದು ಅನೇಕ ಸಲ ಶಿಷ್ಯನ

ಮನೆಗೆ ಬಂದು ಋಭು ಪ್ರಕಾರಾಂತರದಿಂದ ಅದ್ವೈತ ತತ್ತ್ವವನ್ನು ಬೋಧಿಸುತ್ತಾನೆ. ಈ ಕಥೆಯಲ್ಲಿ ಬಂದಿರುವ ಕೆಳಗಿನ ವಾಕ್ಯಗಳು ಗಮನಾರ್ಹವಾದವು–ಋಭುವನ್ನು ಬಿಟ್ಟು ಬೇರೊಬ್ಬನಿಗೆ ಅದ್ವೈತ ಸಂಸ್ಕಾರ ಆಗಿರಲಿಲ್ಲವೆಂದು ನಿದಾಘನು ಹೇಳುತ್ತಾನೆ–

ನಾನ್ಯಸ್ಯಾದ್ವೈತಸಂಸ್ಕಾರಸಂಸ್ಕೃತಂ ಮಾನಸಂ ತಥಾ॥

ಪರಮಾರ್ಥಸಾರಭೂತವಾದದ್ದು ಅದ್ವೈತವೇ–

ಪರಮಾರ್ಥಸಾರಭೂತಂ ತದದ್ವೈತಮಶೇಷತಃ॥

ಋಭುವಿನ ಉಪದೇಶದಂತೆ ನಿದಾಘನು ಅದ್ವೈತ ಪರನಾಗಿ ಸರ್ವಪ್ರಾಣಿಗಳು ತನಗೆ ಅಭಿನ್ನವಾದವುಗಳೆಂದು ಕಂಡುಕೊಂಡನು–

ನಿದಾಘೋಽಪ್ಯುಪದೇಶನ ತೇನಾದ್ವೈತ ಪರೋಽಭವತ್।
ಸರ್ವಭೂತಾನ್ಯಭೇದೇನ ದದೃಶೇ ಸ ತದಾತ್ಮನಃ॥

ಈ ಕಥೆಯನ್ನು ತಿಳಿಸಿ ಜಡಭರತನು ಸೌವೀರರಾಜನಿಗೆ ಹೇಳುತ್ತಾನೆ– ಒಂದೇ ಆಕಾಶವು ಭ್ರಾಂತಿಗೊಂಡ ದೃಷ್ಟಿದೋಷ ವುಳ್ಳವರಿಗೆ ಬಿಳುಪು ಕಪ್ಪು ಮೊದಲಾದ ಭೇದವುಳ್ಳದ್ದಾಗಿ ಹೇಗೆ ಕಾಣುತ್ತದೆಯೋ ಹಾಗೆ ಒಬ್ಬನೇ ಆತ್ಮನು ಅಜ್ಞಾನಿಗಳಿಗೆ ಭಿನ್ನಭಿನ್ನವಾಗಿ ಕಾಣುತ್ತಾನೆ. ಇರತಕ್ಕದ್ದೆಲ್ಲವೂ ಒಂದೇ ವಸ್ತು. ಆತನೇ ಅಚ್ಯುತ, ಅವನೇ ನಾನು, ಅವನೇ ನೀನು, ಅವನೇ ಎಲ್ಲವೂ. ಭೇದಮೋಹವನ್ನು ತ್ಯಜಿಸು–

ಸಿತನೀಲಾದಿಭೇದೇನ ಯಥೈಕಂ ದೃಶ್ಯತೇ ನಭಃ।
ಭ್ರಾಂತಿದೃಷ್ಟಿಭಿರಾತ್ಮಾಪಿ ತಥೈಕಸ್ಸನ್ ಪೃಥಕ್ ಪೃಥಕ್॥
ಏಕಃ ಸಮಸ್ತಂ ಯದಿಹಾಸ್ತಿ ಕಿಂಚಿತ್
ತದಚ್ಯುತೋ ನಾಸ್ತಿ ಪರಂ ತತೋಽನ್ಯತ್।
ಸೋಽಹಂ ಸ ಚ ತ್ವಂ ಸ ಚ ಸರ್ವಮೇತತ್
ಆತ್ಮಸ್ವರೂಪಂ, ತ್ಯಜ ಮೋಹಭೇದಮ್॥
(ನೋಡಿ:–ದ್ವಿತೀಯಾಂಶದ ೧೫, ೧೬ನೇ ಅಧ್ಯಾಯಗಳು)

ಈ ಪ್ರಕಾರವಾಗಿ ಅದ್ವೈತವನ್ನು ಪ್ರತಿಪಾದಿಸುವ ನೂರಾರು ವಚನಗಳನ್ನು ಇನ್ನೂ ಉದಾಹರಿಸಬಹುದು. ಹೀಗಿದ್ದರೂ ಅಲ್ಲಲ್ಲಿ ಅಧ್ಯಾಹಾರ ಮಾಡಿ ಶಬ್ದವನ್ನು ಯಥೇಚ್ಛವಾಗಿ ತಿರುಚಿ, ಬೇರೆ ವಿಧವಾಗಿ ಇವುಗಳಿಗೆ ಅರ್ಥವನ್ನು ಕಲ್ಪಿಸುವುದಾದರೆ, ಪೂರ್ವ ಗೃಹೀತವಾದ ಅಭಿಪ್ರಾಯವನ್ನು ಇವುಗಳಿಗೆ ತುರುಕಿದಂತೆ ಆಗುತ್ತದೆಯೇ ಹೊರತು, ವಿಷ್ಣುಪುರಾಣವು ಏನು ಹೇಳುತ್ತದೆ ಎಂಬುದನ್ನು ನಾವು ಗ್ರಹಿಸಿದಂತಾಗುವುದಿಲ್ಲ.

ಇರತಕ್ಕದ್ದು ಒಂದೇ ಪರಮಾರ್ಥವಸ್ತು. ಇದು ನಿರ್ಗುಣವೂ ನಿರ್ವಿಕಾರವೂ ಪರಿಶುದ್ಧವೂ ಆದ ಬ್ರಹ್ಮವೆನಿಸುತ್ತದೆ. ತನ್ನ ಶಕ್ತಿವಿಶೇಷದಿಂದ ಬ್ರಹ್ಮ, ವಿಷ್ಣು, ಶಿವ ಎಂಬ

ಮೂರ್ತಸ್ವರೂಪವನ್ನು ಅದು ಧರಿಸುತ್ತದೆ. ಈ ಮೂರ್ತಿತ್ರಯದಲ್ಲಿ ಸತ್ತ್ವಪ್ರಧಾನವಾದ ವಿಷ್ಣುಮೂರ್ತಿ ಶ್ರೇಷ್ಠವಾದದ್ದು. ಬ್ರಹ್ಮದ ಅವಿದ್ಯಾಶಕ್ತಿಯಿಂದ ಜೀವಭೇದಗಳೂ ಜಗತ್ತೂ ಕಲ್ಪಿತವಾಗಿವೆ. ಇದಿಷ್ಟು ವಿಷ್ಣುಪುರಾಣದಲ್ಲಿ ಹೇಳಿದ ಅಧ್ಯಾತ್ಮಸಾರ.

ಸಾಧನಮಾರ್ಗ

ವಿಷ್ಣುಪುರಾಣವು ಶಾಸ್ತ್ರೋಕ್ತ ಕರ್ಮವನ್ನೂ ಭಗವದ್ ಭಕ್ತಿಯನ್ನೂ ಮೋಕ್ಷ ಸಾಧನ ಮಾರ್ಗಗಳೆಂದು ಅಂಗೀಕರಿಸಿದೆ. ಕರ್ಮಾನುಷ್ಠಾನದಿಂದ ಅಂತಃಕರಣವು ಶುದ್ಧವಾಗುತ್ತದೆ. ಆ ಅಂತಃಕರಣದಲ್ಲಿ ಭಗವಂತನು ನೆಲೆಸುತ್ತಾನೆ. ಆಗ ಶುದ್ಧ ಜ್ಞಾನವುಂಟಾಗಿ 'ವಿಷ್ಣು' ಎಂಬ ಪರಮ ಪದವು ಲಭಿಸುತ್ತದೆ (೧-೬-೧೨, ೧೩). ಕೇವಲ ಕರ್ಮಿಗಳಿಗೆ ಪ್ರಾಜಾಪತ್ಯವೇ ಮೊದಲಾದ ಶ್ರೇಷ್ಠ ಲೋಕವು ಲಭಿಸುತ್ತದೆ. ಸಂನ್ಯಾಸಿಗಳಾದ ಯೋಗಿಗಳಿಗೆ ಲಭಿಸತಕ್ಕದ್ದು ಬ್ರಹ್ಮವಸ್ತು. 'ಓಂ ನಮೋ ಭಗವತೇ ವಾಸುದೇವಾಯ' ಎಂಬ ದ್ವಾದಶಾಕ್ಷರ ಚಿಂತಕರು ಜ್ಞಾನದ್ವಾರ ಮೋಕ್ಷವನ್ನು ಪಡೆಯುತ್ತಾರೆ. (೧-೬-೩೭ ರಿಂದ ೪೦) ಧ್ರುವನು ಸಗುಣಮೂರ್ತಿಯಾದ ವಿಷ್ಣುವನ್ನು ಕಂಡರೂ ಮುಕ್ತನಾಗಲಿಲ್ಲ. ಭಗವದ್ ಧ್ಯಾನದಿಂದ ಬಹುಕಾಲದ ಮೇಲೆ ಪುಣ್ಯ ಪಾಪಗಳನ್ನು ತೊಡೆದು ಹಾಕಿ ಮೋಕ್ಷವನ್ನು ಪಡೆಯುತ್ತಾನೆ (೧-೨೦-೩೪). ಮೋಕ್ಷಪ್ರಾಪ್ತಿಗೆ ಪಾಪದಂತೆ ಪುಣ್ಯವೂ ವಿಘ್ನಕಾರಿಯೇ. 'ಜ್ಞಾನಾಗ್ನಿಃ ಸರ್ವಕರ್ಮಾಣಿ ಭಸ್ಮಸಾತ್ ಕುರುತೇಽರ್ಜುನ' ಎಂಬ ಗೀತಾವಾಕ್ಯದ ವಿವರಣೆ ಧ್ರುವನ ಮೋಕ್ಷಪ್ರಾಪ್ತಿಯಲ್ಲಿ ಸ್ಪಷ್ಟವಾಗುತ್ತದೆ. ಭಗವದ್‌ಧ್ಯಾನದಿಂದ ಜ್ಞಾನ, ಜ್ಞಾನದಿಂದ ಪುಣ್ಯಪಾಪಗಳ ನಿವೃತ್ತಿ, ಅನಂತರ ಮೋಕ್ಷಪ್ರಾಪ್ತಿ ಎಂಬುದು ಕ್ರಮ. ಧ್ಯಾನಯೋಗದ ವಿವರಣೆ ಖಾಂಡಿಕ್ಯ-ಕೇಶಿಧ್ವಜರ ಸಲ್ಲಾಪದಲ್ಲಿ ಬಹು ಸುಂದರವಾಗಿ ವರ್ಣಿತವಾಗಿದೆ. ಷಷ್ಠಾಂಶದ ಏಳನೆಯ ಅಧ್ಯಾಯದಲ್ಲಿ ಈ ವಿಷಯವಿದ್ದು ಈ ಭಾಗವು ವಿಷ್ಣುಪುರಾಣದ ಹೃದಯವೆನ್ನಬಹುದು. ಈ ಅಧ್ಯಾಯದಲ್ಲಿ ವಿಷ್ಣುವನ್ನು ಅಷ್ಟಭುಜನನ್ನಾಗಿಯೂ ಧ್ಯಾನಿಸಬಹುದೆಂದು ಹೇಳಿರುವುದು ಕುತೂಹಲಕರವಾಗಿದೆ. ಮೂರ್ತರೂಪವನ್ನು ಧ್ಯಾನಿಸುತ್ತ ಮೂರ್ತಿಯ ಒಂದೊಂದೇ ಅಂಶವನ್ನು ಕಳಚುತ್ತ ಭಗವಂತನ ಕಲ್ಪನಾಹೀನವಾದ ಸ್ವರೂಪಗ್ರಹಣವೇ ಸಮಾಧಿ ಎಂದು ಇಲ್ಲಿ ಹೇಳಿದೆ. ಈ ಸಮಾಧಿಯಲ್ಲಿ ಧ್ಯಾತಾ, ಧ್ಯೇಯ, ಧ್ಯಾನ ಎಂಬ ತ್ರಿಪುಟಿ ಇರುವುದಿಲ್ಲ. ಇದೇ ನಿರ್ವಿಕಲ್ಪಕ ಸಮಾಧಿ. ಈ ಸಮಾಧಿ ಯಾರಿಗೆ ಪ್ರಾಪ್ತವಾಗುವುದೋ ಅವನೇ ಕೃತಕೃತ್ಯ. ಆ ಸ್ಥಿತಿಯಲ್ಲಿ ಅಜ್ಞಾನಕೃತವಾದ ಭೇದವು ನಷ್ಟವಾಗಿ ಪರಮಾತ್ಮನೊಡನೆ ತದ್ಭಾವಭಾವವನ್ನು ಹೊಂದಿ ಅಭೇದಿಯಾಗುತ್ತಾನೆ-

ವಿಭೇದಜನಕೇऽಜ್ಞಾನೇ ನಾಶಮಾತ್ಯಂತಿಕಂ ಗತೇ।
ಆತ್ಮನೋ ಬ್ರಹ್ಮಣೋ ಭೇದಮಸಂತಂ ಕಃ ಕರಿಷ್ಯತಿ॥
(೬-೭-೯೬)

'ಭೇದಜ್ಞಾನವನ್ನುಂಟುಮಾಡುವ ಅಜ್ಞಾನವು ಸಂಪೂರ್ಣವಾಗಿ ನಾಶ ಹೊಂದಿದ ಮೇಲೆ ತನಗೂ ಬ್ರಹ್ಮವಸ್ತುವಿಗೂ ವಾಸ್ತವವಾಗಿ ಇಲ್ಲದಿರುವ ಭೇದವನ್ನು ಯಾವನು ಮಾಡಿಯಾನು!'

ಭಕ್ತಿಯ ಸ್ವರೂಪವೇನೆಂಬುದನ್ನು ತೋರಿಸುವ ಈ ಶ್ಲೋಕ ಮನೋಹರವಾಗಿದೆ–

ಯಾ ಪ್ರೀತಿರವೇಕಾನಾಂ ವಿಷಯೇಷ್ವನಪಾಯಿನೀ।
ತ್ವಾಮನುಸ್ಮರತಃ ಸಾ ಮೇ ಹೃದಯಾನ್ಮಾಪಸರ್ಪತು॥
(೧-೨೦-೧೯)

ಯಾವ ಯಾವ ಜನ್ಮ ಬಂದರೂ ನನಗೆ ನಿನ್ನಲ್ಲಿ ಅವ್ಯಭಿಚಾರಿಣೀ ಭಕ್ತಿ ಇರಲೆಂದು ಪ್ರಹ್ಲಾದನು ವಿಷ್ಣುವನ್ನು ಪ್ರಾರ್ಥಿಸಿಕೊಳ್ಳುತ್ತ ಈ ಮಾತನ್ನು ಹೇಳಿದ್ದಾನೆ. 'ವಿವೇಕಹೀನರಿಗೆ ವಿಷಯಸುಖಗಳನ್ನು ಕೊಡುವ ವಸ್ತುಗಳಲ್ಲಿ ಅವಿಚ್ಛಿನ್ನವಾದ ಯಾವ ಪ್ರೀತಿಯಿರುತ್ತದೆಯೋ, ಅಂತಹ ಪ್ರೀತಿಯು ಸದಾ ನಿನ್ನನ್ನು ಧ್ಯಾನಿಸುತ್ತಿರುವ ನನ್ನ ಹೃದಯದಿಂದ ಯಾವಾಗಲೂ ಚಲಿಸದಿರಲಿ.' ಇಂತಹ ಅವ್ಯಭಿಚಾರಿಣೀಭಕ್ತಿಯು ಯಾವ ಕೃತಕೃತ್ಯನಿಗೆ ಉಂಟಾಗುವುದೋ ಅವನಿಗೆ ಧರ್ಮಾರ್ಥ ಕಾಮಗಳಿಂದ ಆಗಬೇಕಾದದ್ದೇನೂ ಇಲ್ಲ. ಮುಕ್ತಿಯು ಅವನ ಕೈಯಲ್ಲಿಯೇ ಇರುತ್ತದೆ– 'ಮುಕ್ತಿಸ್ತಸ್ಯ ಕರೇ ಸ್ಥಿತಾ'.

ವಿಷ್ಣುಪುರಾಣ ಮತ್ತು ಶ್ರೀಮದ್ಭಾಗವತ

ಪ್ರಸಿದ್ಧವಾದ ವಿಷ್ಣುವಿನ ದಶಾವತಾರಗಳಲ್ಲಿ ಕೂರ್ಮ, ವರಾಹ, ನೃಸಿಂಹ, ಶ್ರೀರಾಮ ಮತ್ತು ಶ್ರೀಕೃಷ್ಣ ಈ ಐದು ಅವತಾರಗಳ ವಿಚಾರ ವಿಷ್ಣುಪುರಾಣದಲ್ಲಿ ಬಂದಿದೆ. ಇವುಗಳಲ್ಲಿ ಶ್ರೀರಾಮನ ಚರಿತೆ ಚಿಕ್ಕದಾಗಿಯೂ ಶ್ರೀಕೃಷ್ಣಚರಿತೆ ವಿಸ್ತಾರವಾಗಿಯೂ ಬಂದಿದೆ. ನೃಸಿಂಹನು ಹಿರಣ್ಯಕಶಿಪುವನ್ನು ಸಂಹರಿಸಿದ ವೃತ್ತಾಂತಕ್ಕೆ ಯಾವ ಪ್ರಾಧಾನ್ಯವೂ ಇಲ್ಲದೆ ಆನುಷಂಗಿಕವಾಗಿ ಒಂದೇ ಮಾತಿನಲ್ಲಿ ಸೂಚಿಸಲಾಗಿದೆ. ವಿಷ್ಣುವಿನ ದಶಾವತಾರಗಳ ವೃತ್ತಾಂತ ಪ್ರಧಾನವಾಗಿ ಕಾಣಿಸಿಕೊಳ್ಳುವುದು ಶ್ರೀಮದ್ ಭಾಗವತದಲ್ಲಿ. ವಿಷ್ಣುಪುರಾಣದಲ್ಲಿ ಭಕ್ತಿಯು ಪ್ರಧಾನವೆಂದು ನಿರೂಪಿತವಾಗಿದ್ದರೂ ಸೂಕ್ಷ್ಮರೂಪದಲ್ಲಿದೆ. ಇದು ಶ್ರೀಮದ್ಭಾಗವತದಲ್ಲಿ ವಿಸ್ತೃತವಾಗಿದ್ದು ಅತ್ಯಂತ ಮನೋರಮವಾಗಿ ನಿರೂಪಿತವಾಗಿದೆ. ಭಗವದ್ಭಕ್ತಿಯ ಶ್ರೇಷ್ಠತೆಯನ್ನು ಪ್ರತಿಪಾದಿಸುವುದಕ್ಕಾಗಿಯೇ ಭಾಗವತವು ವಿರಚಿತವಾಗಿದೆ ಎಂಬುದನ್ನು ಇಲ್ಲಿ ಸ್ಮರಿಸಿಕೊಳ್ಳಬಹುದು. ಭಕ್ತಿಯನ್ನು ವರ್ಣಿಸುವ ಪ್ರಸಂಗದಲ್ಲಿ

ಭಾಗವತಕಾರರು ಮೈಮರೆತು ಭಗವಂತನಲ್ಲಿ ತಲ್ಲೀನರಾಗಿರುತ್ತಾರೆ. ವಿಷ್ಣುಪುರಾಣದ ಎಲ್ಲ ಅಂಶಗಳ ವಿಸ್ತೃತ ನಿರೂಪಣೆ ಭಾಗವತದ ಉದ್ದೇಶವೆಂದು ತೋರುತ್ತದೆ. ಆದರೆ ವಿಷ್ಣುಪುರಾಣದ ಭಾಷಾಲಾಲಿತ್ಯ, ಸರಳತೆ ಭಾಗವತದಲ್ಲಿ ಕಂಡುಬರುವುದಿಲ್ಲ. ವಿಷಯ ಸಾಮ್ಯ, ಶಬ್ದಸಾದೃಶ್ಯ ಮುಂತಾದುವನ್ನು ಸೂಕ್ಷ್ಮವಾಗಿ ಅವಲೋಕಿಸಿದರೆ ಭಾಗವತವು ವಿಷ್ಣುಪುರಾಣದ ಭಾಷ್ಯವೆನಿಸಬಹುದು. ಹೇಗಿದ್ದರೂ ಭಾಗವತಕಾರರ ಕಣ್ಣೆದುರಿಗೆ ವಿಷ್ಣುಪುರಾಣವಿದ್ದಿತು–ಎಂದು ನಮ್ಮ ಖಚಿತವಾದ ಅಭಿಪ್ರಾಯ.

ಪುರಾಣಗಳ ಮಹತ್ತ್ವ

ಪುರಾಣಗಳನ್ನು ಶ್ರವಣಮಾಡಿಸುವ ಸಂಪ್ರದಾಯ ನಮ್ಮ ಭರತ ಖಂಡದಲ್ಲಿ ಪ್ರಾಚೀನಕಾಲದಿಂದಲೂ ನಡೆದುಬಂದಿದೆ. ಹಳ್ಳಿಹಳ್ಳಿ ಯಲ್ಲಿಯೂ ಪಟ್ಟಣದಲ್ಲಿಯೂ ದೇವಾಲಯ ಮುಂತಾದ ಸಾರ್ವಜನಿಕ ಸ್ಥಳದಲ್ಲಿಯೂ ಸಂಜೆಯ ಹೊತ್ತು ಪುರಾಣಶ್ರವಣ ಒಂದು ಸಾಮಾನ್ಯ ದೃಶ್ಯವಾಗಿತ್ತು. ಇತ್ತೀಚೆಗೆ ಈ ಪದ್ಧತಿ ಶಿಥಿಲವಾಗುತ್ತಿರುವುದು ನಮ್ಮ ಸಂಸ್ಕೃತಿಯು ಬೆಳವಣಿಗೆಗೆ ಅಪಾಯುಕಾರಿಯಾಗಿ ಪರಿಣಮಿಸುತ್ತಿದೆ. ರಾಮಾಯಣಮಹಾಭಾರತಗಳ ಸಾಮಾನ್ಯ ಪರಿಚಯವೂ ನಮ್ಮ ಮಕ್ಕಳಿಗೆ ಇಲ್ಲದಿರುವುದು ವಿಷಾದಕರ. ಧ್ರುವ, ಪ್ರಹ್ಲಾದ, ಮಾರ್ಕಂಡೇಯ, ಅಂಬರೀಷ ಮೊದಲಾದ ಭಕ್ತರ ಚರಿತೆಯಾಗಲಿ ನಳ, ಹರಿಶ್ಚಂದ್ರ, ಯಯಾತಿ ಮುಂತಾದ ಧೀರೋದಾತ್ತಪುರುಷರ ಕಥೆಯಾಗಲಿ ದಮಯಂತಿ, ಅನಸೂಯಾ, ಚಂದ್ರಮತಿ ಮುಂತಾದ ಸಾಧ್ವೀಶಿರೋ ಮಣಿಗಳ ವಿಚಾರವಾಗಲಿ, ಈಗಿನವರಿಗೆ ಅಪರಿಚಿತ. ಪುರಾಣಶ್ರವಣ ಪದ್ಧತಿಯು ಕ್ಷೀಣವಾಗುತ್ತಿರುವುದೇ ಇದಕ್ಕೆ ಕಾರಣ. ಅಲ್ಲದೆ, ನಮ್ಮವರಲ್ಲಿ ಬಲ್ಲವರೂ ಸಹ ಪುರಾಣದಲ್ಲೇನಿದೆ? ಎಂದು ಅಸಡ್ಡೆಯಿಂದ 'ನಿನ್ನ ಪುರಾಣ ಬೇಡ' ಎಂಬ ನಿಂದಾವಾಕ್ಯವನ್ನು ಬಳಸುವ ಮಟ್ಟಕ್ಕೆ ಹೋಗಿದ್ದಾರೆ. ಆದರೆ ವಸ್ತುಸ್ಥಿತಿ ಇವರು ತಿಳಿದುಕೊಂಡಿರುವುದಕ್ಕಿಂತ ಭಿನ್ನವಾಗಿದೆ. ಪುರಾಣವು 'ಚತುರ್ದಶ ವಿದ್ಯೆಗಳಲ್ಲೊಂದು' ಎಂದು ಪ್ರಾಚೀನರು ಹೇಳಿರುವುದು ಬರಿಯ ಪ್ರಶಂಸೆಯ ನುಡಿಯಲ್ಲ. ಸಾಮಾನ್ಯ ಜನರಿಗೆ ಅತ್ಯಾವಶ್ಯಕವಾದ ಲೌಕಿಕ ಮತ್ತು ಪಾರಮಾರ್ಥಿಕ ವಿಷಯಗಳನ್ನು ತಿಳಿಸುವುದಕ್ಕಾಗಿಯೇ ಪುರಾಣಗಳು ಹೊರಟಿವೆ ಎಂಬುದನ್ನು ಮರೆಯಕೂಡದು. ಇವುಗಳಲ್ಲಿ ಬರುವ ಕಥೆಗಳು ಅತ್ಯಂತ ರೋಚಕವಾದವು. ಕಲಿಯಬೇಕಾದ ಲೋಕನೀತಿಗಳು ಅಮೂಲ್ಯವಾದವು. ಶಾಸ್ತ್ರದ ಪೆಡಸಿಲ್ಲದೆ ಸುಲಭವಾಗಿ ವಿವರಿಸುವ ಆಧ್ಯಾತ್ಮತತ್ತ್ವಗಳು ಮನನೀಯವಾದವು. ಆನುಷಂಗಿಕವಾಗಿ ಪ್ರಸ್ತಾಪಿಸಲ್ಪಡುವ ಯೋಗ,

ಜ್ಯೌತಿಷ ಮುಂತಾದ ಸಾಹಿತ್ಯಗಳು ಅವಶ್ಯ ತಿಳಿಯಬೇಕಾದವು. ವಂಶ, ವಂಶಾನುಚರಿತಗಳಲ್ಲಿ ಬರುವ ಅತಿ ದೀರ್ಘವಾದ ಹೆಸರುಗಳ ಪಟ್ಟಿ ಬೇಸರ ತರಬಹುದಾದರೂ ಐತಿಹಾಸಿಕ ಮೌಲ್ಯ ಅದಕ್ಕುಂಟೆಂಬುದನ್ನು ಮರೆಯಬಾರದು. ಅಲ್ಲದೆ ಆಚಾರಸಂಹಿತೆ, ಧರ್ಮಸಂಹಿತೆ– ಇವು ಶಿಷ್ಟ ಜನರಿಗೆ ಉಪಯುಕ್ತವಾದವು.

ಪುರಾಣ ಕಥೆಗಳಲ್ಲಿ ಅದ್ಭುತವೂ ಅಲೌಕಿಕವೂ ಆದ ಸನ್ನಿವೇಶ ಗಳಿವೆ ಎಂಬುದು ನಿಜ. ಇದನ್ನು ನಂಬುವುದಕ್ಕಾಗುವುದಿಲ್ಲವೆಂದು ಕೆಲವರು ಆಕ್ಷೇಪಿಸುತ್ತಾರೆ. ನಂಬತಕ್ಕವರು ನಂಬಲಿ, ನಂಬದಿರು ವವರಿಗೂ ಈ ಕಥೆಗಳು ಮೌಲಿಕವಾದ ನೀತಿತತ್ತ್ವವನ್ನು ಸಾರುತ್ತವೆ– ಎನ್ನುವುದು ಸತ್ಯವೇ. ನಮ್ಮಲ್ಲಿ ಕ್ರಮಬದ್ಧವಾಗಿ ಪುರಾಣಗಳ ಶಾಸ್ತ್ರೀಯವಾದ ಅಧ್ಯಯನ ನಡೆದಿಲ್ಲ. ವೇದಾಂತಾದಿ ಶಾಸ್ತ್ರಗಳಲ್ಲಿಯೂ ಆಧುನಿಕ ವಿದ್ಯೆಗಳಲ್ಲಿಯೂ ಪರಿಣತರಾದ ವಿದ್ವಾಂಸರು ಈ ಕಾರ್ಯವನ್ನು ಶ್ರದ್ಧೆಯಿಂದ ಕೈಗೊಂಡರೆ ಭಾರತೀಯ ವಿದ್ಯೆಗೆ ಒಂದು ಮಹತ್ತರವಾದ ಸೇವೆಯನ್ನು ಸಲ್ಲಿಸಿದಂತಾಗುತ್ತದೆ.

೩. ವಿಷ್ಣುಪುರಾಣದ ತತ್ತ್ವವಿಚಾರ

ವಿಷ್ಣುಪುರಾಣೋಕ್ತ ಸೃಷ್ಟಿಕ್ರಮ

ಈ ಸೃಷ್ಟಿಪ್ರಕರಣದಲ್ಲಿ ಕಾಪಿಲಸಾಂಖ್ಯ ಮತ್ತು ವೇದಾಂತ ಪ್ರಕ್ರಿಯೆಗಳ ಸಂಮಿಶ್ರಣ ಕಂಡುಬರುತ್ತದೆ. ಇವುಗಳ ಸಮನ್ವಯ ಕ್ಲಿಷ್ಟವಾದದ್ದು. ಪೂರ್ವಾಪರಗಳಿಗೆ ಅಲ್ಲಲ್ಲಿ ವಿರೋಧವು ಸ್ಥೂಲದೃಷ್ಟಿಯಿಂದ ನೋಡಿದರೆ ಕಂಡುಬರುತ್ತದೆ. ಶ್ರೀಧರೀಯ ವ್ಯಾಖ್ಯಾನದಲ್ಲಿ ಈ ಗೊಂದಲವನ್ನು ಪರಿಹರಿಸಿ, ಪೂರ್ವಾಪರಗಳಿಗೆ ಏಕವಾಕ್ಯತೆಯನ್ನು ಸಾಧಿಸಿ, ಸುಂದರವಾಗಿ ಸಮನ್ವಯವನ್ನು ತೋರಿಸಲಾಗಿದೆ. ಅವ್ಯಕ್ತ, ಮಹತ್, ಅಹಂಕಾರ, ಸೂಕ್ಷ್ಮಭೂತಗಳು–ಈ ಕ್ರಮದಿಂದ ಸೃಷ್ಟಿಯಾಯಿತೆನ್ನುವುದು ವಿಷ್ಣುಪುರಾಣೋಕ್ತವಾದ ಕ್ರಮ. ಇದು ವೇದಾಂತಿಗಳಿಗೆ ಅಗ್ರಾಹ್ಯವಲ್ಲವಾದರೂ ಜಡವಾದ ಅವ್ಯಕ್ತ (ಪ್ರಧಾನ)ದಿಂದ ಸೃಷ್ಟಿಯಾಗುತ್ತದೆ ಎಂಬುದು ಅವರಿಗೆ ಸಂಮತವಲ್ಲ. ಆದ್ದರಿಂದ ಸಾಂಖ್ಯೋಕ್ತವಾದ ಅವ್ಯಕ್ತಾದಿ ಚತುರ್ವಿಂಶತಿ ತತ್ತ್ವಗಳಿಗೆ ಮೂಲವಾಗಿ ಮಹಾಚೈತನ್ಯ ಸ್ವರೂಪವಾದ ಆತ್ಮನನ್ನು ವೇದಾಂತಿಗಳು ಅಂಗೀಕರಿಸುತ್ತಾರೆ. ವಿಷ್ಣುಪುರಾಣವು ಈ ಮಹಾಚೈತನ್ಯವನ್ನು ಒಪ್ಪಿದೆ. ಸಾಂಖ್ಯರ ಅವ್ಯಕ್ತಶಬ್ದಕ್ಕೆ ಬದಲಾಗಿ ವೇದಾಂತಿಗಳ 'ಅವಿದ್ಯೆ' ಎಂಬ ಶಬ್ದವನ್ನು ಈ ಪುರಾಣವು ಬಳಸಿರುವುದು ಗಮನಾರ್ಹವಾದುದು. ಜಗನ್ಮೂಲವಾದ ಆ ಮಹಾಚೈತನ್ಯವೇ ಪರಬ್ರಹ್ಮ. ಈ ಬ್ರಹ್ಮವು ಗುಣತ್ರಯಗಳ ಸಂಬಂಧದಿಂದ ಬ್ರಹ್ಮ, ವಿಷ್ಣು, ರುದ್ರ ರೂಪಾದಿಗಳನ್ನು ಧರಿಸುವುದೆಂದು ಹಲವಾರು ಸ್ಥಳಗಳಲ್ಲಿ ಮತ್ತೆ ಮತ್ತೆ ವರ್ಣಿಸಲಾಗಿದೆ. ಬ್ರಹ್ಮವು ನಿರ್ಗುಣವಾದರೂ ಅಗ್ನಿಯಲ್ಲಿ ಉಷ್ಣತೆಯಿರುವಂತೆ ಅದರಲ್ಲಿ ಅಚಿಂತ್ಯವಾದ ಮಹಾಶಕ್ತಿಗಳಿರುತ್ತವೆ. ಶಕ್ತಿ–ಶಕ್ತಿಮತ್ ಇವುಗಳಿಗೆ ಅಭೇದವಿರುವುದರಿಂದ ಅದ್ವೈತಕ್ಕೆ ಚ್ಯುತಿಯಿಲ್ಲ. ವಿಷ್ಣುವೇ ಇತರ ಸಗುಣಮೂರ್ತಿಗಳಲ್ಲಿ ಶ್ರೇಷ್ಠವಾದ ಮೂರ್ತಿಯೆಂಬುದು ವಿಷ್ಣುಪುರಾಣದ ಮುಖ್ಯವಾದ ನಿಲುವು. ಆದ್ದರಿಂದ ವಿಷ್ಣುವಿಗೆ ಸರ್ವೋತ್ಕರ್ಷವನ್ನು ಪ್ರತಿಪಾದಿಸಿದ್ದಾರೆ. ಬ್ರಹ್ಮ ಮತ್ತು ಶಿವ ಇವರೂ ಸಹ ಪರಬ್ರಹ್ಮದ ಸಗುಣಮೂರ್ತಿಗಳೇ ಆದ್ದರಿಂದ ಈ ತ್ರಿಮೂರ್ತಿಗಳು ಸಮಾನರೆಂದೂ ಅಭಿನ್ನರೆಂದೂ

ನಿಸ್ಸಂದೇಹವಾಗಿ ಹೇಳಬಹುದಾದ ಸಿದ್ಧಾಂತವಾಗಿದೆ. ನಾರಾಯಣನೇ ಬ್ರಹ್ಮನೆಂದು ಈ ಮಾತುಗಳು ಸ್ಪಷ್ಟಪಡಿಸುತ್ತವೆ – 'ಬ್ರಹ್ಮಾನಾರಾಯಣಾಖ್ಯೋऽಸೌ' (೪–೧) 'ಬ್ರಹ್ಮಸ್ವರೂಪೀ ಭಗವಾನ್' (೧–೪–೪) 'ಸ್ವಯಂ ವಿಶ್ವೇಶ್ವರೋ ಹರಿಃ ಬ್ರಹ್ಮಾ ಭೂತ್ವಾ' (೧–೨–೬೧) 'ಬ್ರಹ್ಮರೂಪಧರಃ ಶೇತೇ ಭಗವನಾದಿ ಕೃತ್ ಹರಿಃ' (೬–೪–೪).

ಇನ್ನೊಂದು ವಿಶೇಷವನ್ನು ಇಲ್ಲಿ ಕಾಣಬಹುದು. ಸೃಷ್ಟಿ ಮಾಡುವಾಗ ಬ್ರಹ್ಮನೇ ತನ್ನ ದೇಹವನ್ನು ನಾನಾರೂಪಗಳಾಗಿ ಪರಿವರ್ತಿಸಿದನೆಂದು ವರ್ಣಿಸಿದೆ. ಅವನೇ ಸೃಜ್ಯನೆಂದೂ ಸೃಷ್ಟಿಕರ್ತನೆಂದೂ ವರ್ಣಿಸಲಾಗಿದೆ. ಅಲ್ಲದೆ 'ನಿಮಿತ್ತಮಾತ್ರಮೇವಾಸೌ' ಎಂದೂ ವರ್ಣಿಸಿ 'ಜಗಚ್ಚ ಸಃ' ಎಂದು ಹೇಳಿರುವುದರಿಂದ ಪರಬ್ರಹ್ಮವಸ್ತುವೇ ಜಗತ್ತಿಗೆ ನಿಮಿತ್ತ ಕಾರಣವೆಂದೂ ಉಪಾದಾನ ಕಾರಣವೆಂದೂ ಸ್ಪಷ್ಟವಾಗುತ್ತದೆ. ಈ ಪ್ರಮೇಯವು ಬಾದರಾಯಣಾಚಾರ್ಯರ ಬ್ರಹ್ಮಸೂತ್ರದ ಪ್ರಕೃತ್ಯಧಿಕರಣದ (೧–೪–೨೩) ಸಿದ್ಧಾಂತವೇ ಆಗಿದೆ ಎಂಬುದನ್ನು ಲಕ್ಷ್ಯದಲ್ಲಿಡಬೇಕು.

ಜಗತ್ತನ್ನು ಸೃಜಿಸಬೇಕೆಂದು ಪರಮಾತ್ಮನು ರಜೋಗುಣಯುಕ್ತನಾಗಿ ಬ್ರಹ್ಮರೂಪವನ್ನು ಧರಿಸಿದಾಗ ಅವಿದ್ಯೆ ಹುಟ್ಟುತ್ತದೆ. ಈ ಅವಿದ್ಯೆಯೇ ಸಾಂಖ್ಯರ ಅವ್ಯಕ್ತವೆಂದು ಹೇಳಬಹುದು. ಅದರಿಂದ ಮಹತ್ ತತ್ತ್ವದ ಸೃಷ್ಟಿ. ಮಹತ್‌ತತ್ತ್ವಕ್ಕೆ ಬುದ್ಧಿ ಎಂದೂ ಬ್ರಹ್ಮನೆಂದೂ ಹೆಸರಿದೆ. ಕೆಲವು ಪುರಾಣಗಳಲ್ಲಿ ಈ ಮಹತ್‌ತತ್ತ್ವವನ್ನೇ ಸೃಷ್ಟಿಕರ್ತನಾದ ಬ್ರಹ್ಮನೆಂದು ವ್ಯವಹರಿಸಲಾಗಿದೆ. ಪ್ರಕೃತ, ವಿಷ್ಣುಪುರಾಣದಲ್ಲಿ ಮಹತ್ತಿನ ಸೃಷ್ಟಿಯನ್ನು ಪ್ರಥಮಸೃಷ್ಟಿಯೆಂದೂ ಅದರಿಂದ ಅಹಂಕಾರವು ಸೇರಿ ಪಂಚತನ್ಮಾತ್ರೆಗಳ ಸೃಷ್ಟಿಯಾಯಿತೆಂದೂ ನಿರೂಪಿಸಲಾಗಿದೆ. ಪಂಚತನ್ಮಾತ್ರೆಗಳೇ ಸೂಕ್ಷ್ಮಭೂತಗಳು. ಇವುಗಳಿಂದ ಇಂದ್ರಿಯ ಗೋಚರಗಳಾದ ಸ್ಥೂಲಭೂತಗಳೂ ಅಗೋಚರಗಳಾದ ಇಂದ್ರಿಯಗಳೂ ಹುಟ್ಟಿದುವು. ಅನಂತರ ಮರ ಬಳ್ಳಿಗಳೇ ಮೊದಲಾದ ಸ್ಥಾವರಗಳ ಸೃಷ್ಟಿಯಾಯಿತು. ಅನಂತರ ಕ್ರಿಮಿಕೀಟಾದಿಗಳು ಹುಟ್ಟಿದುವು. ಆಮೇಲೆ ದೇವತೆಗಳ ಸೃಷ್ಟಿ. ಕಡೆಯಲ್ಲಿ ಹುಟ್ಟಿದವರು ಮನುಷ್ಯರು (೧–೫–೧೯ ರಿಂದ ೨೩). ದೇವತೆಗಳ ಸೃಷ್ಟಿ ಕಾರ್ಯ ಸಾಧಕವಲ್ಲವೆಂದು ಬಗೆದು ಬ್ರಹ್ಮನು ಮನುಷ್ಯರನ್ನು ಸೃಷ್ಟಿಸಿದನೆಂದು ಹೇಳಿದೆ. ಈ ಮನುಷ್ಯರಿಗೆ ಸತ್ತ್ವ, ರಜಸ್ಸು, ತಮಸ್ಸು, ಈ ಮೂರೂ ಗುಣಗಳೂ ಅಧಿಕವಾಗಿವೆ. ಸುಖಕ್ಕಿಂತ ದುಃಖವು ಇವರಿಗೆ ಅಧಿಕ. ಮನುಷ್ಯರು ಅತ್ಯಂತ ಕ್ರಿಯಾಶೀಲರು. ಬಾಹ್ಯ ಮತ್ತು ಆಂತರಿಕವಾದ ಜ್ಞಾನವುಳ್ಳವರಾದ್ದರಿಂದ ಇವರೇ ಕಾರ್ಯಸಾಧಕರೆಂದು ಬ್ರಹ್ಮನಿಗೆ ಹರ್ಷವಾಯಿತಂತೆ. ದೇವತೆಗಳಿಗಿಂತ ಮನುಷ್ಯರೇ ಅಧಿಕ ಭಾಗ್ಯಸಂಪನ್ನರೆಂಬುದು ಇಲ್ಲಿ ಸೂಚಿತವಾಗಿದೆ. ಏಕೆಂದರೆ, ಈ ಜನರಿಗೆ

ಕರ್ಮಾಧಿಕಾರವಿದ್ದು ಸ್ವರ್ಗಮೋಕ್ಷಗಳೆರಡನ್ನೂ ಪಡೆದುಕೊಳ್ಳಲು ಸಾಮರ್ಥ್ಯವುಂಟು. ಆದ್ದರಿಂದಲೇ ದೇವತೆಗಳು ಭರತ ಖಂಡದ ಪ್ರಾಶಸ್ತ್ಯವನ್ನು ಈ ರೀತಿಯಲ್ಲಿ ಹೊಗಳಿದ್ದಾರೆ:

ಗಾಯಂತಿ ದೇವಾಃ ಕಿಲ ಗೀತಕಾನಿ
ಧನ್ಯಾಸ್ತು ತೇ ಭಾರತಭೂಮಿಭಾಗೇ।
ಸ್ವರ್ಗಾಪವರ್ಗಾಸ್ಪದಮಾರ್ಗಭೂತೇ
ಭವಂತಿ ಭೂಯಃ ಪುರುಷಾಃ ಸುರತ್ವಾತ್॥

(೨-೩-೨೪)

ಜಾನೀಮ ನೈತತ್ ಕ್ವ ವಯಂ ವಿಲೀನೇ
ಸ್ವರ್ಗಪ್ರದೇ ಕರ್ಮಣಿ ದೇಹಬಂಧಮ್।
ಪ್ರಾಪ್ಸ್ಯಾಮ ಧನ್ಯಾಃ ಖಲು ತೇ ಮನುಷ್ಯಾಃ
ಯೇ ಭಾರತೇ ನೇಂದ್ರಿಯವಿಪ್ರಹೀನಾಃ॥

(೨-೩-೨೬)

ವಿಷ್ಣುಪುರಾಣದಲ್ಲಿ ಬಂದಿರುವ ರಾಷ್ಟ್ರಪ್ರೇಮಪೂರಿತವಾದ ಈ ಶ್ಲೋಕವು ಗಮನಾರ್ಹವಾದದ್ದು:

ಅತ್ರ ಜನ್ಮಸಹಸ್ರಾಣಾಂ ಸಹಸ್ರೈರಪಿ ಸತ್ತಮ।
ಕದಾಚಿಲ್ಲಭತೇ ಜಂತುರ್ಮಾನುಷ್ಯಂ ಪುಣ್ಯಸಂಚಯಾತ್॥

(೨-೪-೨೩)

ಭರತ ಖಂಡದ ಎಲ್ಲೆಯನ್ನು ವಿಷ್ಣುಪುರಾಣವು ಹೀಗೆ ಹೇಳಿದೆ:

ಉತ್ತರಂ ಯತ್ ಸಮುದ್ರಸ್ಯ ಹಿಮಾದ್ರೇಶ್ಚೈವ ದಕ್ಷಿಣಮ್।
ವರ್ಷಂ ತದ್‌ಭಾರತಂ ನಾಮ ಭಾರತೀ ಯತ್ರ ಸಂತತಿಃ॥

(೨-೩-೧)

ವಿಷ್ಣುಪುರಾಣದ ಪ್ರಕಾರ ಭಾರತವರ್ಷದಲ್ಲಿ ಇಂದ್ರದ್ವೀಪ ಮುಂತಾದ ಒಂಭತ್ತು ಭೇದಗಳಿವೆಯೆಂದು ತಿಳಿದುಬರುತ್ತದೆ. ಇವುಗಳಲ್ಲಿ ಎಂಟರ ಹೆಸರನ್ನು ಹೇಳಿದ್ದು ಒಂಭತ್ತನೆಯ ದ್ವೀಪದ ಹೆಸರನ್ನು ಹೇಳಿಲ್ಲ. 'ಅಯಂ ತು ನವಮಸ್ತೇಷಾಮ್' (೨-೩-೭) ಎಂದು ಮಾತ್ರ ಹೇಳಲಾಗಿದೆ. ಇಲ್ಲಿ 'ಅಯಂ' ಎಂದರೆ ಭಾರತದೇಶ ಎಂದು ವ್ಯಾಖ್ಯಾನಕಾರರು ಬರೆದಿದ್ದಾರೆ. (ನೋಡಿ: ಪ್ರಥಮ ಸಂಪುಟ ಪುಟ ೩೦೬) ವರಾಹ ಪುರಾಣದಲ್ಲಿ ಇಂದ್ರದ್ವೀಪಾದಿಗಳೊಡನೆ ಭಾರತವನ್ನೂ ಗಣಿಸಿರುವುದರಿಂದ ಈ ವ್ಯಾಖ್ಯಾನ ಪ್ರಾಮಾಣಿಕವಾದದ್ದು. ಈ ಭರತಖಂಡದ ಒಂದು ಭಾಗ 'ಭಾರತವರ್ಷ' ಎಂದು ಹೇಳಬಹುದಾಗಿದೆ. ನಮ್ಮ ಸಂಕಲ್ಪವಿಧಿಯಲ್ಲಿ 'ಭರತಖಂಡೇ ಭಾರತವರ್ಷೇ' ಎನ್ನುವುದನ್ನು ಇಲ್ಲಿ ಸ್ಮರಿಸಿಕೊಳ್ಳಬಹುದು. ಭರತಖಂಡ ಎಲ್ಲಿಯವರೆಗೆ, ಭಾರತವರ್ಷ ಎಲ್ಲಿಯವರೆಗೆ-

ಎಂದು ಎಲ್ಲೆಯನ್ನು ಗುರುತಿಸುವುದು ಕ್ಲಿಷ್ಟವಾದದ್ದು. ಈ ಭರತ ಭೂಮಿಯ ಪೂರ್ವದಲ್ಲಿ ಕಿರಾತರೂ ಪಶ್ಚಿಮದಲ್ಲಿ ಯವನರೂ ವಾಸವಾಗಿದ್ದಾರೆಂದು ಹೇಳಲಾಗಿದೆ. ಮಧ್ಯದಲ್ಲಿ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರರೆಂಬ ಚಾತುರ್ವರ್ಣ್ಯದವರು ನೆಲೆಸಿದ್ದಾರೆ. ಧರ್ಮಶಾಸ್ತ್ರದ ವಿಧಿನಿಷೇಧಗಳೆಲ್ಲವೂ ಈ ಚತುರ್ವರ್ಣೀಯರಿಗೆ ಸಂಬಂಧಿಸಿದವುಗಳು. ಆದ್ದರಿಂದ ಇದು ಕರ್ಮಭೂಮಿ. ಉಳಿದ ದೇಶಗಳೆಲ್ಲಾ ಭೋಗಭೂಮಿಗಳು (ಅತೋಽನ್ಯಾ ಭೋಗ ಭೂಮಯಃ). ಅವರಿಗೆ ವಿಧಿನಿಷೇಧಗಳಿಲ್ಲ. ಆದರೂ ಅವರೂ ಸಹ ಭಗವಂತನನ್ನು ಇನ್ನೊಂದು ಪ್ರಕಾರದಲ್ಲಿ ಅರ್ಚಿಸುತ್ತಾರೆಂದು ಹೇಳಿದ್ದಾರೆ. ಆದ್ದರಿಂದ ಅವರಿಗೆ ಪ್ರಕಾರಾಂತರದಿಂದ ಸದ್ಗತಿಯುಂಟೆಂದು ಸೂಚಿತವಾಗುತ್ತದೆ.

ಇಲ್ಲಿ ಗಮನಾರ್ಹವಾದ ಇನ್ನೊಂದು ವಿಷಯವೇನೆಂದರೆ, ಇಂದ್ರಿಯಗಳ ಸೃಷ್ಟಿಯಾದ ಮೇಲೆ ವೃಕ್ಷಲತೆಗಳೆಂಬ ಸ್ಥಾವರಗಳ ಸೃಷ್ಟಿಯನ್ನು ವರ್ಣಿಸಿರುವುದರಿಂದ ಅವುಗಳಿಗೆ ಇಂದ್ರಿಯಗಳಿವೆಯೆಂದೂ ಸೂಚಿತವಾಗುತ್ತದೆ. 'ಅಂತಃಸಂಜ್ಞಾ ಭವಂತ್ಯೇತೇ' ಎಂಬ ಭಾರತವಚನವು ಈ ಅಭಿಪ್ರಾಯಕ್ಕೆ ಪುಷ್ಟಿಯನ್ನೀಯುತ್ತದೆ.

ವಿಷ್ಣುಪುರಾಣೋಕ್ತವಂಶಾವಳಿ: ಇದರಲ್ಲಿ ಕ್ಷತ್ರಿಯರಾಜರ ವಂಶಾವಳಿ ಪ್ರಧಾನವಾಗಿ ಬಂದಿದೆ. ಉಳಿದ ಬ್ರಾಹ್ಮಣಾದಿಗಳ ವಂಶಚರಿತೆಯಿಲ್ಲ. ಅದು ಅಸಂಖ್ಯೇಯವೂ ಅನಂತವೂ ಅನುಪಯುಕ್ತವೂ ಆಗಿರುವುದೇ ಕಾರಣವಿರಬೇಕು. ಆಧುನಿಕ ಇತಿಹಾಸದಲ್ಲಿಯೂ ಸಹ ರಾಜವಂಶವೇ ಪ್ರಧಾನವಾಗಿ ವರ್ಣನೀಯವಾಗಿರುತ್ತದೆ. ಪ್ರಕೃತ, ಪರಮಾತ್ಮನಿಂದ ಪ್ರಜಾವರ್ಗ ಸೃಷ್ಟಿಯಾಯಿತಷ್ಟೆ. ಇದರಲ್ಲಿ ರಾಜ್ಯಾರ್ಹವಾದ ಕ್ಷತ್ರಿಯ ವಂಶವು ಸೂರ್ಯವಂಶ, ಚಂದ್ರವಂಶ ಎಂದು ಎರಡು ವಿಭಾಗವುಳ್ಳದ್ದು. ಇವೆರಡನ್ನು ಪರಿಶೀಲಿಸಿದಾಗ ಕುತೂಹಲಕರವೂ ಪ್ರಾಚ್ಯವಿದ್ಯಾ ಶೋಧಕರಿಗೆ ಉಪಯುಕ್ತವೂ ಆದ ಸಂಗತಿಯು ಗೋಚರಿಸುತ್ತದೆ. ಗಮನಾರ್ಹವಾದ ವಂಶಪರಂಪರೆಯನ್ನೂ ಕುತೂಹಲಕರವಾದ ಕೆಲವು ಅಂಶಗಳನ್ನೂ ಇಲ್ಲಿ ಬರೆಯಲು ಉದ್ದೇಶಿಸಲಾಗಿದೆ.

ಸೂರ್ಯವಂಶ: ವಿಷ್ಣು-ಬ್ರಹ್ಮ-ದಕ್ಷ-ವಿವಸ್ವಾನ್ (ಸೂರ್ಯ) ಇದು ಉಪಕ್ರಮ. ವಿವಸ್ವಂತನಿಂದ ಮನು, ಮನುವಿಗೆ ಇಕ್ಷ್ವಾಕು ಮೊದಲಾದ ದಶಪುತ್ರರು ಜನಿಸುತ್ತಾರೆ. ಈ ವಂಶದಲ್ಲಿ ಮರುತ್ತು, ಮಾಂಧಾತಾ, ತ್ರಿಶಂಕು, ಹರಿಶ್ಚಂದ್ರ, ಸಗರ, ಭಗೀರಥ, ಋತುಪರ್ಣ, ದಶರಥ, ಶ್ರೀರಾಮ, ಅಗ್ನಿವರ್ಣ, ಶೀಘ್ರಗ, ಮರು ಇವರು ಸ್ಮರಣೀಯರಾದ ರಾಜರು. ಮರುರಾಜನು ಯೋಗಧಾರಣೆ ಮಾಡಿ ಇಂದಿಗೂ ಕಲಾಪಗ್ರಾಮದಲ್ಲಿ

ವಾಸವಾಗಿದ್ದಾನೆಂದೂ ಮುಂದಿನ ಕೃತಯುಗದಲ್ಲಿ ಸೂರ್ಯವಂಶವನ್ನು ಸ್ಥಾಪಿಸುವನೆಂದೂ ಹೇಳಲಾಗಿದೆ. ಇಕ್ಷ್ವಾಕುವಂಶವು ಸುಮಿತ್ರನೆಂಬ ರಾಜನವರೆಗೆ ನಡೆಯುವದೆಂದು ತಿಳಿಸಲಾಗಿದೆ. 'ಇಕ್ಷ್ವಾಕೂಣಾಮಯಂ ವಂಶಃ ಸುಮಿತ್ರಾಂತೋ ಭವಿಷ್ಯತಿ' (೪-೨೨-೧೩).

ಈ ಸೂರ್ಯವಂಶದಲ್ಲಿ ಇಕ್ಷ್ವಾಕುವಿನ ಮಗ 'ನಿಮಿ'ಯಿಂದ ಇನ್ನೊಂದು ಕವಲು ಒಡೆಯುತ್ತದೆ. ಇದರಲ್ಲಿ ಜನಕವೈದೇಹ, ಸೀತೆಯ ತಂದೆಯಾದ ಸೀರಧ್ವಜ ಜನಕ ಮುಂತಾದ ರಾಜರು ಜನಿಸಿದ್ದಾರೆ. 'ಕೃತಿ' ಎಂಬ ರಾಜನವರೆಗೆ ನಿಮಿವಂಶ ನಡೆಯುತ್ತದೆ. ಶ್ರೀರಾಮ ಮತ್ತು ಜನಕರಾಜ ಇವರಿಬ್ಬರಿಗೂ ಇಕ್ಷ್ವಾಕುವೇ ಮೂಲಪುರುಷ. ಜನಕವಂಶದವರೆಲ್ಲ ಆತ್ಮವಿದ್ಯಾಪರಿಣತರು.

ಚಂದ್ರವಂಶ: ವಿಷ್ಣು-ಬ್ರಹ್ಮ-ಅತ್ರಿ-ಚಂದ್ರ-ಬುಧ-ಪುರೂರವ ಇದು ಚಂದ್ರವಂಶದ ಉಪಕ್ರಮ. ಸೂರ್ಯವಂಶಕ್ಕಿಂತ ಈ ವಂಶವು ತುಂಬ ವಿಸ್ತೃತವಾಗಿ ಕಂಡುಬರುತ್ತದೆ ಪುರೂರವನಿಂದ ಜಹ್ನು-(ವಿಶ್ವಾಮಿತ್ರರ ತಂದೆಯಾದ) ಗಾಧಿ, ಇವರ ಪರಂಪರೆ ಒಂದು ಶಾಖೆ. ಪುರೂರವನ ಮಗ ಆಯುವಿನಿಂದ ನಹುಷ-ಧನ್ವಂತರಿ-ಯಯಾತಿ-ಯದು-ಕಾರ್ತವೀರ್ಯ ಮೊದಲಾದವರ ಪರಂಪರೆ ಇನ್ನೊಂದು ಶಾಖೆ. ಮೇಲೆ ಹೇಳಿದ ಧನ್ವಂತರಿ ಆಯುರ್ವೇದಶಾಸ್ತ್ರದ ಪ್ರತಿಷ್ಠಾಪಕನೆಂದು ಹೇಳಿದ್ದಾರೆ. ಸಮುದ್ರಮಥನಕಾಲದಲ್ಲಿ ಧನ್ವಂತರಿ ಉದಿಸಿದನೆಂಬ ಪುರಾಣಾಂತರದ ಕಥೆಯೊಡನೆ ಇದರ ಸಾಮಂಜಸ್ಯ ಕ್ಲಿಷ್ಟವಾದದ್ದು. ಇಲ್ಲಿ ಹೇಳಿದ ಯದು ಶ್ರೀಕೃಷ್ಣ ಯಾದವವಂಶದ ಮೂಲಪುರುಷನೇ ಆಗಿದ್ದಾನೆ. ಈತನು ಕಾರ್ತವೀರ್ಯನಿಗಿಂತ ಹಿಂದಿನವನಾದ್ದರಿಂದ ತ್ರೇತಾಯುಗದವನೆಂದಾದರೂ ಒಪ್ಪಬೇಕಾಗುತ್ತದೆ. ಅಲ್ಲಿಗೆ ಯದುವಿಗೂ ಶ್ರೀಕೃಷ್ಣನಿಗೂ ನಡುವೆ ಅತಿದೀರ್ಘವಾದ ಕಾಲ ಸಂದುಹೋಗಿದೆಯೆಂದು ತಿಳಿಯಬೇಕು. ಯದುವಂಶದಲ್ಲಿ ಮಧು-ವೃಷ್ಣಿ-ಸತ್ವತ ಎಂಬವರು ಜನಿಸಿದ್ದರಿಂದ ಶ್ರೀಕೃಷ್ಣನು ಮಾಧವ, ವಾರ್ಷ್ಣೇಯ, ಸಾತ್ವತ ಎಂದು ಅಲ್ಲಲ್ಲಿ ಉಕ್ತನಾಗಿದ್ದಾನೆ. ಈ ಪ್ರಸಂಗದಲ್ಲಿ ಕುತೂಹಲಕಾರಿಯಾದ ಒಂದು ಸಂಗತಿ ಬಂದಿದೆ. ಜ್ಯಾಮಘ ಎಂಬವನು ಯದುವಂಶದಲ್ಲಿ ಜನಿಸಿರುತ್ತಾನೆ. ಇವನು ಭಾರ್ಯಾವಶ್ಯ ಹೆಂಡತಿಗೆ ಹೆದರುವವನು ಎಂದು ವಿಸ್ತೃತವಾಗಿ ವರ್ಣಿಸಲಾಗಿದೆ. ಇವನಿಗೆ ಸಮಾನರಾದ ಭಾರ್ಯಾವಶ್ಯರೇ ಇಲ್ಲ!

ಭಾರ್ಯಾವಶ್ಯಾಸ್ತು ಯೇ ಕೇಚಿತ್ ಭವಿಷ್ಯಂತ್ಯಥವಾ ಮೃತಾಃ।
ತೇಷಾಂ ತು ಜ್ಯಾಮಘಃ ಶ್ರೇಷ್ಠಃ ಶೈಬ್ಯಾಪತಿರಭೂನ್ನೃಪಃ॥

(೪-೧೨-೧೩)

ಈ ಯದುವಂಶದಲ್ಲಿ ಹುಟ್ಟಿದ ಶೂರನ ಮಗ ವಸುದೇವ. ವಸುದೇವನ ತಾಯಿ ಮಾರಿಷಾ. ಪೃಥಾ (ಕುಂತಿ), ಶ್ರುತದೇವಾ, ಶ್ರುತಶ್ರವಸ್ ಎಂಬುವರು ವಸುದೇವನ ಸೋದರಿಯರು. ಪೃಥೆಯನ್ನು ಕುಂತೀಭೋಜನಿಗೆ ದತ್ತಪುತ್ರಿಯಾಗಿ ಕೊಟ್ಟದ್ದರಿಂದ ಅವಳಿಗೆ ಕುಂತಿ ಎಂದು ಹೆಸರು ಪ್ರಸಿದ್ಧಿಗೆ ಬಂದಿತು. ಕುಂತಿಯ ಮಕ್ಕಳು ಪಾಂಡವರೆಂಬುದು ಪ್ರಸಿದ್ಧ. ಇವಳ ಸೋದರಿಯಾದ ಶ್ರುತದೇವಾ ಎಂಬವಳ ಮಗ ದಂತವಕ್ರ, ಶ್ರುತಶ್ರವಸ್ಸಿನ ಮಗ ಶಿಶುಪಾಲ. ಪಾಂಡವರೂ ಶಿಶುಪಾಲ ದಂತವಕ್ರರೂ ಅಕ್ಕತಂಗಿಯರ ಮಕ್ಕಳಾಗುತ್ತಾರೆ. ಶ್ರೀಕೃಷ್ಣನಿಗೆ ಪಾಂಡವರೂ ಶಿಶುಪಾಲನೂ ಸೋದರತ್ತೆಯ ಮಕ್ಕಳಾಗುತ್ತಾರೆ. ಮುಂದೆ ಶ್ರೀಕೃಷ್ಣನ ವಂಶವು ಪ್ರದ್ಯುಮ್ನ–ಅನಿರುದ್ಧ–ವಜ್ರ–ಪ್ರತಿಬಾಹು–ಸುಚಾರು ಎಂಬವರವರೆಗೆ ನಡೆಯುತ್ತದೆ. ಯಯಾತಿಯ ಇನ್ನೊಬ್ಬ ಮಗನಾದ ಪುರುವಿನ ವಂಶದಲ್ಲಿ ದುಷ್ಯಂತನು ಜನಿಸುತ್ತಾನೆ. ಈ ವಂಶದ 'ಹಸ್ತಿನ' ಎಂಬವನಿಂದ ಸ್ಥಾಪಿತವಾದದ್ದು ಹಸ್ತಿನಾವತೀ ನಗರ. ಹಸ್ತಿನನ ಮಗ ಅಮೀಢ. ಆತನ ಮಗ ದಿವೋದಾಸ. ದಿವೋದಾಸನ ಸೋದರಿ ರಾಮಾಯಣದಲ್ಲಿ ಬರುವ ಅಹಲ್ಯೆ ಎಂಬುದು ಸೋಜಿಗದ ಸಂಗತಿ. ಅಹಲ್ಯೆಯ ಮಗನಾದ ಶತಾನಂದನ ಪುತ್ರ ಸತ್ಯಧೃತಿ ಎಂಬ ಬ್ರಾಹ್ಮಣನು ಧನುರ್ವೇದಜ್ಞನಾಗಿದ್ದನು. ಈತನ ಮಗನೇ ಮಹಾಭಾರತದಲ್ಲಿ ಬರುವ ಕೃಪಾಚಾರ್ಯ. ಈ ದಿವೋದಾಸನ ವಂಶದಲ್ಲಿಯೇ ಕುರುರಾಜನು ಹುಟ್ಟುತ್ತಾನೆ. ಅವನಿಂದ ಬೃಹದ್ರಥ, ಜರಾಸಂಧ, ಮೊದಲಾದವರ ಒಂದು ವಂಶಶಾಖೆಯು ಬೆಳೆಯುತ್ತದೆ. ಇನ್ನೊಂದು ಶಾಖೆಯಲ್ಲಿ ಜಹ್ನು–ಶಂತನು–ಕೌರವ ಪಾಂಡವರು ಮುಂತಾದವರ ಶಾಖೆ ಬೆಳೆಯುತ್ತದೆ. ಏವಂಚ ಪಾಂಡವರಿಗೆ ಜರಾಸಂಧನು ದಾಯಾದ ಬಂಧುವಾಗುತ್ತಾನೆ. ಈ ಪಾಂಡವರ ವಂಶವು ಕ್ಷೇಮಕ–ಎಂಬ ರಾಜನವರೆಗೆ ನಡೆದು ಸಮಾಪ್ತವಾಗುತ್ತದೆ. ಇತ್ತ ಜರಾಸಂಧನ ವಂಶವು ರಿಪುಂಜಯನೆಂಬ ರಾಜನವರೆಗೆ ನಡೆದು ಕೊನೆಗೊಳ್ಳುತ್ತದೆ. ಅವನ ಅಮಾತ್ಯನಾದ ಸುನಿಕನು ರಿಪುಂಜಯನನ್ನು ಕೊಂದು, ಪ್ರದ್ಯೋತನೆಂಬ ತನ್ನ ಪುತ್ರನಿಗೆ ಪಟ್ಟಕಟ್ಟುತ್ತಾನೆ. ಅನಂತರ ಮಗಧರ ರಾಜ್ಯವು ಬೇರೆ ಬೇರೆ ಆಡಳಿತದಾರರಿಗೆ ಹಸ್ತಾಂತರಿತವಾಗಿ ಮಹಾಪದ್ಮ ಎಂಬ ರಾಜನವರೆಗೆ ಬರುತ್ತದೆ. ಇವನಿಗೆ 'ನಂದ' ಎಂಬ ಇನ್ನೊಂದು ಹೆಸರಿತ್ತು. ಈತನು ಮಹಾಶೂರನಾಗಿದ್ದು ಸಮಸ್ತರಾಜರನ್ನೂ ಸ್ವಾಧೀನಪಡಿಸಿಕೊಂಡಿದ್ದನು. ಈ ಮಹಾಪದ್ಮನ ತಂದೆ ಮಹಾನಂದಿ. ತಾಯಿ ಶೂದ್ರಜಾತಿಯವಳು. ಈತನೂ ಈತನ ಎಂಟುಮಂದಿ ಮಕ್ಕಳೂ ಸೇರಿ ನವನಂದರೆಂದು ವಿಖ್ಯಾತರಾಗಿದ್ದಾರೆ. ಈ ನಂದರನ್ನು ಸಂಹರಿಸಿ, ಕೌಟಿಲ್ಯನು ಚಂದ್ರಗುಪ್ತನಿಗೆ ಪಟ್ಟಾಭಿಷೇಕ ಮಾಡಿದನೆಂಬುದು ಇತಿಹಾಸ ಪ್ರಸಿದ್ಧವಾದ ಸಂಗತಿ. ಯಾದವರೂ ಜರಾಸಂಧಾದಿಗಳು ಚಂದ್ರವಂಶೀಯರೆಂಬುದು ನೆನಪಿನಲ್ಲಿಡಬೇಕಾದದ್ದು.

ಚಂದ್ರವಂಶದಲ್ಲಿ ದೇವಾಪಿ ಎಂಬ ರಾಜನು ಯೋಗಾರೂಢನಾಗಿ, ಸೂರ್ಯವಂಶದ ಮರುವಿನಂತೆ ಕಲಾಪಗ್ರಾಮದಲ್ಲಿ ನೆಲೆಸಿದ್ದು ಮುಂದೆ ಚಂದ್ರವಂಶದ ಕ್ಷತ್ರಿಯಕುಲವನ್ನು ಬೆಳೆಸುತ್ತಾನೆಂದು ತಿಳಿಸಲಾಗಿದೆ.

ಚಮತ್ಕಾರಿಯಾದ ಮತ್ತೊಂದು ಸಂಗತಿ ಏನೆಂದರೆ, ಯಯಾತಿ ಪುತ್ರನಾದ 'ಅನು'ವಿನ ವಂಶದಲ್ಲಿ ದಿವಿರಥ, ಧರ್ಮರಥ, ಚಿತ್ರರಥ ಎಂಬುವರು ಕ್ರಮವಾಗಿ ಜನಿಸುತ್ತಾರೆ. ಚಿತ್ರರಥನಿಗೆ 'ರೋಮಪಾದ' ಎಂಬ ಇನ್ನೊಂದು ಹೆಸರಿತ್ತು. ಇವನಿಗೆ ಸಂತತಿ ಇರಲಿಲ್ಲ. ಆದ್ದರಿಂದ ಇವನ ಮಿತ್ರನಾದ ದಶರಥನು (ಶ್ರೀರಾಮನ ತಂದೆ) ತನ್ನ ಮಗಳಾದ ಶಾಂತಾ ಎಂಬುವಳನ್ನು ರೋಮಪಾದನಿಗೆ ದತ್ತುಕೊಟ್ಟಿದ್ದನು (೪-೧೮-೧೫ ರಿಂದ ೧೮). ಈ ಹೇಳಿಕೆಗೆ ವಿರುದ್ಧವಾದ ಹೇಳಿಕೆ 'ಹರಿವಂಶ'ದಲ್ಲಿ ಕಂಡುಬರುತ್ತದೆ.

"ಧರ್ಮರಥನ ಮಗ ಚಿತ್ರರಥ. ಚಿತ್ರರಥನ ಮಗ ದಶರಥ. ಇವನಿಗೆ ರೋಮಪಾದ ಎಂಬ ಮತ್ತೊಂದು ಹೆಸರಿತ್ತು. ಈತನಿಗೆ ಶಾಂತ ಎಂಬ ಮಗಳಿದ್ದಳು" (ಹರಿವಂಶ-೧೩-೪೪ ರಿಂದ ೪೬). ವಿಷ್ಣುಪುರಾಣದ ಪ್ರಕಾರ ಚಿತ್ರರಥನೆಂಬ ರೋಮಪಾದನಿಗೆ ದಶರಥಪುತ್ರಿಯಾದ ಶಾಂತಾ ದತ್ತಪುತ್ರಿಯಾಗುತ್ತಾಳೆ. ಹರಿವಂಶದ ಪ್ರಕಾರ ದಶರಥನೆಂಬ ರೋಮಪಾದನಿಗೆ ಶಾಂತಾ ಎಂಬ ಮಗಳಿರುತ್ತಾಳೆ. ಇಲ್ಲಿ ರೋಮಪಾದನ ನಿಜವಾದ ಹೆಸರೇನೆಂಬುದು ಈ ಗ್ರಂಥಗಳಲ್ಲಿ ಪರಸ್ಪರ ವಿರುದ್ಧವಾಗಿದೆ. ಶಾಂತ ಎಂಬವಳು ರೋಮಪಾದನ ಔರಸಪುತ್ರಿಯೋ ಅಥವಾ ದತ್ತಕಪುತ್ರಿಯೋ ಎಂಬುದು ಹರಿವಂಶದಲ್ಲಿ ಸ್ಪಷ್ಟವಾಗಿಲ್ಲ.

ಶ್ರೀಕೃಷ್ಣ ಚರಿತೆ

ವಿಷ್ಣುಪುರಾಣದ ಪಂಚಮಾಂಶವು ಶ್ರೀಕೃಷ್ಣಚರಿತೆಗೆ ಮೀಸಲಾಗಿದೆ. ವಿಷ್ಣುವಿನ ಅವತಾರಗಳಲ್ಲಿ ಶ್ರೀರಾಮ ಮತ್ತು ಶ್ರೀಕೃಷ್ಣ ಇವರಿಬ್ಬರ ಕಥಾನಕ ಸುಪ್ರಸಿದ್ಧವಾದದ್ದು. ಶ್ರೀರಾಮಚರಿತೆಗೆ ವಾಲ್ಮೀಕಿಮುನಿಗಳ ಶ್ರೀಮದ್‌ರಾಮಾಯಣವು ಮೀಸಲಾಗಿರುವುದರಿಂದ ಶ್ರೀಕೃಷ್ಣ ಚರಿತೆಯನ್ನು ಇಲ್ಲಿ ವಿಸ್ತರಿಸಬೇಕೆಂದು ಪುರಾಣಕಾರರ ಆಶಯವಾಗಿರಬಹುದು. ಶ್ರೀಕೃಷ್ಣನು ವಿಷ್ಣುವಿನ ಪೂರ್ಣಾವತಾರವೆಂಬ ಹೇಳಿಕೆ ಉಂಟು. ವಿಷ್ಣುಪುರಾಣದಲ್ಲಿಯಾದರೋ ಈತನು ಪರಮಾತ್ಮನ ಅಂಶವೆಂದು ಹಲವಾರು ಕಡೆಗಳಲ್ಲಿ ಸ್ಪಷ್ಟವಾಗಿ ನಿರೂಪಿಸಲಾಗಿದೆ.

ಅಂಶಾವತಾರೋ ಬ್ರಹ್ಮರ್ಷೇ ಯೋಽಯಂ ಯದುಕುಲೋದ್ಭವಃ।
(೫-೧-೨)

ವಿಷ್ಣೋರಂಶೇ ಭುವಂ ಯಾತೇ :

ಯೋಽಹಮಂಶಾವತೀರ್ಣಸ್ಯ ಮುಖಂ ದ್ರಕ್ಷ್ಯಾಮಿ ಚಕ್ರಿಣಃ।
(೫-೧೭-೨)

ಭಗವದ್ ವಸುದೇವಾಂಶೋ ದ್ವಿಧಾ ಯೋಽಯಂ ವ್ಯವಸ್ಥಿತಃ।
(೫-೧೮-೨೬)

ಅಂಶೇನ ಲೋಕಮಾಯಾತಃ ಪ್ರಸಾದಸುಮುಖಃ ಪ್ರಭೋ।
(೫-೨೯-೨೫)

ಬಹುಶಃ ಶ್ರೀಕೃಷ್ಣಾವತಾರದಲ್ಲಿ ಶಂಖಚಕ್ರಾದಿಗಳ ಧಾರಣೆಯೂ ಗರುಡಾರೋಹಣವೂ ಹಲವಾರು ಅಮಾನುಷಲೀಲೆಗಳೂ, ವರ್ಣಿತವಾಗಿರುವುದರಿಂದ ಉಳಿದ ಅವತಾರಗಳ ಅಪೇಕ್ಷೆಯಿಂದ ನೋಡಿದಾಗ ಇದು ಪೂರ್ಣಾವತಾರ ಎಂಬ ಹೇಳಿಕೆ ಬಂದಿರಬಹುದು.

ಈ ಪಂಚಮಾಂಶವು ಶ್ರೀಕೃಷ್ಣಚರಿತೆಯನ್ನು ವರ್ಣಿಸುವ ಒಂದು ಸುಂದರ ಕಾವ್ಯವಾಗಿದೆ. ಇದರಲ್ಲಿ ಪೌರಾಣಿಕ ಅಂಶಗಳಿಗಿಂತ ಕಾವ್ಯಾಂಶಗಳೇ ಅಧಿಕವಾಗಿವೆ. ಶರದ್ ವರ್ಣನೆ, ರಾಸಕ್ರೀಡೆ, ಗೋಪೀವಿರಹ, ಕುಬ್ಜಾಪ್ರಸಂಗ, ಪಾರಿಜಾತಹರಣ, ಉಷಾಚರಿತೆ-ಮೊದಲಾದುವು ಬಹು ಮನೋಜ್ಞವಾಗಿ ಚಿತ್ರಿತವಾಗಿವೆ. ಕಡೆಯಲ್ಲಿ ಶ್ರೀಕೃಷ್ಣಾವತಾರವು ಸಮಾಪ್ತವಾದಮೇಲೆ ದಸ್ಯುಗಳಿಂದ ಅರ್ಜುನನ ಪರಾಭವ, ಆತನ ಶೋಕಾಲಾಪಗಳು, ವ್ಯಾಸರ ಸಮಾಧಾನೋಕ್ತಿ-ಇವು ಅವಶ್ಯವಾಗಿ ಸಹೃದಯರ ಗಮನವನ್ನು ಸೆಳೆಯುತ್ತವೆ. ಅರ್ಜುನನ ವಿಷಾದಪ್ರಸಂಗವು ಮಹಾಭಾರತದಲ್ಲಿರುವುದಕ್ಕಿಂತ ಮನೋಹರವಾಗಿ ಇಲ್ಲಿ ನಿರೂಪಿತವಾಗಿದೆ. ಶ್ರೀಕೃಷ್ಣನು ಇದರಲ್ಲಿ ಬರುವುದಿಲ್ಲ. ಗೋಪೀವಸ್ತ್ರಾಪಹರಣದ ಕಥೆಯ ಪ್ರಸ್ತಾಪವೇ ವಿಷ್ಣುಪುರಾಣದಲ್ಲಿ ಬಂದಿಲ್ಲವೆಂಬುದು ಗಮನಾರ್ಹವಾದ ಸಂಗತಿ.

ಎರಡು ವಿರೋಧಾಭಾಸಗಳು

ಅಕ್ರೂರನು ಶ್ರೀಕೃಷ್ಣನ ಮಹಿಮೆಯನ್ನರಿತವನೂ ಭಗವದ್ ಭಕ್ತನೂ ಆಗಿದ್ದನು. ಅಂಥವನು ಶ್ಯಮಂತಕಮಣಿ ಪ್ರಸಂಗದಲ್ಲಿ ವರ್ತಿಸಿದ ರೀತಿ ವಿಚಿತ್ರವಾಗಿ ತೋರುತ್ತದೆ. ಸತ್ರಾಜಿತನನ್ನು ವಧಿಸುವ ಸಂಚಿನಲ್ಲಿ ಭಾಗಿಯಾಗಿದ್ದುದಲ್ಲದೆ ಶ್ಯಮಂತಕಮಣಿಯನ್ನು ಶ್ರೀಕೃಷ್ಣನಿಗೆ ಗೊತ್ತಾಗದಂತೆ ಗುಪ್ತವಾಗಿ ತನ್ನಲ್ಲಿ ಇಟ್ಟುಕೊಂಡಿರುತ್ತಾನೆ. ತನಗೆ ಪೂಜ್ಯನಾದ ಶ್ರೀಕೃಷ್ಣನಿಗೆ ತನ್ನಿಂದಲೇ ದ್ರೋಹ ಚಿಂತನೆಯಾದದ್ದು ವಿರೋಧಾಭಾಸವಾಗಿ ಕಾಣುತ್ತದೆ.

ಅಂತೆಯೇ ಭಾಗವತ ಶಿರೋಮಣಿಯೂ ಅತ್ಯಂತ ಸಜ್ಜನನೂ ಆದ ಉದ್ಧವನು ದುರುಳನಾದ ಕಂಸನ ಸೇವೆಯಲ್ಲಿದ್ದು ಆತನ ವಿಶ್ವಾಸಕ್ಕೆ ಪಾತ್ರನಾಗಿದ್ದುದು ಸೋಜಿಗದ ಸಂಗತಿ.

ಕಲಿಯುಗದ ಪ್ರಸ್ತಾವ

ಸಾಮಾನ್ಯವಾಗಿ ಎಲ್ಲ ಪುರಾಣಗಲ್ಲಿಯೂ ಒಂದಲ್ಲ ಒಂದು ಕಡೆ ಕಲಿಯುಗದ ಪ್ರಸ್ತಾವ ಬಂದಿರುತ್ತದೆ. ಆ ಕಾಲದಲ್ಲಿ ಅಧರ್ಮ ತಾಂಡವವಾಡುವುದೆಂದು ಬರುವ ವರ್ಣನೆ ಸಹಜವಾಗಿರುತ್ತದೆ. ವಿಷ್ಣುಪುರಾಣದಲ್ಲಿ ಕಲಿಯುಗದ ವಿಚಾರ ಸಂದರ್ಭೋಚಿತವಾಗಿ ಬಂದಿದ್ದು ಅತ್ಯಂತ ರಸವತ್ತಾಗಿದೆ. ವಂಶಪರಂಪರೆಯನ್ನು ಹೇಳುತ್ತ ಮಹಾಪದ್ಮನಂದನನ ವರೆಗೆ ಅನುಕ್ರಮಿಸಿ "ತತಃ ಪ್ರಭೃತಿ ಶೂದ್ರಾ ಭೂಪಾಲಾ ಭವಿಷ್ಯಂತಿ" ಎಂಬುದು ಅರ್ಥವತ್ತಾಗಿದೆ. ಕ್ರಿಪೂ. ೪೧೦ರಲ್ಲಿ ಮಹಾಪದ್ಮನಂದನ ಪಟ್ಟಾಭಿಷೇಕವಾದಂತೆ ತಿಳಿದುಬರುತ್ತದೆ. ಅದಕ್ಕೆ ೧೫೦೦ ವರ್ಷಗಳ ಹಿಂದೆ ಪರೀಕ್ಷಿತನ ಜನ್ಮಕಾಲವೆಂದು ವಿಷ್ಣುಪುರಾಣದ ವಚನಗಳಿಂದ ಗೊತ್ತಾಗುತ್ತದೆ. ಆಗಲೇ ಕಲಿಯ ಪ್ರವೇಶವಾಗಿತ್ತು. ಶ್ರೀಕೃಷ್ಣನು ತನ್ನ ಅವತಾರವನ್ನು ಸಮಾಪ್ತಿಗೊಳಿಸಿದ ಮೇಲೆ ಕಲಿಯು ದೃಢಮೂಲವಾಯಿತು. ಅನಂತರ ಅಧರ್ಮವು ವರ್ಧಿಸುತ್ತ ಹೋಗುವುದು. ಆಗ ರಾಜ್ಯಾಧಿಕಾರವನ್ನು ನಿರ್ವಹಿಸತಕ್ಕವರ ವರ್ತನೆ ಹೇಗಿರುವುದೆಂಬುದನ್ನು ಬಹು ಸುಂದರವಾಗಿ ವರ್ಣಿಸಲಾಗಿದೆ. ವಾಚಕರು ಈ ಪ್ರಕರಣವನ್ನು ಅವಶ್ಯವಾಗಿ ಓದಿ ನೋಡಬೇಕು (೪-೨೪-೧೨೩ ರಿಂದ ೧೫೧).

ಕಲಿಯುಗದಲ್ಲಿ ಮೂರು ಅಂಶಗಳು ಸುಲಭವಾಗಿದ್ದು ಪ್ರಜೆಗಳ ಶ್ರೇಯಸ್ಸಿಗೆ ಕಾರಣವಾಗುತ್ತವೆ-ಎಂದು ವಿಷ್ಣುಪುರಾಣ ಹೇಳುತ್ತದೆ. ಏನೆಂದರೆ, ಕೃತಯುಗದಲ್ಲಿ ದೀರ್ಘವಾದ ತಪಸ್ಸಿನಿಂದ, ತ್ರೇತಾಯುಗದಲ್ಲಿ ಯಜ್ಞಗಳಿಂದ, ದ್ವಾಪರಯುಗದಲ್ಲಿ ಭಗವಂತನನ್ನು ವಿಧಿಪೂರ್ವಕವಾಗಿ ಅರ್ಚಿಸುವುದರಿಂದ ಯಾವ ಫಲವು ಲಭಿಸುತ್ತಿತ್ತೋ ಅದು ಕಲಿಯುಗದಲ್ಲಿ ಹರಿನಾಮಕೀರ್ತನದಿಂದ ಸರ್ವರಿಗೂ ದೊರಕುತ್ತದೆ. ಅಲ್ಪಾಯಾಸದಿಂದಲೇ ಮಹತ್ತರವಾದ ಧರ್ಮಪ್ರಾಪ್ತಿಯಾಗುತ್ತದೆ. ಸ್ತ್ರೀಯರು ತ್ರಿಕರಣಪೂರ್ವಕವಾಗಿ ಪತಿಸೇವೆ ಮಾಡುವುದರಿಂದಲೇ ಆತನ ಎಲ್ಲ ಪುಣ್ಯಗಳಿಗೂ ಪಾಲುದಾರಳಾಗುತ್ತಾಳೆ. ಶೂದ್ರನಿಗೆ ಭಕ್ಷ್ಯಾಭಕ್ಷ್ಯ ನಿಯಮವಾವುದೂ ಕಲಿಯುಗದಲ್ಲಿಲ್ಲ. ನಿಷ್ಠೆಯಿಂದ ತನ್ನ ಕರ್ತವ್ಯವನ್ನು ಪಾಲಿಸುವುದರಿಂದಲೇ ಸದ್ಗತಿಯನ್ನು ಪಡೆಯುತ್ತಾನೆ. ಹೀಗೆ ಹಲವು ವಿಧಗಳಲ್ಲಿ ಕಲಿಯುಗವು ಶ್ರೇಯಸ್ಸಾಧನೆಗೆ ಲಘು ಉಪಾಯದಿಂದಲೇ

ಸಿದ್ಧಿಯನ್ನುಂಟುಮಾಡುತ್ತದೆ. ಮಾನವಜಾತಿಯ ಮನೋದೌರ್ಬಲ್ಯವನ್ನೂ ಧರ್ಮನಿಷ್ಠೆಯಲ್ಲಿ ಶ್ರದ್ಧೆಯ ಶೈಥಿಲ್ಯವನ್ನೂ ಅನುಲಕ್ಷಿಸಿ ಶ್ರೇಯಸ್ಸಿಗೆ ಸುಲಭೋಪಾಯವನ್ನು ತೋರಿಸಿಕೊಟ್ಟ ಪುರಾಣಕರ್ತೃಗಳಿಗೆ ನಾವು ಕೃತಜ್ಞರಾಗಿರಬೇಕು.

ಅಧ್ಯಾತ್ಮ

ಈ ಮೊದಲು ವಿಷ್ಣುಪುರಾಣ ಪ್ರತಿಪಾದ್ಯವಾದ ಅಧ್ಯಾತ್ಮತತ್ತ್ವವನ್ನು ಸಂಕ್ಷೇಪವಾಗಿ ತಿಳಿಸಲಾಗಿದೆಯಷ್ಟೆ. ಇದು ಔಪನಿಷದ ದರ್ಶನವೇ ಆಗಿದ್ದರೂ ಭಾಗವತ ಸಂಪ್ರದಾಯದ ಛಾಯೆ ಅಲ್ಲಲ್ಲಿ ಕಂಡುಬರುತ್ತದೆಂಬುದನ್ನು ತಿಳಿಯಬೇಕು. ಉದಾಹರಣೆಗೆ,

ಓಂ ನಮೋ ವಾಸುದೇವಾಯ ನಮಃ ಸಂಕರ್ಷಣಾಯ ಚ।
ಪ್ರದ್ಯುಮ್ನಾಯ ನಮಸ್ತುಭ್ಯಮನಿರುದ್ಧಾಯ ತೇ ನಮಃ॥
(೫–೧೮–೫೮)

ಈ ಶ್ಲೋಕದಲ್ಲಿ ಚತುರ್ವ್ಯೂಹದ ಕಲ್ಪನೆ ಸ್ಪಷ್ಟವಾಗಿದೆ. ಆದರೆ ಈ ವಾಸುದೇವಾದಿಮೂರ್ತಿಗಳು ಒಂದೇ ಪರತತ್ತ್ವದ ವಿಭಿನ್ನ ರೂಪಗಳೆಂದು ವಿಷ್ಣುಪುರಾಣವು ಪ್ರತಿಪಾದಿಸುತ್ತದೆ. ಈ ಶ್ಲೋಕವನ್ನು ನೋಡಿ–

ಭೂತಾತ್ಮಾ ಚೇಂದ್ರಿಯಾತ್ಮಾ ಚ ಪ್ರಧಾನಾತ್ಮಾ ತಥಾ ಭವಾನ್।
ಆತ್ಮಾ ಚ ಪರಮಾತ್ಮಾ ಚ ತ್ವಮೇಕಃ ಪಂಚಧಾ ಸ್ಥಿತಃ॥
(೫–೧೮–೫೦)

ಸರ್ವಜ್ಞನೂ ಸರ್ವಶ್ರೇಷ್ಠನೂ ಆದ ಪರಮೇಶ್ವರನು ಪರಂಜ್ಯೋತಿಯ ಒಂದು ಅಂಶ–

ಪರಂಜೋತಿರಚಿಂತ್ಯಂ ಯತ್ತದಂಶಃ ಪರಮೇಶ್ವರಃ॥
(೫–೭–೪೮)

ಸೋಽಪ್ಯಂಶಃ ಸರ್ವಭೂತಸ್ಯ ಮೈತ್ರೇಯ ಪರಮಾತ್ಮನಃ॥
(೬–೪–೩೬)

ಬಲರಾಮನೂ ಸಹ ವಸ್ತುತಃ ಭಗವಂತನೇ ಆಗಿದ್ದಾನೆ. ಜಗದ್ ವ್ಯವಹಾರಪಾಲನೆಗಾಗಿ ಬಲರಾಮನೆಂದೂ ಶ್ರೀಕೃಷ್ಣನೆಂದೂ ಎರಡು ವ್ಯಕ್ತಿಗಳಾಗಿ ಭಗವಂತನು ಅವತರಿಸಿದ್ದಾನೆ ಎಂದು ವಿಷ್ಣುಪುರಾಣವು ಹೇಳುತ್ತದೆ–

ಭವಾನಹಂ ಚ ವಿಶ್ವಾತ್ಮನ್ನೇಕಮೇವ ಚ ಕಾರಣಮ್।
ಜಗತೋಽಸ್ಯ ಜಗತ್ಯರ್ಥೇ ಭೇದೇನಾವಾಂ ವ್ಯವಸ್ಥಿತೌ॥
(೫–೯–೩೨)

ದೇವತೆಗಳೂ ಸಹ ಅರ್ಚಿಸುವುದು ಪರಬ್ರಹ್ಮದ ಸಗುಣ ರೂಪವನ್ನು, ಅವನ ಪರತತ್ತ್ವವನ್ನು ಯಾವನೂ ಅರಿಯನು–

ಭವತೋ ಯತ್ಪರಂ ರೂಪಂ ತನ್ನ ಜಾನಾತಿ ಕಶ್ಚನ।
ಅವತಾರೇಷು ಯದ್ರೂಪಂ ತದರ್ಚಂತಿ ದಿವೌಕಸಃ॥

(೪–೪–೧೭)

ಬ್ರಹ್ಮವಿಷ್ಣುಶಿವಾ ಬ್ರಹ್ಮನ್ ಪ್ರಧಾನಾ ಬ್ರಹ್ಮಶಕ್ತಯಃ॥

(೧–೨೨–೫೮)

ಇತ್ಯಾದಿ ವಾಕ್ಯಗಳಿಂದ ವಿಷ್ಣುವು ಪರಬ್ರಹ್ಮದ ಸಗುಣ ರೂಪವೆಂದೂ ಸ್ಫುಟವಾಗಿ ತಿಳಿದುಬರುತ್ತದೆ. ವಾಚಾಮಗೋಚರವಾದ ನಿರ್ಗುಣವೂ ನಿರ್ವಿಶೇಷವೂ ಆದ ಪರಬ್ರಹ್ಮವನ್ನು 'ಭಗವಾನ್' ಎಂದು ಕರೆಯುವುದೂ ಸಹ ಔಪಚಾರಿಕವಾಗಿ–ಎಂದು ತಿಳಿಸುವ ಈ ಶ್ಲೋಕ ಗಮನಾರ್ಹವಾದದ್ದು;

ಅಶಬ್ದಗೋಚರಸ್ಯಾಪಿ ತಸ್ಯ ವೈ ಬ್ರಹ್ಮಣೋ ದ್ವಿಜ।
ಪೂಜಾಯಾಂ ಭಗವಚ್ಛಬ್ದಃ ಕ್ರಿಯತೇ ಹ್ಯುಪಚಾರತಃ॥

(೬–೫–೭೧)

ಜ್ಞೇಯವಾದ ಪರಬ್ರಹ್ಮವು ನಾಮಜಾತ್ಯಾದಿರಹಿತವೂ ಸತ್ತಾಮಾತ್ರಾತ್ಮಕವೂ ಜ್ಞಾನಸ್ವರೂಪವೂ ಆದದ್ದು–

ನ ಸಂತಿ ಯತ್ರ ಸರ್ವೇಶೇ ನಾಮಜಾತ್ಯಾದಿಕಲ್ಪನಾಃ।
ಸತ್ತಾಮಾತ್ರಾತ್ಮಕೇ ಜ್ಞೇಯೇ ಜ್ಞಾನಾತ್ಮನ್ಯಾತ್ಮನಃ ಪರೇ॥

(೬–೪–೩೭)

ಮೋಕ್ಷಸ್ವರೂಪ

ಆತ್ಯಂತಿಕ ಪ್ರಳಯವನ್ನು ಮೋಕ್ಷವೆಂದು ವಿಷ್ಣುಪುರಾಣವು ಹೇಳಿದೆ. ಆತ್ಯಂತಿಕ ಎಂದರೆ ಕಡೆಯದಾಗಿ–ಪುನರ್ಜನ್ಮವೇ ಇಲ್ಲದಂತೆ–ಪರಬ್ರಹ್ಮದಲ್ಲಿ ಪೂರ್ಣವಾಗಿ ಲಯಿಸುವುದು ಎಂದರ್ಥ. ನೀರಲ್ಲಿ ನೀರು ಸೇರಿದಂತೆ ಸೇರಿ ಹೋಗುವುದು. ಇನ್ನೊಂದು ವಸ್ತುವಿನಲ್ಲಿ ಭಿನ್ನವಾದ ಮತ್ತೊಂದು ವಸ್ತು ಸಂಪೂರ್ಣವಾಗಿ ಲಯಿಸುವುದು ಶಕ್ಯವಾದ್ದಲ್ಲ. ನೀರಿನೊಡನೆ ಇನ್ನೊಂದು ನೀರು ಸೇರಿದಾಗ ಮೊದಲಿದ್ದ ನೀರು ಪ್ರಮಾಣದಲ್ಲಿ ಹಿಗ್ಗುತ್ತದೆ. ಹಾಗೆ ಬ್ರಹ್ಮವಸ್ತು ಹಿಗ್ಗುವಂತಹುದಲ್ಲ. ಆದ್ದರಿಂದ 'ಅಹಂ ಬ್ರಹ್ಮಾಸ್ಮಿ' ಎಂಬ ಸಮ್ಯಗ್ದರ್ಶನವೇ ಮೋಕ್ಷವೆಂದು ಸಿದ್ಧವಾಗುತ್ತದೆ.

ಸಾಧನಮಾರ್ಗ

ಮಾನವನ ಜನನ ಮರಣಗಳಿಗೆ ಆತನ ಪಾಪಪುಣ್ಯಗಳೇ ನಿಮಿತ್ತ. ಜನನವೆಂದರೆ

ಶರೀರಗ್ರಹಣವಷ್ಟೆ. ಶರೀರವು ಭೋಗಾಯತನ. ಪಾಪಪುಣ್ಯಗಳ ಫಲಾನುಭವವೇ ಭೋಗ. ಇವೆರಡರ ಸಂಬಂಧ ಕಳಚಿದಾಗ ಮೋಕ್ಷವು ಸ್ವತಃಸಿದ್ಧ-

ಕ್ಷೀಣಾಧಿಕಾರಃ ಸ ಯದಾ ಪುಣ್ಯಪಾಪವಿವರ್ಜಿತಃ।
ತದಾ ಸ ಭಗವದ್‌ಧ್ಯಾನಾತ್ ಪರಂ ನಿರ್ವಾಣಮಾಪ್ತವಾನ್॥

(೧-೨೧-೩೪)

ಎಂಬುದಾಗಿ ಪ್ರಹ್ಲಾದನು ಮೋಕ್ಷ ಹೊಂದಿದ ಪ್ರಕಾರವನ್ನು ವರ್ಣಿಸಲಾಗಿದೆ. ಅಂತೆಯೇ ಕೇಶಿಧ್ವಜನು ಜ್ಞಾನಿಯಾಗಿದ್ದರೂ ಸ್ವಕರ್ಮಕ್ಷಪಣೋನ್ಮುಖನಾಗಿ ಫಲಾಭಿಸಂಧಿಯಿಲ್ಲದೆ ಕರ್ಮ ವನ್ನಾಚರಿಸುತ್ತ ಆತ್ಯಂತಿಕಸಿದ್ಧಿಯನ್ನು ಪಡೆದಿದ್ದಾನೆ. 'ಭಗವದ್ ಧ್ಯಾನಾತ್' ಎಂದು ಮೇಲೆ ಹೇಳಿದೆಯಷ್ಟೆ. ಈ ಧ್ಯಾನಪ್ರಕಾರ ಹೇಗೆಂಬುದನ್ನು ಖಾಂಡಿಕ್ಯಜನಕ-ಕೇಶಿಧ್ವಜರ ಸಂವಾದದಲ್ಲಿ ಬಹುಸುಂದರವಾಗಿ ನಿರೂಪಿಸಲಾಗಿದೆ. ಆರನೆಯ ಅಂಶದ ಏಳನೆಯ ಅಧ್ಯಾಯದಲ್ಲಿ ಬರುವ ಕೇಶಿಧ್ವಜನ ಉಪದೇಶಸಾರ ಹೀಗಿದೆ:

"ವಿಷ್ಣುವಿನ ಪರಮಾರ್ಥಸ್ವರೂಪವು ಬ್ರಹ್ಮಸಂಜ್ಞಿತಜ್ಞಾನವಾಗಿದ್ದು, ಧ್ಯಾನಕ್ಕೆ ಸುಲಭವಾದ್ದಲ್ಲ. ಅದು-

ಪ್ರತ್ಯಸ್ತಮಿತಭೇದಂ ಯತ್ ಸತ್ತಾಮಾತ್ರಮಗೋಚರಮ್।
ವಚಸಾಮಾತ್ಮಸಂವೇದ್ಯಂ ತಜ್ಞಾನಂ ಬ್ರಹ್ಮಸಂಜ್ಞಿತಮ್॥

(೬-೭-೫೩)

ಇದು ಶ್ರೇಷ್ಠವಾದ ವಿಷ್ಣುಶಕ್ತಿ. ಇದರ ಇನ್ನೊಂದು ಶಕ್ತಿ ಕ್ಷೇತ್ರಜ್ಞ (ಜೀವಾತ್ಮ) ಎನಿಸುತ್ತದೆ. ಮೂರನೆಯದು 'ಅವಿದ್ಯಾಶಕ್ತಿ'. ಈ ಅವಿದ್ಯಾಶಕ್ತಿಯಿಂದ ಕ್ಷೇತ್ರಜ್ಞಶಕ್ತಿಯು ಆವೃತವಾಗಿರುತ್ತದೆ. ಈ ಕ್ಷೇತ್ರಜ್ಞನು ಸರ್ವಭೂತಗಳಲ್ಲಿಯೂ ತಾರತಮ್ಯದಿಂದ ವ್ಯವಸ್ಥಿತನಾಗಿದ್ದಾನೆ. ಅಮೂರ್ತವೂ ಸತ್ಪದವಾಚ್ಯವೂ ಆದ ಸ್ವರೂಪವು ಸಿದ್ಧರಾದ ಯೋಗಿಗಳಿಗೆ ಮಾತ್ರ ಧ್ಯೇಯವಾಗಿದೆ. ಸಾಧಕನಾದವನು ಭಗವಂತನ ಮೂರ್ತರೂಪವನ್ನು ಮೊದಲು ಧ್ಯಾನಿಸುತ್ತಿರಬೇಕು. ಅದು ಅಷ್ಟಭುಜವುಳ್ಳ ಅಥವಾ ಚತುರ್ಭುಜವುಳ್ಳ ವಿಷ್ಣುವಿನ ಸುಂದರ ಮೂರ್ತಿಯಾಗಿರಬೇಕು. ಆ ಮೂರ್ತಿಯು ಶಂಖಚಕ್ರ ಗದಾದಿಗಳಿಂದ ಭೂಷಿತವಾಗಿರತಕ್ಕದ್ದು. ಇಂತಹ ಮೂರ್ತಿಯಲ್ಲಿ ಚಿತ್ತಧಾರಣೆಯು ದೃಢವಾದ ಮೇಲೆ ಶಂಖಚಕ್ರಗದಾದ್ಯಾಯುಧ ರಹಿತವೂ ಅಕ್ಷಸೂತ್ರ ಸಹಿತವೂ ಆದ ಮೂರ್ತಿಯನ್ನು ಧ್ಯಾನಿಸತಕ್ಕದ್ದು. ಅದರಲ್ಲಿ ಧಾರಣೆಯು ಮತ್ತೂ ದೃಢವಾದ ಮೇಲೆ ಸರ್ವಭೂಷಣರಹಿತವಾದ ಏಕಾವಯವನಾದ ಅಖಂಡಮೂರ್ತಿಯ ಧ್ಯಾನದಲ್ಲಿ ತೊಡಗಬೇಕು. ಅನಂತರ ಅವಯವರಹಿತವಾದ ಆತ್ಮಸ್ವರೂಪದಲ್ಲಿ ಮನಸ್ಸನ್ನು

ದೃಢಗೊಳಿಸಬೇಕು. ಕಲ್ಪನಾಹೀನವಾದ ಸ್ವರೂಪದಲ್ಲಿ ಮನಸ್ಸನ್ನು ಲಯಗೊಳಿಸುವುದು ಸಮಾಧಿ ಎನಿಸುತ್ತದೆ. ಈ ಸಮಾಧಿಸ್ಥಿತಿಯಲ್ಲಿ ಭಗವತ್ ಸ್ವರೂಪದ ಸಾಕ್ಷಾತ್ಕಾರವಾಗುತ್ತದೆ. ಆಗ ಈತನು ಕೃತಕೃತ್ಯನಾಗುತ್ತಾನೆ. ತದ್ಭಾವಭಾವವನ್ನು ಹೊಂದಿ ಪರಮಾತ್ಮನೊಡನೆ ಅಭಿನ್ನವಾಗಿ ನೆಲೆಸುವುದೇ ಮುಕ್ತಿ. ಪರಮಾತ್ಮನಿಗೂ ತನಗೂ ಭೇದವನ್ನು ತಿಳಿದುಕೊಂಡಿರುವುದು ಅಜ್ಞಾನಕೃತ. ಈ ಅಜ್ಞಾನ ನಷ್ಟವಾದ ಮೇಲೆ ಭೇದಜ್ಞಾನ ಉಳಿಯುವುದೇ ಇಲ್ಲ–

ವಿಭೇದಜನಕೇಽಜ್ಞಾನೇ ನಾಶಮಾತ್ಯಂತಿಕಂ ಗತೇ।
ಆತ್ಮನೋ ಬ್ರಹ್ಮಣೋ ಭೇದಮಸಂತಂ ಕಃ ಕರಿಷ್ಯತಿ॥

(೬–೭–೯೬)

ಲೋಕವ್ಯವಹಾರವು ಮಾತ್ರ 'ನಾನು, ನನ್ನದು' ಎಂಬ ಅವಿದ್ಯಾ ಮೂಲಕವಾದ ಭೇದಜ್ಞಾನದಿಂದ ನಡೆಯುತ್ತದೆ–

ಅಹಂ ಮಮೇತ್ಯವಿದ್ಯೇಯಂ ವ್ಯವಹಾರಸ್ತಥಾನಯೋಃ।
ಪರಮಾರ್ಥಸ್ತ್ವಸಂಲೋಪೋ ಗೋಚರೇ ವಚಸಾಂ ನ ಯಃ॥

(೬–೭–೧೦೦)

ಭಗವದ್ಭಕ್ತಿ, ನಿಷ್ಕಾಮಕರ್ಮ–ಇವೆರಡು ಜ್ಞಾನಕ್ಕೆ ಸಾಧನಗಳೆಂದು ವಿಷ್ಣುಪುರಾಣವು ಪ್ರತಿಪಾದಿಸುತ್ತದೆ.

೪. ಭಾಗವತದ ವೈಶಿಷ್ಟ್ಯ

ಯಶೋದಾಯಾ ಭಾಗ್ಯಂ ಸಮುಪಚಿತಪುಣ್ಯಂ ವ್ರಜಸದಾಂ
ವಿಧಿಃ ಕಂಸಾದೀನಾಂ ನಿಧಿರನವಧಿರ್ವೇದವಚಸಾಮ್।
ಮತಿಃ ಕೌಂತೇಯಾನಾಂ ಗತಿರಮೃತದಾತ್ರೀ ಜನಿಭೃತಾಂ
ಮಹೋ ಮೇ ಹೃದ್ಯಾಸ್ತಾಂ ಕಿಮಪಿ ತಿರಯನ್ಮೋಹತಿಮಿರಮ್॥

ಭಾಗವತದ ವೈಶಿಷ್ಟ್ಯ

ಭಾಗವತವು ಅಷ್ಟಾದಶಮಹಾಪುರಾಣಗಳಲ್ಲಿ ಒಂದೆಂದು ಪ್ರಸಿದ್ಧವಾಗಿದೆ. 'ಭಗವಂತಮಧಿಕೃತ್ಯ ಕೃತೋ ಗ್ರಂಥಃ ಭಾಗವತಂ–ಭಗವಂತನಾದ ವಿಷ್ಣುವನ್ನು ಕುರಿತು ರಚಿತವಾದ ಗ್ರಂಥ ಭಾಗವತ' ಎಂದು ಭಾಗವತ ಶಬ್ದದ ವ್ಯುತ್ಪತ್ತಿ. ಇದನ್ನು ವಿಷ್ಣುಭಾಗವತ ಎಂದೂ ಕೆಲವರು ಹೇಳುತ್ತಾರೆ. ಏಕೆಂದರೆ, 'ದೇವೀಭಾಗವತ' ಎಂಬ ಇನ್ನೊಂದು ಪುರಾಣ ಉಂಟು. ಅದು ಭಗವತಿಯಾದ ದೇವಿಯನ್ನು ಕುರಿತು ರಚಿಸಿದ ಗ್ರಂಥ. ಇವೆರಡರಲ್ಲಿಯೂ ಹನ್ನೆರಡು ಸ್ಕಂಧಗಳಿದ್ದು ಎರಡರಲ್ಲಿಯೂ ಹದಿನೆಂಟುಸಾವಿರ ಶ್ಲೋಕಗಳಿವೆ. ಪುರಾಣಾಂತರಗಳಲ್ಲಿ ಹೇಳಿದ ಭಾಗವತದ ಲಕ್ಷಣ ಎರಡರಲ್ಲಿಯೂ ಇದೆ. ಭಾಷಾಶೈಲಿಯನ್ನು ಗಮನಿಸಿದರೆ ದೇವೀಭಾಗವತವೇ ಇತರ ಹದಿನೇಳು ಪುರಾಣಗಳಿಗೆ ಸಂವಾದಿಯಾಗಿದೆ. ಆದರೆ ಪದ್ಮಪುರಾಣ ಮತ್ತು ಸ್ಕಾಂದಪುರಾಣಗಳಲ್ಲಿ ಲಕ್ಷಿಸಿರುವ ಭಾಗವತವು ವಿಷ್ಣುಭಾಗವತವೇ.

ಈ ವಿವಾದ ಹೇಗಾದರೂ ಇರಲಿ. ಪ್ರಕೃತವಾದ ಈ ಭಾಗವತವು ವಿದ್ವನ್ಮಾನ್ಯವೂ ವಿದ್ವತ್ಪ್ರಿಯವೂ ಆಗಿದೆ. ವೈದಿಕಧರ್ಮದವರೆಲ್ಲರೂ ಇದನ್ನು ಆದರಿಸಿ ಪುರಸ್ಕರಿಸಿದ್ದಾರೆ. ಲೋಕಕಲ್ಯಾಣಕ್ಕಾಗಿ ಭಗವಂತನು ಎತ್ತಿದ ವಿವಿಧ ಅವತಾರದ ಕಥೆಗಳಿಂದಲೂ, ಆನುಷಂಗಿಕವಾದ ಇತರ ಕಥೆಗಳಿಂದಲೂ ರಸವತ್ತಾಗಿದೆ. ಇಲ್ಲಿ ಪ್ರತಿಪಾದಿತವಾದ ವೇದಾಂತತತ್ತ್ವಗಳು ಇಷ್ಟು ವ್ಯವಸ್ಥಿತವಾಗಿ ಉಳಿದ ಹದಿನೇಳು ಪುರಾಣಗಳಲ್ಲಿಯೂ ಬಂದಿಲ್ಲವೆನ್ನಬಹುದು. ಈ ಭಾಗವತವು ಪುರಾಣಗಳ ಶಿರೋಮಣಿ. ಇತಿಹಾಸಗಳೆನಿಸಿದ

ರಾಮಾಯಣ, ಮಹಾಭಾರತಗಳೊಡನೆ ಭಾಗವತವನ್ನು ಪ್ರವಚನಕ್ಕಾಗಿ ನಮ್ಮವರು ಆರಿಸಿಕೊಂಡಿದ್ದಾರೆ. ಉಪನಿಷತ್ತು, ಬ್ರಹ್ಮಸೂತ್ರ, ಭಗವದ್ಗೀತೆಗಳು ಪ್ರಸ್ಥಾನತ್ರಯುವಾಗಿರುವಂತೆ, ರಾಮಾಯಣ ಮಹಾಭಾರತ ಭಾಗವತಗಳು 'ಪ್ರವಚನತ್ರಯ'ವಾಗಿವೆ.

ಭಾಗವತದ ರಚನೆ

ವ್ಯಾಸಮುನಿಗಳು ವೇದಾರ್ಥೋಪಬೃಂಹಿತವಾದ ಮಹಾಭಾರತವನ್ನು 'ಸ್ತ್ರೀಶೂದ್ರದ್ವಿಜಬಂಧು'ಗಳಿಗಾಗಿ ರಚಿಸಿದರು. ಭಗವದ್ಗೀತೆಯೇ ಮೊದಲಾದ ವಿಭಾಗಗಳಲ್ಲಿ ದಾರ್ಶನಿಕತತ್ತ್ವವನ್ನು ಸ್ಫುಟವಾಗಿ ಅಳವಡಿಸಿದರು. ಲೋಕಹಿತಕ್ಕಾಗಿ ಆ ಮಹಾಕಾರ್ಯವನ್ನು ಸಾಂಗವಾಗಿ ನೆರವೇರಿಸಿದರೂ ಅವರ ಮನಸ್ಸಿಗೆ ಶಾಂತಿಯು ದೊರಕದೆ ಸರಸ್ವತೀ ನದೀತೀರದಲ್ಲಿ ಪರಿತಪಿಸುತ್ತ ಕುಳಿತಿದ್ದರಂತೆ. ಅಲ್ಲಿಗೆ ನಾರದರು ಬರಲಾಗಿ ತಮ್ಮ ಮನಸ್ಸಿನ ಪರಿತಾಪವನ್ನು ಅವರಿಗೆ ಹೇಳಿದರೆಂದೂ ಆಗ ನಾರದರು "ಭಗವಂತನ ಮಹಿಮೆಯನ್ನು ನೀನು ಸಾಕಷ್ಟು ವರ್ಣಿಸಿಲ್ಲ. ಭಕ್ತಿಮಾರ್ಗದ ಶ್ರೇಷ್ಠತೆಯನ್ನು ವಿಶೇಷವಾಗಿ ನಿರೂಪಿಸಿಲ್ಲ. ಈ ಕೊರತೆಯನ್ನು ನೀಗಿಕೊಳ್ಳಲು ಇನ್ನೊಂದು ಗ್ರಂಥವನ್ನು ರಚಿಸಿದರೆ, ನಿನಗೆ ಈ ಬವಣೆ ತಪ್ಪಿ ಶಾಂತಿ ದೊರಕುವುದು" ಎಂದು ಹೇಳಿದರಂತೆ. ಆಗ ವ್ಯಾಸಮುನಿಗಳು ಈ ಭಾಗವತವನ್ನು ರಚಿಸಿದರು–ಎಂದು ತಿಳಿದುಬರುತ್ತದೆ (ಭಾಗವತ ಸ್ಕಂಧ ೧–ಅಧ್ಯಾಯ ೪–೫). ಅನಂತರ ವ್ಯಾಸರು ಇದನ್ನು ಶುಕಮುನಿಗಳಿಗೆ ಬೋಧಿಸಿದರು. ಶಾಪಗ್ರಸ್ತನಾದ ಪರೀಕ್ಷಿತರಾಜನು ವ್ರತಚರ್ಯೆಯಲ್ಲಿದ್ದಾಗ, ಶುಕಮುನಿಗಳು ಏಳು ದಿನಗಳವರೆಗೆ ಈ ಭಾಗವತವನ್ನು ಆತನಿಗೆ ಶ್ರವಣಮಾಡಿಸಿದರು. (ಭಾಗವತ ೧–೧೯).

ಪದ್ಮಪುರಾಣದಲ್ಲಿ ಇದರ ಮುಂದಿನ ಕಥೆ ಹೀಗಿದೆ: "ಪರೀಕ್ಷಿತನು ಭಾಗವತವನ್ನು ಶ್ರವಣಮಾಡಿದಮೇಲೆ, ಕಲಿಯುಗದಲ್ಲಿ ಇನ್ನೂರು ವರ್ಷಗಳು ಕಳೆಯಲಾಗಿ, ಗೋಕರ್ಣ ಎಂಬವನು ತನ್ನ ಸೋದರನಾಗಿದ್ದ ಧುಂಧಕಾರಿಗೆ ಇದನ್ನು ಹೇಳಿ, ಆತನಿಗೆ ಬಂದಿದ್ದ ಪ್ರೇತಜನ್ಮವನ್ನು ಹೋಗಲಾಡಿಸಿದನು. ಅನಂತರ ಮುವ್ವತ್ತು ವರ್ಷಗಳು ಕಳೆದ ಮೇಲೆ ಬ್ರಹ್ಮನ ಮಾನಸಪುತ್ರರಾದ ಸನತ್ಕುಮಾರಾದಿಗಳು ನಾರದರಿಗೆ ಭಾಗವತ ಕಥೆಯನ್ನು ಹೇಳಿದರು" (ಪದ್ಮಪುರಾಣ, ಉತ್ತರಖಂಡ).

ಪದ್ಮಪುರಾಣದಲ್ಲಿ ಈ ವಿಷಯವಾಗಿ ಹೇಳಿರುವ ಕಥೆ ಗಮನಾರ್ಹವಾದುದು. "ಭಕ್ತಿಯೆಂಬ ಸ್ತ್ರೀ ದ್ರಾವಿಡದೇಶದಲ್ಲಿ ಹುಟ್ಟಿ, ಕರ್ನಾಟಕ ದೇಶದಲ್ಲಿ ಬೆಳೆದು, ಮಹಾರಾಷ್ಟ್ರದಲ್ಲಿ ಕೆಲವೆಡೆ ಇದ್ದು, ಗುರ್ಜರದಲ್ಲಿ (ಗುಜರಾತ್) ಮುದುಕಿಯಾದಳಂತೆ! ಅವಳಿಗೆ ಜ್ಞಾನ,

ವೈರಾಗ್ಯ ಎಂಬ ಇಬ್ಬರು ಮಕ್ಕಳಿದ್ದರು. ಅವರನ್ನು ಕರೆದುಕೊಂಡು ವೃಂದಾವನಕ್ಕೆ ಹೊಗಲು ಅವಳಿಗೆ ಮತ್ತೆ ತಾರುಣ್ಯ ಬಂದಿತು. ಜ್ಞಾನ, ವೈರಾಗ್ಯ-ಎಂಬ ಮಕ್ಕಳು ಮಾತ್ರ ಮುದುಕರೂ ಬಲಹೀನರೂ ಆಗಿದ್ದುದರಿಂದ ಭಕ್ತಿಯು ಶೋಕಿಸುತ್ತ ಯಮುನಾ ತಟದಲ್ಲಿದ್ದಳು. ನಾರದರು ಅವಳ ಕಷ್ಟವನ್ನರಿತು ಅದರ ಪರಿಹಾರಕ್ಕಾಗಿ ಸನತ್ಕುಮಾರನನ್ನು ಕಂಡು ಭಕ್ತಿಯ ಪರಿಸ್ಥಿತಿಯನ್ನು ತಿಳಿಸಿದರು. ಆಗ ಸನತ್ಕುಮಾರರು ಗಂಗಾತೀರದಲ್ಲಿ ಭಾಗವತದ ಪ್ರವಚನ ಮಾಡಿದರು. ಭಕ್ತಿಯು ಪ್ರೇಮರೂಪಳಾಗಿ ಉಲ್ಲಾಸಗೊಂಡಳು. ಜ್ಞಾನ, ವೈರಾಗ್ಯ ಎಂಬ ಅವಳ ಮಕ್ಕಳು ಮತ್ತೆ ತಾರುಣ್ಯವನ್ನು ಪಡೆದರು."

ಈ ಕಥೆ ಚಮತ್ಕಾರಿಯಾದರೂ ಅರ್ಥವತ್ತಾಗಿದೆ. ಭಕ್ತಿ ಮಾರ್ಗದಿಂದಲೇ ಜ್ಞಾನ ವೈರಾಗ್ಯಗಳ ಉದ್ಗಮ. ಭಕ್ತಿಯಿಂದಲೇ ಅವು ಪೋಷಿತವಾಗಿ ದೃಢವಾಗಿ ನಿಲ್ಲಬಲ್ಲವು. ಭಾಗವತವು ಭಕ್ತಿ ರಸಪ್ರಧಾನವಾಗಿದ್ದು ಜ್ಞಾನವೈರಾಗ್ಯಗಳ ಕಡೆಗೆ ಕರೆದೊಯ್ಯುತ್ತದೆ-ಎಂಬುದು ಇಲ್ಲಿ ಸೂಚ್ಯ.

ಪದ್ಮಪುರಾಣದಲ್ಲಿ ಹೇಳಿದ ಕೆಲವು ಮಾತುಗಳನ್ನು ಇಲ್ಲಿ ಸ್ಮರಿಸಿಕೊಳ್ಳುವುದು ಉಚಿತವಾದೀತು.

ವೇದೋಪನಿಷದಾಂ ಸಾರಾಜ್ಜಾತಾ ಭಾಗವತೀ ಕಥಾ।
ಅತ್ಯುತ್ತಮಾ ತತೋ ಭಾತಿ ಪೃಥಗ್ಭೂತಾ ಫಲಾಕೃತಿಃ॥

"ವೇದೋಪನಿಷತ್ತುಗಳ ಸಾರದಿಂದ ಭಾಗವತ ಕಥೆ ಹುಟ್ಟಿದೆ. ಅವುಗಳಿಂದ ಬೇರೆಯಾಗಿ ತೋರಿದರೂ ಅವುಗಳ ಶ್ರೇಷ್ಠವಾದ ಹಣ್ಣಿನಂತೆ ಶೋಭಿಸುತ್ತಿದೆ"

ನಿಗಮಕಲ್ಪತರೋರ್ಗಲಿತಂ ಫಲಂ
ಶುಕಮುಖಾದಮೃತದ್ರವಸಂಯುತಮ್।
ಪಿಬತ ಭಾಗವತಂ ರಸಮಾಲಯಂ
ಮುಹುರಹೋ ರಸಿಕಾ ಭುವಿ ಭಾವುಕಾಃ॥

"ವೇದವೆಂಬ ಕಲ್ಪವೃಕ್ಷದಿಂದ ಭಾಗವತವೆಂಬ ಹಣ್ಣು ಕೆಳಗೆ ಉದುರಿದೆ. ಈ ಭಾಗವತವು ಶುಕಮಹರ್ಷಿಗಳ ಮುಖದಿಂದ ಬಂದುದು-ಗಿಳಿಯು ಕುಕ್ಕಿದುದರಿಂದ ಈ ಹಣ್ಣು ಕೆಳಗೆ ಬಿದ್ದಿದೆ. ಇದು ಅಮೃತದ್ರವದಿಂದ (ಮೋಕ್ಷವನ್ನೀಯುವ ಭಕ್ತಿರಸದಿಂದ) ತುಂಬಿದೆ-ಸಿಹಿಯಾದ ರಸದಿಂದ ತುಂಬಿದೆ. ಓ ರಸಿಕರಾದ ಭಾವುಕರೆ, ತೃಪ್ತಿಯಾಗುವವರೆಗೆ ಭೂಲೋಕದಲ್ಲಿಯೇ ಈ ಅಮೃತರಸವನ್ನು ಕುಡಿಯಿರಿ!"

ಸ್ವರ್ಗೇ ಸತ್ಯೇ ಚ ಕೈಲಾಸೇ ವೈಕುಂಠೇ ನಾಸ್ತ್ಯಯಂ ರಸಃ।
ಅತಃ ಪಿಬಂತು ಸದ್ಭಾಗ್ಯಾ ಮಾ ಮಾ ಮುಂಚತ ಕರ್ಹಿಚಿತ್॥

"ಈ ರಸವು ಸ್ವರ್ಗ, ಸತ್ಯಲೋಕ, ಕೈಲಾಸ, ವೈಕುಂಠಗಳಲ್ಲಿಯೂ ಇಲ್ಲ. ಆದ್ದರಿಂದ, ಭಾಗ್ಯಶಾಲಿಗಳೆ, ಇದನ್ನು ಕುಡಿಯಿರಿ. ಎಂದೆಂದಿಗೂ ಬಿಡಬೇಡಿರಿ!"

ದಶಮಸ್ಕಂಧ

ಭಾಗವತದ ಕೇಂದ್ರಸ್ಥಾನ ದಶಮಸ್ಕಂಧ. ಶ್ರೀಕೃಷ್ಣಚರಿತೆಗೆ ವಿಸ್ತೃತವಾದ ಈ ಒಂದು ಸ್ಕಂಧವೇ ಮೀಸಲಾಗಿದೆ. ಇದರಲ್ಲಿ ಪೂರ್ವಾರ್ಧ, ಉತ್ತರಾರ್ಧ– ಎಂದು ಎರಡು ವಿಭಾಗಗಳಿದ್ದು ಪೂರ್ವಾರ್ಧದಲ್ಲಿ ಶ್ರೀಕೃಷ್ಣಾವತಾರ, ಬಾಲಲೀಲೆ, ಗೋಪಾಲನೆ, ಗೋಪಿಕಾಪ್ರಸಂಗ, ಕಂಸವಧೆ ಪ್ರಕರಣಗಳೂ ಅನಂತರ ಶ್ರೀಕೃಷ್ಣ ಬಲರಾಮರ ಉಪನಯನ, ವಿದ್ಯಾಭ್ಯಾಸಗಳ ವರ್ಣನೆಯೂ ಬರುತ್ತವೆ. ಆಮೇಲೆ ಶ್ರೀಕೃಷ್ಣನು ಅಕ್ರೂರನನ್ನು ಹಸ್ತಿನಾಪುರಕ್ಕೆ ಕಳಿಸಿ ಪಾಂಡವರ ಯೋಗಕ್ಷೇಮಗಳನ್ನು ತಿಳಿದುಕೊಳ್ಳುತ್ತಾನೆ. ಇಲ್ಲಿಗೆ ಪೂರ್ವಾರ್ಧದ ಕಥೆ ಸಮಾಪ್ತವಾಗುತ್ತದೆ.

ಉತ್ತರಾರ್ಧದಲ್ಲಿ ಕಾಲಯವನಾದಿಗಳಿಗೆ ಸಂಬಂಧಿಸಿದಂತೆ ಶ್ರೀಕೃಷ್ಣನ ಚರಿತೆ ವಿಸ್ತೃತವಾಗಿದೆ. ಮಹಾಭಾರತದಲ್ಲಿ ಬರುವ ಆತನ ಪಾತ್ರದ ವರ್ಣನೆ ಇಲ್ಲಿ ಪರಿಮಿತವಾಗಿದೆ.

ಭಾಗವತವು ಭಕ್ತಿರಸಪ್ರಧಾನವಾದ ಗ್ರಂಥ. ಆದ್ದರಿಂದಲೇ ಏನಾದರೊಂದು ನಿಮಿತ್ತದಿಂದ ಭಗವಂತನ ಸ್ತುತಿಗಳು ಬರುತ್ತಲೇ ಇರುತ್ತವೆ. ದೇವಕೀಗರ್ಭದಲ್ಲಿರುವಾಗಲೇ ಬ್ರಹ್ಮನಿಂದ, ಅವತರಿಸಿ ದೊಡನೆ ವಸುದೇವದೇವಕಿಯರಿಂದ, ಗೋಪಾಲನಾಸಂದರ್ಭದಲ್ಲಿ ಮತ್ತೆ ಬ್ರಹ್ಮನಿಂದ, ನಾಗಪತ್ನಿಯರಿಂದ, ಕಾಳಿಯ ಸರ್ಪನಿಂದ, ಇಂದ್ರನಿಂದ, ಗೋಪಿಕೆಯರಿಂದ–ಹೀಗೆ ಭಗವಂತನ ಸ್ತುತಿಗಳು ವಿಪುಲವಾಗಿವೆ. ಏನಾದರೊಂದು ಸಂದರ್ಭವನ್ನು ದೊರಕಿಸಿಕೊಂಡು ಶುಕಮುನಿಗಳು ಭಗವಂತನ ಸ್ತೋತ್ರದಲ್ಲಿ ತಲ್ಲೀನರಾಗುತ್ತಾರೆ. ಭಗವನ್ಮಹಿಮೆಯನ್ನು ಸ್ಮರಿಸಿಕೊಂಡು ಅವರು ರೋಮಾಂಚಿತರಾಗುತ್ತಾರೆ; ಮೈಮರೆಯುತ್ತಾರೆ. ಈ ಸ್ತೋತ್ರಗಳು ಬರಿಯ ಕೊಂಡಾಟವಲ್ಲ, ವೇದಾಂತತತ್ತ್ವ ಗರ್ಭಿತವಾದವು.

ಭಾಗವತ ಒಂದು ಮಹಾಕಾವ್ಯ

ಭಾಗವತವು ಬರಿಯ ಸ್ತೋತ್ರಸಾಹಿತ್ಯವೆಂದಾಗಲಿ, ಕೇವಲ ತತ್ತ್ವಶಾಸ್ತ್ರವೆಂದಾಗಲಿ ಹೇಳಲಾಗದು. ಇದೊಂದು ಮಹಾಕಾವ್ಯವೂ ಆಗಿದೆ. ಮಹಾಕಾವ್ಯವೊಂದರಲ್ಲಿ ರಸಿಕರಾದ ಕಾವ್ಯಪ್ರಿಯರು ಯಾವ ರಸೋನ್ಮೇಷವನ್ನು ಭಾವಪೋಷಣೆಯನ್ನೂ ನಿರೀಕ್ಷಿಸುವರೋ ಅವುಗಳಿಗೆ ಇದರಲ್ಲಿ ಕೊರತೆಯಿಲ್ಲ. ದಶಮಸ್ಕಂಧವು–ವಿಶೇಷವಾಗಿ ಪೂರ್ವಾರ್ಧವು ಶೃಂಗಾರರಸಭೂಯಿಷ್ಠವಾಗಿದೆ. ವೀರ, ಕರುಣಾದಿರಸಗಳೂ ವಿವಿಧ ಭಾವಗಳೂ

ಪುಷ್ಟಿಗೊಂಡಿವೆ. ಪ್ರಕೃತಿವರ್ಣನೆ ರಮಣೀಯವಾಗಿದೆ. ಕುತೂಹಲಿಗಳು ನಿದರ್ಶನಕ್ಕಾಗಿ ಈ ಭಾಗಗಳನ್ನು ನೋಡಬಹುದು:

ಶ್ರೀಕೃಷ್ಣ-ಬಲರಾಮರ ಬಾಲಲೀಲೆ (ಅಧ್ಯಾ. ೮), ಯಶೋದೆಯು ಮೊಸರು ಕಡೆಯುವುದು (ಅಧ್ಯಾ. ೯-೩). ಮಳೆಗಾಲ ಶರತ್ಕಾಲಗಳ ವರ್ಣನೆ (ಅಧ್ಯಾ-೨೦), ರಾಸಕ್ರೀಡೆ (ಅಧ್ಯಾ. ೨೯), ಗೋಪೀಗೀತ (ಅಧ್ಯಾ. ೩೧), ಗೋಪಿಕಾಯುಗಲಗೀತ (ಅಧ್ಯಾ. ೩೫), ಮಧುರಾಪ್ರವೇಶ ಸಂದರ್ಭ (ಅಧ್ಯಾ. ೪೧-೪೨), ಭ್ರಮರಗೀತ (ಅಧ್ಯಾ. ೪೭)- ಇತ್ಯಾದಿ. ಇವು ಯಾವ ಮಹಾಕಾವ್ಯವನ್ನೂ ಮೀರಿಸಬಲ್ಲ ಮನೋಹರವಾದ ರಸಖಂಡಗಳು.

ಕೃಷ್ಣಶಬ್ದದ ಪ್ರಾಚೀನತೆ

ದಶಮಸ್ಕಂಧದ ಕಥಾನಾಯಕನು ಶ್ರೀಕೃಷ್ಣ. ಕೃಷ್ಣನೆಂಬ ಹೆಸರು ಬಹಳ ಪ್ರಾಚೀನವಾದುದು. ಋಗ್ವೇದಸಂಹಿತೆಯ ಅಷ್ಟಮಮಂಡಲದ ೮೫, ೮೬, ೮೭ನೆಯ ಸೂಕ್ತಗಳಿಗೂ ದಶಮಮಂಡಲದ ೪೨, ೪೩, ೪೪ನೆಯ ಸೂಕ್ತಗಳಿಗೂ ಕೃಷ್ಣನೆಂಬ ಋಷಿ ದ್ರಷ್ಟಾರನೆಂದು ಉಕ್ತವಾಗಿದೆ. ಈ ಕೃಷ್ಣಋಷಿ ಭಾಗವತದ ಶ್ರೀಕೃಷ್ಣನಾಗಿರಲಾರ. ಛಾಂದೋಗ್ಯೋಪನಿಷತ್ತಿನಲ್ಲಿ "ಏತದ್ ಘೋರ ಆಂಗಿರಸಃ ಕೃಷ್ಣಾಯ ದೇವಕೀಪುತ್ರಾಯ ಉಕ್ತ್ವಾ ಉವಾಚ, ಅಪಿಪಾಸ ಏವ ಸ ಬಭೂವ" (೩-೧೭-೬) ಎಂದಿದೆ. ಆಂಗಿರಸಗೋತ್ರದವನಾದ ಘೋರನೆಂಬ ಆಚಾರ್ಯನು ತನ್ನ ಶಿಷ್ಯನಾದ ದೇವಕೀಪುತ್ರ ಕೃಷ್ಣನಿಗೆ ಯಜ್ಞದರ್ಶನವನ್ನು ಬೋಧಿಸಿದನೆಂದು ಇದರಿಂದ ಗೊತ್ತಾಗುತ್ತದೆ. ಆದರೆ ಘೋರ ಆಂಗಿರಸನು ಶ್ರೀಕೃಷ್ಣನ ಗುರುವೆಂದು ಇನ್ನೆಲ್ಲಿಯೂ ಹೇಳಿಲ್ಲ. ಭಾಗವತ, ವಿಷ್ಣುಪುರಾಣಗಳ ಪ್ರಕಾರ ಸಾಂದೀಪನಿ ಶ್ರೀಕೃಷ್ಣನ ಗುರು. ಇನ್ನು ಗೋಪಾಲತಾಪನೀ ಮೊದಲಾದ ಕೆಲವು ಉಪನಿಷತ್ತುಗಳಲ್ಲಿ ಕೃಷ್ಣನ ಹೆಸರಿದೆ. ಗೋಪಿಯರ ವರ್ಣನೆಯೂ ಇದೆ. ಈ ಉಪನಿಷತ್ತುಗಳು ಪ್ರಾಚೀನವಲ್ಲವೆಂದು ಪರಿಶೋಧಕರ ಅಭಿಪ್ರಾಯವಿದೆ.

ಪ್ರಸಿದ್ಧ ಸಂಸ್ಕೃತ ವೈಯಾಕರಣನಾದ ಪಾಣಿನಿಗಿಂತ (ಕ್ರಿ.ಪೂ. ೭೦೦) ಮೊದಲೇ ಕೃಷ್ಣಭಕ್ತಿ ಪ್ರಚುರವಾಗಿತ್ತು. ಶ್ರೀಕೃಷ್ಣನ-ವಾಸುದೇವನ ಭಕ್ತರು ವಾಸುದೇವಕರೆಂದು ಹೇಳಲ್ಪಡುತ್ತಿದ್ದರು. 'ವಾಸುದೇವಾರ್ಜುನಾಭ್ಯಾಂ ವುನ್' (ಅಷ್ಟಾ ೪-೩-೯೮) ಎಂಬ ಪಾಣಿನಿಸೂತ್ರದಿಂದ ಇದು ನಿಃಸಂದೇಹವಾಗಿ ಗೊತ್ತಾಗುತ್ತದೆ.

ಈಗ ಸ್ವರ್ಗಸ್ಥರಾಗಿರುವ, ಆದರೆ ನಮ್ಮ ಹೃದಯದಲ್ಲಿ ಸ್ಥಿರವಾಗಿ ನೆಲೆಸಿರುವ, ಡಾ॥ ಡಿ.ವಿ. ಗುಂಡಪ್ಪನವರು ಶ್ರೀಕೃಷ್ಣನ ವಿಷಯವಾಗಿ ಗಾಢವಾದ ಚಿಂತನೆಯನ್ನು

ನಡೆಸಿದ್ದರು. ತಮ್ಮ ಗ್ರಂಥವಾದ ಶ್ರೀಕೃಷ್ಣ ಪರೀಕ್ಷಣದಲ್ಲಿ ಅವರ ವಿಷಯಮಂಥನ ಸ್ಫುಟವಾಗಿದೆ. ಆ ಗ್ರಂಥದಿಂದ ಕೆಲವು ಮಾತುಗಳನ್ನು ಇಲ್ಲಿ ಉದ್ಧರಿಸಿದೆ:

"ಶ್ರೀಕೃಷ್ಣಚರಿತ್ರೆ"ಯನ್ನು ನಾಲ್ಕು ಖಂಡಗಳಾಗಿ ನೋಡಬಹುದು: (೧) ಬಾಲ್ಯ, (೨) ಗೋಪೀವಿಲಾಸ, (೩) ರಾಜಕೀಯ, (೪) ಪರತತ್ತ್ವಬೋಧೆ.

ಮೊದಲನೆಯದು ಬಾಲ್ಯ. ಲೋಕದಲ್ಲಿ ನಾವು ಕಾಣುವ ಎಲ್ಲ ಬಾಲಕರ ದಿನದಿನದ ಜೀವನದಲ್ಲಿ ಕಾಣುವಂತೆ ಕೃಷ್ಣಬಾಲಕನ ಜೀವಿತದಲ್ಲಿಯೂ ಅನೇಕ ಲೀಲಾವಿನೋದಗಳನ್ನು ಕಾಣುತ್ತೇವೆ. ಬೆಣ್ಣೆ ಕದಿಯೋಣ, ಹಾಲು ಕದಿಯೋಣ, ಪ್ರಸಂಗದಲ್ಲಿ ಅವು ಉತ್ಪ್ರೇಕ್ಷೆಯ ರೂಪದಲ್ಲಿ ಕಾಣುತ್ತವೆ. ಕವಿ ತನ್ನ ವಾಚಕರ ಮನಸ್ಸಿನಲ್ಲಿ ಒಂದು ವಿಶದವೂ ಪರಿಪುಷ್ಟವೂ ಆದ ಚಿತ್ರವನ್ನು ನಿರ್ಮಿಸುವುದಕ್ಕಾಗಿ ವಸ್ತುವನ್ನು ದೊಡ್ಡ ಆಕಾರದಲ್ಲಿ ಚಿತ್ರಿಸುತ್ತಾನೆ. ಸಣ್ಣದನ್ನು ದೊಡ್ಡದಾಗಿ ಮಾಡಿ ತೋರಿಸುವುದು ಕಾವ್ಯಪ್ರವೃತ್ತಿಯಲ್ಲಿ ಒಂದು ನೈಜವಾಗಿ ನಡೆಯುವ ವ್ಯಾಪಾರ. ಚರಿತ್ರೆಯಲ್ಲಿ, ನ್ಯಾಯಸ್ಥಾನದಲ್ಲಿ, ಬ್ಯಾಂಕುಗಳಲ್ಲಿ ಹೇಳುವ ಸಂಗತಿಗಳನ್ನು ಅಳತೆಮಾಡಿ ಹೆಚ್ಚು ಕಡಮೆಗಳಿಲ್ಲದಂತೆ ಹೇಳಬೇಕು. ಕಾವ್ಯದಲ್ಲಿ ಮುಖ್ಯವಾದದ್ದು ಅಂಕಿ-ಅಳತೆಗಳಲ್ಲ. ವಸ್ತುವಿನ ಸ್ವರೂಪವು ವಾಚಕನ ಮನಸ್ಸಿನಲ್ಲಿ ಸ್ಫುಟವಾಗಬೇಕು. ಈ ಉದ್ದೇಶದಿಂದ ಕವಿಯ ಮಾತು ಭೂತಗನ್ನಡಿಯಾಗುತ್ತದೆ. ಸಾಸಿವೆಯ ಕಾಳು ಕುಂಬಳಕಾಯಾಗುತ್ತದೆ. ಕಾವ್ಯವನ್ನು ಅದು ಕಾವ್ಯವೆಂದು ನೆನಪಿಟ್ಟುಕೊಂಡು ಓದುವವರು ಕವಿಯ ಉತ್ಪ್ರೇಕ್ಷೆಗಳನ್ನು ತಪ್ಪೆಣಿಸರು. ವಾಚಕನ ಮನಸ್ಸಿನಲ್ಲಿ ಒಂದು ಮಹದದ್ಭುತದ ಭಾವನೆ ಉಂಟಾಗಬೇಕಾದದ್ದು ಕಾವ್ಯಕರ್ಮದ ಸಾರ್ಥಕ್ಯಕ್ಕೆ ಅವಶ್ಯ. ಆದ್ದರಿಂದ ಕೃಷ್ಣನ ಬಾಲ್ಯದ ವರ್ಣನೆಗಳನ್ನು ನಾವು ಹೆಚ್ಚಾಗಿ ಪರೀಕ್ಷಿಸಬೇಕಾಗಿಲ್ಲ" (ಪುಟ. ೩೨-೩೩).

ಇನ್ನು ಗೋಪೀವಿಲಾಸದ ವಿಷಯವಾಗಿ ಶ್ರೀ ಡಿ.ವಿ.ಜಿ.ಯವರ ತೀರ್ಮಾನ ಇದು:

1. ಶ್ರೀಕೃಷ್ಣನು ಕಾಮುಕನಲ್ಲ, ಜಾರನಲ್ಲ.
2. ಕಾಮಾರ್ತರಾಗಿ ಬಂದವರಿಗೆ ಆತ ಆಶ್ರಯಕೊಟ್ಟ.
3. ಅವರ ರೋಗಕ್ಕೆ ಆತ ಚಿಕಿತ್ಸೆ ನಡೆಸಿದ.
4. ಅದು ಸಾಮೋಪಾಯದ ಚಿಕಿತ್ಸೆ, ದಂಡೋಪಾಯದ್ದಲ್ಲ. ಅದು ಮಕ್ಕಳಲ್ಲಿ ವಾತ್ಸಲ್ಯವುಳ್ಳ ಉಪಾಧ್ಯಾಯನ ಶಿಕ್ಷಣನೀತಿ.
5. ಆತನ ಉಪಾಯ ಫಲಿಸಿತು. ಆತನನ್ನು ಮರೆಹೊಕ್ಕವರು ವಿಹಿತ ಮಾರ್ಗಕ್ಕೆ ಹಿಂದಿರುಗಿದರು.

6. ಗೋಪಿಯರು ವ್ಯಭಿಚಾರಿಣಿಯರಲ್ಲ; ವೇಶ್ಯೆಯರಲ್ಲ.
7. ಅವರು ತಮ್ಮ ತಮ್ಮ ಪತಿಗಳ ಹೊರತು ಬೇರೆ ಅನುರಕ್ತರಾಗಿದ್ದದ್ದು ಕೃಷ್ಣನೊಬ್ಬನಲ್ಲಿ ಮಾತ್ರ
8. ಅದು ಆತನು ಪರಮಾತ್ಮ ಸ್ವರೂಪನೆಂದು; ಪರಮೇಶ್ವರ ಪ್ರತೀಕವೆಂದು.
9. ದ್ರೌಪದಿಗೆ ಪತಿಪಂಚಕದಂತೆ ಗೋಪಿಯರಿಗೆ ಪತಿದ್ವಯ. ಕೃಷ್ಣನು ದೈವಾಂಶಪತಿ; ಗೋಪಾಲನು ಮಾನುಷಪತಿ.
10. ಗೋಪರಿಗೆ ತಮ್ಮ ಹೆಂಡಂದಿರು ತಮ್ಮಿಂದ ಅಗಲಿದ್ದರೆಂದೆನಿಸಲಿಲ್ಲ.
11. ಲೈಂಗಿಕಚಾಪಲ್ಯವು ಮನುಷ್ಯ ಸಾಮಾನ್ಯಲಕ್ಷಣ. ಅದಕ್ಕೆ ಸ್ತ್ರೀ ಪುರುಷ ಭೇದವಿಲ್ಲ. ಕೆಲವರಲ್ಲಿ ಅದು ಗೂಢವಾಗಿರುತ್ತದೆ; ಇನ್ನು ಕೆಲವರಲ್ಲಿ ಪ್ರಕಟಗೊಳ್ಳುತ್ತದೆ. ಯಾರು ಅದನ್ನು ಪ್ರಕಟಿಸರೋ ಅವರಿಂದ ಇತರರು ಕೆರಳುವುದಾಗದು. ಯಾರು ಆ ಚಪಲವನ್ನು ತಡೆಯಲಶಕ್ತರೋ ಅವರಲ್ಲಿ ಅದು ವ್ಯಾಧಿ; ಚಿಕಿತ್ಸೆಯನ್ನು ಬೇಡುತ್ತದೆ.
12. ಆದ್ದರಿಂದ ಕೃಷ್ಣನಿಗೆ ಬಂದಿರುವ "ಜಾರಚೋರಶಿಖಾಮಣಿ" ಎಂಬ ಬಿರುದು ಕವಿಗಳೂ ಹರಿಕಥಾಕಾರರೂ ಹೊರಿಸಿರುವ ಅಪವಾದ. ಅದು ಹಾಸ್ಯಗರ್ಭಿತವಾದ ಉತ್ಪ್ರೇಕ್ಷೆ; ಅದು ಸತ್ಯವನ್ನು ಮುಚ್ಚಿಟ್ಟು ಅಸತ್ಯವನ್ನು ತೋರಿಸುವಷ್ಟು ವಿಪರೀತವಾಗಿದೆ" (ಪುಟ. 35–36).

ಮುಂದೆ ಇವೆಲ್ಲವನ್ನೂ ಶ್ರೀ ಡಿ.ವಿ.ಜಿ. ಯವರು ಆಧಾರಗಳನ್ನಿತ್ತು ವಿಶದವಾಗಿ ವಿಶ್ಲೇಷಿಸಿದ್ದಾರೆ. "ಗೋಪಿಯರಿಗೆ ಕಾಮವ್ಯಾಧಿ ಇತ್ತು. ಬೇರೆ ಚಿಕಿತ್ಸೆಗೆ ಅದು ಜಗ್ಗುತ್ತಿರಲಿಲ್ಲ. ಆದ್ದರಿಂದ ತಕ್ಕ ಚಿಕಿತ್ಸೆಯನ್ನು ನೀಡಿ ಅವರ್ನು ಸನ್ಮಾರ್ಗಕ್ಕೆ ಹತ್ತಿಸಿದ ಮಹಾವೈದ್ಯ ಶ್ರೀಕೃಷ್ಣ" ಎಂಬುದು ಅವರ ನಿಲುವು. ಜೊತೆಗೆ ಒಂದು ಎಚ್ಚರಿಕೆಯನ್ನೂ ನೀಡಿದ್ದಾರೆ. ಈ ಮಾರ್ಗವು ವಿಶೇಷ ಪುರುಷರ ವಿಶೇಷ ಧರ್ಮವೆಂದೂ, ಜಿತೇಂದ್ರಿಯರೂ ಸರ್ವಕಾಮನಾವರ್ಜಿತರೂ ಲೋಕಕಲ್ಯಾಣೈಕ ದೃಷ್ಟಿಯುಳ್ಳವರೂ ಆದ ಶ್ರೀಕೃಷ್ಣನಂಥ 'ಈಶ್ವರರು' ಕೈಗೊಳ್ಳಬಹುದಾದ್ದೇ ಹೊರತು ಸಾಮಾನ್ಯರು ಈ ದಾರಿ ಹಿಡಿದರೆ ಅವರ ಸರ್ವನಾಶವಾಗುವುದೆಂದು ಎಚ್ಚರಿಸಿದ್ದಾರೆ.

ಭಾಗವತ, ವಿಷ್ಣುಪುರಾಣ–ಮೊದಲಾದ ಗ್ರಂಥಗಳನ್ನು ಪರಿಶೀಲಿಸಿದರೆ ಮೇಲ್ಕಂಡ ಅಭಿಪ್ರಾಯಕ್ಕೆ ಸಾಕಷ್ಟು ಪುರಸ್ಕಾರ ದೊರೆಯುತ್ತದೆ.

ಶ್ರೀಕೃಷ್ಣನ ರಾಜಕೀಯಸಿದ್ಧಾಂತ ಮತ್ತು ಪರತತ್ತ್ವಬೋಧೆಗಳ ಪರಿಶೀಲನೆಗೆ ಮಹಾಭಾರತವೂ ಭಾಗವತದ ಏಕಾದಶಸ್ಕಂಧವೂ ಸರಿಯಾದ ಸ್ಥಳ.

೫. ಭಾಗವತದ ತತ್ತ್ವವಿಚಾರ

ಕಾವ್ಯಸಂಹಿತೆ

ಪದ್ಮಪುರಾಣದಲ್ಲಿ ಭಾಗವತದ ಮಾಹಾತ್ಮ್ಯವನ್ನು ವರ್ಣಿಸುವಾಗ

"ಪಿಬತ ಭಾಗವತಂ ರಸಮಾಲಯಂ।
ಮುಹುರಹೋ ರಸಿಕಾ ಭುವಿ ಭಾವುಕಾಃ"

ಎಂದಿರುವ ನುಡಿ ಅರ್ಥವತ್ತಾದದ್ದು. ಅದರಲ್ಲಿಯೂ ದಶಮಸ್ಕಂಧವು ರಸಭಾವಪುಷ್ಟಿಯುಳ್ಳ ಕಾವ್ಯಸಂಹಿತೆಯಾಗಿದೆ. ಪೂರ್ವಾರ್ಧದ ನಿವೇದನೆಯಲ್ಲಿ ಇದಕ್ಕೆ ಕೆಲವು ನಿದರ್ಶನಗಳನ್ನು ಕೊಟ್ಟಿದ್ದೇನೆ. ಉತ್ತರಾರ್ಧದಲ್ಲಿಯೂ ರುಕ್ಮಿಣೀಪರಿಣಯಪ್ರಸಂಗ (ಅಧ್ಯಾ. ೫೩, ೫೪), ಶ್ರೀಕೃಷ್ಣರುಕ್ಮಿಣೀಪ್ರಣಯಸಂವಾದ (೬೦), ಸುದಾಮೋಪಾಖ್ಯಾನ (೮೦-೮೧), ಕುರುಕ್ಷೇತ್ರದಲ್ಲಿ ನಂದಯಾದವಾದಿಗಳ ಸಮಾಗಮ (೮೨), ಸುಭದ್ರಾಹರಣ (೮೬)- ಇವು ರಸಗಟ್ಟಿಗಳು. ಶೃಂಗಾರ, ಹಾಸ್ಯ, ವಾತ್ಸಲ್ಯಾದಿಕೋಮಲಭಾವಗಳ ಅಭಿವ್ಯಕ್ತಿ ಇಲ್ಲಿ ಬಹುಸುಂದರವಾಗಿ ಮೂಡಿದೆ. ಈ ಸಂದರ್ಭಗಳು ಯಾವ ಮಹಾಕಾವ್ಯವನ್ನಾದರೂ ಸರಿಗಟ್ಟಬಲ್ಲವು; ಮೀರಬಲ್ಲವು.

ಶಾಸ್ತ್ರಬೋಧೆ

ಸ್ತುತಿರೂಪವಾಗಿಯೋ ಉಪದೇಶರೂಪವಾಗಿಯೋ ಗಹನವಾದ ತತ್ತ್ವಶಾಸ್ತ್ರವನ್ನು ವಿವೇಚಿಸುವುದು ಭಾಗವತದ ಒಂದು ವಿಶೇಷ. ಇದಕ್ಕಾಗಿ ಬೇಕೆಂದೇ ಹಲವಾರು ಸಂದರ್ಭಗಳನ್ನು ಕಲ್ಪಿಸಿಕೊಳ್ಳಲಾಗುತ್ತಿದೆ. ಇವು ಭಾಗವತದಲ್ಲಿ ಹಾಸುಹೊಕ್ಕಾಗಿ ಬರುತ್ತವೆ. ದಾರ್ಶನಿಕ ವಿಷಯಗಳನ್ನು ಚಿತ್ರಿಸುವುದಕ್ಕೆ ಭಗವಂತನ ಕಥೆ ಒಂದು ಶುಭ್ರವಾದ ಭಿತ್ತಿ. ಇದರ ಮೇಲೆ ಯಥೇಚ್ಛವಾಗಿ ಅಧ್ಯಾತ್ಮ ವಿಷಯಗಳನ್ನು ಮನೋಜ್ಞವಾಗಿ ಚಿತ್ರಿಸಿದ್ದಾರೆ.

ಇದರಲ್ಲಿ ಪ್ರತಿಪಾದ್ಯವಾದ ಸಿದ್ಧಾಂತವಾದರೂ ಯಾವುದು? ದ್ವೈತವೆ, ಅದ್ವೈತವೆ, ವಿಶಿಷ್ಟಾದ್ವೈತವೆ? ಅಥವಾ ಇನ್ನೊಂದು ದರ್ಶನ ವಿಶೇಷವೆ? ಎಲ್ಲ ಮತದವರೂ ತಮ್ಮ ತಮ್ಮ ದರ್ಶನಗಳಿಗೆ ಅನುಗುಣವಾಗಿ ಭಾಗವತಕ್ಕೆ ವ್ಯಾಖ್ಯಾನಗಳನ್ನು ಬರೆದಿದ್ದಾರೆ. ಪಾಂಚರಾತ್ರಾಗಮವನ್ನನುಸರಿಸಿ ಭಾಗವತದರ್ಶನ ಎಂಬ ಇನ್ನೊಂದು ದರ್ಶನಪ್ರಕಾರವನ್ನೂ ಆಧುನಿಕ ವಿದ್ವಾಂಸರು ಪ್ರತಿಪಾದಿಸಿದ್ದಾರೆ. ಭಾಷೆಯನ್ನು ಹಿಸುಕಿ ತಮಗೆ ಬೇಕಾದ ಅರ್ಥವನ್ನು ಹೊರಡಿಸುವ ಸಾಮರ್ಥ್ಯ ವಿದ್ವಾಂಸರಿಗಿದೆ. ಮಹಾದಾರ್ಶನಿಕನೂ ಶಂಕರಾಚಾರ್ಯರಿಗಿಂತ ಪ್ರಾಚೀನನೂ ಆದ ಭರ್ತೃಹರಿಯು ವೇದಾರ್ಥದ ವಿಷಯವಾಗಿ ಹೇಳುತ್ತಾನೆ–

ತಸ್ಯಾರ್ಥವಾದರೂಪಾಣಿ ನಿಃಶ್ರಿತಾಃ ಸ್ವವಿಕಲ್ಪಜಾಃ।
ಏಕತ್ವಿನಾಂ ದ್ವೈತಿನಾಂ ಚ ಪ್ರವಾದಾ ಬಹುಧಾ ಮತಾಃ॥
–ವಾಕ್ಯಪದೀಯ, ಬ್ರಹ್ಮಕಾಂಡ, ಶ್ಲೋ. ೮

"ವೇದದ ಅರ್ಥವಾದರೂಪವಾದ ಉಕ್ತಿಗಳನ್ನಾಶ್ರಯಿಸಿ ಅದ್ವೈತಿಗಳೂ ದ್ವೈತಿಗಳೂ ತಮ್ಮ ತಮ್ಮ ಬುದ್ಧಿಭೇದಗಳಿಂದ ನಾನಾವಿಧವಾದ ಹೇಳಿಕೆಗಳನ್ನು ಮಂಡಿಸಿದ್ದಾರೆ"

ಅನಂತರ 'ಸತ್ಯಾ ವಿಶುದ್ಧಿಸ್ತತ್ರೋಕ್ತಾ...' ಎಂದು ತನ್ನ ಸಿದ್ಧಾಂತವನ್ನು ನಿರೂಪಿಸಿದ್ದಾರೆ. ಭರ್ತೃಹರಿ ಅದ್ವೈತಿ. ಶಬ್ದಬ್ರಹ್ಮವಾದಿ. ಸತ್ಯದ ಜಿಜ್ಞಾಸುಗಳು ದಶಮಸ್ಕಂಧದ ಈ ಸೂಕ್ತಿಗಳನ್ನು ಮತ್ತೊಮ್ಮೆ ಪರಿಶೀಲಿಸಬೇಕು.

೧. ಏವಂ ಸ್ವಮಾಯಾರಚಿತೇಷ್ವಸೌ ಪುಮಾನ್
ಗುಣೇಷು ರಾಗಾನುಗತೋ ವಿಮುಹ್ಯತಿ॥ ೧–೪೩

೨. ಭವೋ ನಿರೋಧಃ ಸ್ಥಿತಿರಪ್ಯವಿದ್ಯಯಾ
ಕೃತಾ ಯತಸ್ತ್ವಯ್ಯಭಯಾಶ್ರಯಾತ್ಮನಿ॥ ೨–೩೯

೩. ತದನು ತ್ವಂ ಹ್ಯಪ್ರವಿಷ್ಟಃ ಪ್ರವಿಷ್ಟ ಇವ ಭಾವ್ಯಸೇ॥ ೩–೧೪

೪. ರೂಪಂ ಯತ್ತತ್ಪ್ರಾಹುರವ್ಯಕ್ತಮಾದ್ಯಂ
ಬ್ರಹ್ಮ ಜ್ಯೋತಿರ್ನಿರ್ಗುಣಂ ನಿರ್ವಿಕಾರಮ್।
ಸತ್ತಾಮಾತ್ರಂ ನಿರ್ವಿಶೇಷಂ ನಿರೀಹಂ
ಸ ತ್ವಂ ಸಾಕ್ಷಾತ್ ವಿಷ್ಣುರಧ್ಯಾತ್ಮದೀಪಃ॥ ೩–೨೪

೫. ಏಕ ಏವ ಪರೋ ಹ್ಯಾತ್ಮಾ ಸರ್ವೇಷಾಮಪಿ ದೇಹಿನಾಂ।
ನಾನೇವ ಗೃಹ್ಯತೇ ಮೂಢೈರ್ಯಥಾ ಜ್ಯೋತಿರ್ಯಥಾ ನಭಃ॥
೫೪–೪೪

೬. ಯಥಾ ಶಯಾನ ಆತ್ಮಾನಂ ವಿಷಯಾನ್ ಫಲಮೇವ ಚ।
ಅನುಭುಂಕ್ತೇಽಪ್ಯಸತ್ಯರ್ಥೇ ತಥಾಪ್ನೋತ್ಯಬುಧೋ ಭವಮ್॥
೫೪-೪೮

ಇತ್ಯಾದಿ.

ಶ್ರೀರಾಮ-ಶ್ರೀಕೃಷ್ಣ

ತ್ರೇತಾಯುಗದಲ್ಲಿ ಶ್ರೀರಾಮನಾಗಿಯೂ ದ್ವಾಪರಯುಗದಲ್ಲಿ ಶ್ರೀಕೃಷ್ಣನಾಗಿಯೂ ಮಹಾವಿಷ್ಣು ಅವತರಿಸಿದ. ಎರಡು ಅವತಾರಗಳೂ ದುಷ್ಟ ದಮನಕ್ಕಾಗಿ, ಧರ್ಮರಕ್ಷಣೆಗಾಗಿ, ಶ್ರೀರಾಮನು ಒಬ್ಬ ಮಾನವನಂತೆ ಆಚರಿಸಿದ. ಸಾಧಾರಣಮನುಷ್ಯನೊಬ್ಬನು ಲೋಕದಲ್ಲಿ ಒಳಗಾಗಬಹುದಾದ ಕಷ್ಟಕೋಟಲೆಗಳಿಗೆ ಒಳಗಾದ. ಹಲವಾರು ಸಮಸ್ಯೆಗಳು ಅವನನ್ನು ಕಾಡಿದವು. ಎಲ್ಲವನ್ನೂ ಲೋಕೋತ್ತರ ಧೈರ್ಯದಿಂದ ಎದುರಿಸಿ, ಜಯಗಳಿಸಿ ಮಹಾತ್ಮನೆಂದೂ ಪುರುಷೋತ್ತಮನೆಂದೂ ಶ್ರೀರಾಮನು ವಿಖ್ಯಾತನಾದನು. ಬ್ರಹ್ಮಾದಿಗಳು ಅವನನ್ನು ನೀನೇ ಪರಮಾತ್ಮನೆಂದು ಸ್ತುತಿಸಿದಾಗ "ಇದೇನು ಹೀಗೆ ಹೇಳುತ್ತೀರಿ? ನಾನು ರಾಮನೆಂಬ ಹೆಸರಿನ ಒಬ್ಬ ಮನುಷ್ಯ. ದಶರಥನ ಮಗ (ಆತ್ಮಾನಂ ಮಾನುಷಂ ಮನ್ಯೇ ರಾಮಂ ದಶರಥಾತ್ಮಜಂ-ಯುದ್ಧಕಾಂಡ ೧೨೦-೧೧)" ಎಂದು ಹೇಳಿಬಿಡುತ್ತಾನೆ. ಸೀತೆಯನ್ನು ಬಿಟ್ಟು ಇನ್ನೊಬ್ಬಳನ್ನು ಕನಸಿನಲ್ಲಿಯೂ ನೆನೆಯುವುದಿಲ್ಲ.

ಶ್ರೀಕೃಷ್ಣನ ಚರಿತೆ ಇನ್ನೊಂದು ಬಗೆಯದು. ಅವನು ಜನ್ಮಕಾಲದಲ್ಲಿಯೇ ದೇವಕೀವಸುದೇವರಿಗೆ ತನ್ನ ದಿವ್ಯರೂಪವನ್ನು ತೋರಿಸಿ ತಾನು ಯಾರೆಂದು ತಿಳಿಸುತ್ತಾನೆ. ಅವನ ಬಾಲಲೀಲೆಯೂ ಅಮಾನುಷವಾದುದು. ಯಾದವರು, ಪಾಂಡವರು, ದೂರದ ರಾಜರು, ಪ್ರಜೆಗಳು ಎಲ್ಲರೂ ಆತನನ್ನು ಲೋಕೇಶ್ವರನೆಂದೂ ಮಹಾವಿಷ್ಣುವೆಂದೂ ಬಲ್ಲರು. ಲೋಕಕಲ್ಯಾಣಕ್ಕಾಗಿ ಅವತರಿಸಿದ ಮಹಾಪುರುಷನೆಂದು ತಿಳಿದಿದ್ದಾರೆ. ರುಕ್ಮಿ, ಜರಾಸಂಧ, ಶಿಶುಪಾಲ ಮೊದಲಾದವರು ಏನೆಂದು ಭಾವಿಸಿದ್ದರೋ ನಿಶ್ಚಿತವಾಗಿ ಹೇಳಲಾಗುವುದಿಲ್ಲ. ಅವನನ್ನು ಬಲ್ಲವರೂ ಅವನ ವಿಷಯದಲ್ಲಿ ಅಪ್ರಬುದ್ಧರಂತೆ ನಡೆದುಕೊಳ್ಳುವುದೊಂದು ಅಚ್ಚರಿ.

ಶ್ರೀಕೃಷ್ಣನೂ ತನ್ನ ಸ್ವರೂಪವನ್ನು ಮರೆಮಾಚುವುದಿಲ್ಲ. ಸಮಯ ಬಂದಾಗ ತಾನು ಪರಮಾತ್ಮನೆಂಬುದನ್ನು ಮಾತಿನಿಂದಲೂ ಕೃತಿಯಿಂದಲೂ ವ್ಯಕ್ತಪಡಿಸಿದ್ದಾನೆ.

ಶ್ರೀಕೃಷ್ಣನು ಏಕಪತ್ನೀವ್ರತವನ್ನು ಹಿಡಿದವನಲ್ಲ. ಅಷ್ಟ ಮಹಿಷಿಯರಲ್ಲದೆ ಸಾವಿರಾರು ಪತ್ನಿಯರು ಅವನಿಗಿದ್ದರು. ನಂದಗೋಕುಲದಲ್ಲಿ ಗೋಪಿಯರೊಡನೆ

ಶೃಂಗಾರಚೇಷ್ಟೆಯಲ್ಲಿ ನಿರತನಾದವನು ಆತ. ಆತನು ಶೃಂಗಾರಪ್ರಿಯನಾದರೂ ಹದಿನಾರು ಸಾವಿರದ ಒಂದುನೂರು ಮಂದಿ ಪತ್ನಿಯರಿದ್ದರೆಂಬುದು ನಮ್ಮ ಊಹೆಗೆ ನಿಲುಕುವುದಿಲ್ಲ. ಅವರಲ್ಲಿ ಲಕ್ಷಾಧಿಸಂಖ್ಯೆಯ ಮಕ್ಕಳನ್ನು ಪಡೆದನೆಂಬುದೂ ಊಹೆಗೆ ನಿಲುಕದು. ಅದರಿಂದ ಭಗವಂತನ ಅನಂತಶಕ್ತಿ, ಅನಂತವೈಭವಗಳು ಅಭಿವ್ಯಕ್ತವಾಗುತ್ತವೆಯೆಂದು ಭಾಗವತಕಾರರ ಆಶಯವಿರಬಹುದು.

ಒಂದೊಂದು ಮನೆಯಲ್ಲೂ ಏಕಕಾಲದಲ್ಲಿ ಶ್ರೀಕೃಷ್ಣನು ಆದರ್ಶಗೃಹಸ್ಥನಂತೆ ಸ್ನಾನ ಸಂಧ್ಯಾ ಹೋಮ ದಾನಾದಿ ಕರ್ಮಗಳಲ್ಲಿ ನಿರತನಾಗಿದ್ದನೆಂದು ಭಾಗವತದಲ್ಲಿ ಬಂದಿರುವುದನ್ನು ಓದುಗರು ಗಮನಿಸಬೇಕಾದದ್ದು ಅತ್ಯವಶ್ಯ.

ಗೋಪಿಕಾಲೀಲೆಗಳ ವಿಷಯವಾಗಿ ಡಾ|| ಡಿ.ವಿ.ಜಿ.ಯವರ ಅಭಿಪ್ರಾಯವನ್ನು ಪೂರ್ವಾರ್ಧದ ನಿವೇದನೆಯಲ್ಲಿ ಸಂಕ್ಷೇಪಿಸಿ ಬರೆದದ್ದಾಗಿದೆ. ಈ ಪ್ರಸಂಗದಲ್ಲಿ ಇನ್ನೊಂದು ಮಾತು–

ಗೋಪಿಯರು ಶ್ರೀಕೃಷ್ಣನಲ್ಲಿಟ್ಟಿದ್ದ ನಿರತಿಶಯವಾದ ಪ್ರೇಮವು ಭಕ್ತಿಪ್ರಕಾರಗಳಲ್ಲಿ ಒಂದೆಂದು ಪ್ರತಿಪಾದಿಸುವುದು ಭಾಗವತಕಾರರ ಉದ್ದೇಶವಾಗಿರಬೇಕು. ಆ ಸ್ತ್ರೀಯರು ತಮ್ಮ ಗಂಡಂದಿರನ್ನು ಲಕ್ಷಿಸದೆ ಶ್ರೀಕೃಷ್ಣನಲ್ಲಿ ಅನುರಕ್ತರಾದದ್ದು ಲೋಕಶಾಸ್ತ್ರವಿರುದ್ಧವೇನೋ ಹೌದು. ಆದರೆ ಅವರ ಅನುರಾಗ ಒಬ್ಬ ಸಾಮಾನ್ಯ ಪುರುಷನಲ್ಲಾಗಿರದೆ ಸರ್ವಾತ್ಮನಾದ ಭಗವಂತನಲ್ಲಿ ಆಗಿತ್ತು. ಆದ್ದರಿಂದ ಅದು ಲೋಕಾತೀತವಾದ ಪರಮಧರ್ಮವೆಂದು ಭಾಗವತದ ಸಿದ್ಧಾಂತ. ಆ ಸ್ತ್ರೀಯರ ಪ್ರೇಮವು ಕಾಮಪ್ರಚೋದಿತವಾಗಿದ್ದರೂ ಅಶುದ್ಧವಲ್ಲ. ವಾಸ್ತವದಲ್ಲಿ ಶ್ರೀಕೃಷ್ಣನು ಗೋಪಿಯರಿಗೆ ಪರಪುರುಷನೇ ಅಲ್ಲ. ಅವನು ಸರ್ವಹೃದಯಾಂತರ್ಗತನಾದ ಆತ್ಮನೇ ಆಗಿದ್ದಾನೆ. ಅವನು ಯಾರಿಗೂ ಅನ್ಯನಲ್ಲ. ಭಕ್ತಿಯ ತೀವ್ರತೆಯಿಂದ ಒಬ್ಬ ಗಂಡಸು ಹೆಂಡತಿಮಕ್ಕಳ ವ್ಯಾಮೋಹವನ್ನು ಬದಿಗೊತ್ತಿ ಭಗವಂತನಲ್ಲಿ ಅನುರಕ್ತನಾಗುವುದು ಧರ್ಮವಾದರೆ, ಗೋಪಿಯರು ಗಂಡಂದಿರ ವ್ಯಾಮೋಹವನ್ನು ತೊರೆದು ಭಗವಂತನಲ್ಲಿ ಅನುರಕ್ತರಾಗುವುದು ಏಕೆ ಧರ್ಮವಾಗದು? ಇಲ್ಲಿ ಗಂಡಸು–ಹೆಂಗಸೆಂಬ ಭೇದವನ್ನೆಣಿಸುವುದು ಯುಕ್ತವಲ್ಲ. ಭಗವಂತನಲ್ಲಿರಿಸಿದ ಪರಮಪ್ರೇಮವೇ ಭಕ್ತಿ ಎನಿಸುತ್ತದೆ. ಆದರೆ ಗೋಪಿಯರ ಪ್ರೇಮವು ಕಾಮ ಪ್ರಚೋದಿತವಾದದ್ದೆಂಬ ಆಕ್ಷೇಪ ಬರಬಹುದು. ಆದರೇನು? ಯಾವ ಬುದ್ಧಿಯಿಂದ ಕೈಹಾಕಿದರೂ ಬೆಂಕಿ ಸುಡಲೇ ಬೇಕು. ಬಾಯಿಗೆ ಹಾಕಿದರೆ ಸಕ್ಕರೆ ಸಿಹಿಯಾಗಲೇಬೇಕು.

ಶ್ರೀಕೃಷ್ಣನ ಸಂದೇಶವನ್ನು ಹೊತ್ತು ಉದ್ಧವನು ಮಧುರೆಯಿಂದ ಬೃಂದಾವನಕ್ಕೆ

ಹೋಗುತ್ತಾನೆ. ಗೋಪಿಯರು ಅವನ ಬಳಿಗೆ ಬಂದು ತಮ್ಮ ವಿರಹದುಃಖವನ್ನು ಹಾಡಿಕೊಂಡು ಹುಚ್ಚಿಯರಂತೆ ಪರಿತಪಿಸುತ್ತಾರೆ. ಅವರು ಶ್ರೀಕೃಷ್ಣನಲ್ಲಿರಿಸಿದ ಪ್ರೇಮಾತಿಶಯವನ್ನು ಕಂಡು ವಿಸ್ಮಿತನಾದ ಉದ್ಧವನು ಹೇಳಿಕೊಳ್ಳುತ್ತಾನೆ–

ಕ್ವೇಮಾಃ ಸ್ತ್ರಿಯೋ ವನಚರೀರ್ವ್ಯಭಿಚಾರದುಷ್ಟಾಃ
....॥ ೪೭–೫೯

"ಕಾಡಿನಲ್ಲಿ ಅಲೆಯುವ ವ್ಯಭಿಚಾರ ಸ್ವಭಾವದ ಈ ಸ್ತ್ರೀಯರೆಲ್ಲಿ? ಕೃಷ್ಣಪರಮಾತ್ಮನ ವಿಷಯವಾಗಿ ಇವರಲ್ಲಿ ನೆಲೆಗೊಂಡ ಈ ದೃಢಭಕ್ತಿ ಎಲ್ಲಿ? ಗೊತ್ತಿಲ್ಲದೆ ಸೇವಿಸಿದರೂ ಶ್ರೇಷ್ಠವಾದ ಔಷಧವು ತಕ್ಕ ಫಲವನ್ನು ನೀಡುವಂತೆ, ಅರಿಯದೆ ಭಜಿಸುವ ಮೂಢರಿಗೂ ಪರಮಾತ್ಮನು ಸಾಕ್ಷಾತ್ತಾಗಿ ಶ್ರೇಯಸ್ಸನ್ನು ಕೊಡುತ್ತಾನೆ"

ಉದ್ಧವನು ವೃಂದಾವನದಲ್ಲಿ ತಿರುಗಾಡುತ್ತ ಗೋಪಿಯರ ಉತ್ಕಟಪ್ರೇಮವನ್ನೇ ಆಲೋಚಿಸುತ್ತಿದ್ದಾನೆ. ಅವನು ಭಾವಾವಿಷ್ಟನಾಗಿ

....
ಆಸಾಮಹೋ ಚರಣರೇಣುಜುಷಾಮಹಂ ಸ್ಯಾಂ
ವೃಂದಾವನೇ ಕಿಮಪಿ ಗುಲ್ಮಲತೌಷಧೀನಾಮ್॥ (೪೭–೬೧)

"ಈ ಗೋಪಿಯರ ಪಾದಧೂಳಿಯಿಂದ ಪಾವನವಾದ ಪೊದರು, ಬಳ್ಳಿ, ಗಿಡಗಳಲ್ಲಿ ಒಂದಾಗಿ ನಾನೂ ವೃಂದಾವನದಲ್ಲಿ ಹುಟ್ಟಬಾರದೆ!"

"ಭಗವತ್‌ಪ್ರಾಪ್ತಿಮಾರ್ಗವು ಯಾವುದೆಂದು ವೇದಗಳು ಇನ್ನೂ ಹುಡುಕಾಡುತ್ತಿವೆ. ಈ ಗೊಲ್ಲತಿಯರು ಆರ್ಯಧರ್ಮಮಾರ್ಗದಲ್ಲಿ ಸಿದ್ಧಿಯನ್ನು ಪಡೆದು ವೇದಗಳಿಗೂ ಅಗೋಚರವಾದ ಮಾರ್ಗವನ್ನು ಈಗಾಗಲೇ ಸೇರಿಬಿಟ್ಟಿದ್ದಾರೆ!" ಎನ್ನುತ್ತಾನೆ.

ಒಳ್ಳೆಯದು. ಇದರಿಂದ ಗೊಲ್ಲತಿಯರ ವಿಷಯದಲ್ಲಿ ಸಮರ್ಥನೆಯಾದೀತು. ಆದರೆ ಧರ್ಮಪ್ರವರ್ತಕನಾದ ಶ್ರೀಕೃಷ್ಣನು ಆ ಮುಗ್ಧೆಯರ ಒಲವನ್ನು ನಿಂದ್ಯಮಾರ್ಗದಲ್ಲಿ ಬಳಸಿಕೊಳ್ಳಬಹುದೆ? ಅದಕ್ಕೆ ಪ್ರೋತ್ಸಾಹವನ್ನೀಯಬಹುದೆ? ಇದಕ್ಕೆ ಉತ್ತರ ಹೇಳಬೇಕಾದರೆ, ಕೃಷ್ಣನನ್ನು ಒಬ್ಬ ಮಾನವನೆಂದು ತಿಳಿಯಬಾರದು. ಅವನು ಲೋಕನಿಯಾಮಕನಾದ ಪರಮೇಶ್ವರನೇ ಆಗಿದ್ದು ಅದೇ ರೀತಿಯಲ್ಲಿ ಕೃಷ್ಣಾವತಾರದಲ್ಲಿಯೂ ನಡೆದುಕೊಂಡಿದ್ದಾನೆ. ಜನ್ಮಾಂತರಪುಣ್ಯದಿಂದ ಭಕ್ತರಲ್ಲಿ ಉದಿಸುವ ಒಂದು ಸದ್ಭಾವನೆಗೆ ಪುಷ್ಟಿಯನ್ನಿತ್ತು ಅದನ್ನು ಬೆಳೆಸಿ ಅನುಗ್ರಹಿಸುವುದು ಅವನ ಕಾರ್ಯವಿಧಾನ.

ಯೇ ಯಥಾ ಮಾಂ ಪ್ರಪದ್ಯಂತೇ ತಾಂಸ್ತಥೈವ ಭಜಾಮ್ಯಹಂ॥
ಭ.ಗೀ. ೪-೧೧

'ಯಾರು ಯಾವ ಪ್ರಯೋಜನಕ್ಕಾಗಿ ನನ್ನನ್ನು ಭಜಿಸುತ್ತಾರೋ ಅವರಿಗೆ ಅದನ್ನಿತ್ತು ಅನುಗ್ರಹಿಸುತ್ತೇನೆ'

ಗೋಪಿಯರಿಗೆ ಅನ್ಯಾದೃಶವಾದ ಪ್ರೇಮಭಕ್ತಿ ಉಂಟಾಗಿತ್ತು. ಅದನ್ನು ಬೆಳೆಸಿ ಪ್ರೋತ್ಸಾಹಿಸಿ ಅನುಗ್ರಹಿಸುವುದು ಶ್ರೀಕೃಷ್ಣನ ಕರ್ತವ್ಯವಾಯಿತು. ಅವನು ಗೋಪಿಯರ ಪ್ರೇಮಬಂಧನಕ್ಕೆ ಸಿಕ್ಕಿದವನೇ ಅಲ್ಲ. ಕರ್ತವ್ಯದ ಕರೆಬಂದಾಗ ಆ ಬಂಧವನ್ನು ಹುಲ್ಲುಕಡ್ಡಿಯಂತೆ ಕಡಿದು ಮಧುರೆಗೆ ಹೊರಟುಬಿಟ್ಟನು. ತಿರುಗಿ ಬೃಂದಾವನವನ್ನೂ ಗೋಪಿಯರನ್ನೂ ಸ್ಮರಿಸಿಕೊಳ್ಳಲೇ ಇಲ್ಲ. ಬಹುವರ್ಷಗಳ ಮೇಲೆ ಕುರುಕ್ಷೇತ್ರದಲ್ಲಿ ಅವರ ಭೇಟಿಯಾದಾಗ, ಗೋಪಿಯರ ಪ್ರೇಮಭಕ್ತಿಯು ಪರಾಕಾಷ್ಠೆಯನ್ನೇ ಪಡೆದಿದ್ದಾಗ, ಅವರಿಗೆ ಅಧ್ಯಾತ್ಮವನ್ನು ಬೋಧಿಸಿ ತನ್ನ ಪರತತ್ತ್ವವನ್ನರುಹಿ ಸಂತೈಸಿ ಕಳಿಸುತ್ತಾನೆ.

ಭಗವಂತನಾದರೋ ನಿಸ್ಸಂಗ, ನಿತ್ಯಮುಕ್ತ. ಸರ್ವಾಂತರ್ಯಾಮಿ ಯಾಗಿ ಸರ್ವಭೂತಾತ್ಮಭೂತಾತ್ಮನಾದ ಪರಮಾತ್ಮನಿಗೆ ಪರರೆಂದರೆ ಯಾರು? ಪರಸ್ತ್ರೀಯರೆಂದರೆ ಯಾರು? ಅವನು ಸ್ಪರ್ಶಿಸದಿರುವ ಸ್ತ್ರೀ ಜಗತ್ತಿನಲ್ಲಿ ಯಾವಳಿದ್ದಾಳೆ? ಅವನಿಗೆ ಗೋಪ್ಯವಾದ ಸ್ಥಳವಾಗಲಿ ವ್ಯವಹಾರವಾಗಲಿ ಯಾವುದಿದೆ? ಸರ್ವವ್ಯಾಪಿಯಾದ ವಾಯುವನ್ನು ಪರಪುರುಷನೆಂದು ದೂರವಿಡುವ ಪತಿವ್ರತೆ ಯಾರು?

ಕುರುಕ್ಷೇತ್ರದಲ್ಲಿ ಬಹುಕಾಲಾನಂತರ ಗೋಪಿಯರನ್ನು ಸಂಧಿಸಿದಾಗ ಶ್ರೀಕೃಷ್ಣನು ಅವರಿಗೆ ಹೇಳುತ್ತಾನೆ-

"ನನ್ನಲ್ಲಿ ಭಕ್ತಿಯು ಪ್ರಾಣಿಗಳಿಗೆ ಮೋಕ್ಷವನ್ನು ದೊರಕಿಸಿಕೊಡುತ್ತದೆ. ಪುಣ್ಯವಶದಿಂದ ನಿಮಗೆ ನನ್ನಲ್ಲಿ ಪ್ರೇಮವುಂಟಾಯಿತು. ಅದು ನಿಮ್ಮನ್ನು ನನ್ನ ಬಳಿಗೆ ಸೇರಿಸಿ ಮೋಕ್ಷವನ್ನೀಯುವುದು. ಸಕಲ ಜೀವಜಾತಗಳಿಗೂ ನಾನೇ ಆದಿ, ನಾನೇ ಅಂತ, ಒಳಗೆ ಹೊರಗೆ ಎಲ್ಲವೂ ನಾನೇ" (೮೩-೪೫, ೪೭).

ಗೋಪೀಸಂಬಂಧವು ಶಾಸ್ತ್ರನಿಷಿದ್ಧವೆಂದು ಭಾಗವತಕಾರರಿಗೆ ಗೊತ್ತಿಲ್ಲದೆ ಇಲ್ಲ. ಪರೀಕ್ಷಿತನೇ ಶುಕಮುನಿಗಳಿಗೆ ಪ್ರಶ್ನೆ ಹಾಕಿದ್ದಾನೆ:

"ಜಗದೀಶ್ವರನಾದ ಭಗವಂತನು ಧರ್ಮಸ್ಥಾಪನೆಗಾಗಿಯೂ ಅಧರ್ಮವಿನಾಶಕ್ಕಾಗಿಯೂ ಶ್ರೀಕೃಷ್ಣನಾಗಿ ಅವತರಿಸಿದನಲ್ಲವೆ? ಧರ್ಮಸೇತುಗಳ ಉಪದೇಶಕನೂ ಕರ್ತನೂ ಆದ ಆತನೇ ಪರಸ್ತ್ರೀಸಂಗವೆಂಬ ಈ ಪಾಪಕೃತ್ಯವನ್ನು

ಹೇಗೆ ಆಚರಿಸಿದನು? ಜುಗುಪ್ಸಿತವಾದ ಈ ಕಾರ್ಯವನ್ನು ಮಾಡಿದ್ದರ ಅಭಿಪ್ರಾಯವಾದರೂ ಏನು?" ಎಂದು. ಅದಕ್ಕೆ ಶುಕಮುನಿಗಳು ಹೇಳಿದ್ದೇನೆಂದರೆ–

"ಈಶ್ವರರಾದವರು ಧರ್ಮಮಾರ್ಗವನ್ನು ಉಲ್ಲಂಘಿಸುವುದೂ ಸಾಹಸ ಕೃತ್ಯವನ್ನಾಚರಿಸುವುದೂ ಕಂಡುಬಂದಿದೆ. ಅತ್ಯಂತ ತೇಜಸ್ವಿಗಳಿಗೆ ಅದು ದೋಷಾವಹವಲ್ಲ. ಸರ್ವವನ್ನೂ ನುಂಗಿ ನೊಣೆಯುವ ಬೆಂಕಿ ಇದ್ದಂತೆ ಅವರು. ಆದರೆ ಈಶ್ವರನಲ್ಲದವನು ಅಂತಹ ಕಾರ್ಯವನ್ನು ಎಂದಿಗೂ ಮನಸ್ಸಿನಲ್ಲಿಯೂ ಆಚರಿಸಕೂಡದು" (೩೩–೨೭ ರಿಂದ ೩೧)

ಆದರೆ ಲೋಕಶಿಕ್ಷಣಕ್ಕಾಗಿ ಬಂದವನು ಶ್ರೇಷ್ಠವಾದ ಧರ್ಮ ಮಾರ್ಗಲ್ಲಿ ನಡೆದು ಅನ್ಯರಿಗೆ ಆದರ್ಶಪ್ರಾಯನಾಗಿರಬೇಕಲ್ಲವೆ? ಶ್ರೀರಾಮನ ಆದರ್ಶ ಶ್ರೀಕೃಷ್ಣನಲ್ಲೇಕೆ ಮೂಲೆಗುಂಪಾಯಿತು? ಇದಕ್ಕೆ ಉತ್ತರವಾಗಿ ಶ್ರೀರಾಮನು ಮಾನವನಂತೆ ನಡೆದನೆಂಬುದನ್ನೂ ಶ್ರೀಕೃಷ್ಣನು ದೇವತ್ವವನ್ನೇ ಪ್ರಧಾನವಾಗಿ ಮೆರೆಸಿದನೆಂಬುದನ್ನೂ ಸ್ಮರಿಸಿಕೊಳ್ಳಬೇಕಾಗುತ್ತದೆ.

ಕೃಷ್ಣನು ಬಾಲ್ಯದಿಂದಲೂ ತನ್ನ ದೇವತ್ವವನ್ನು ಪ್ರಕಟಿಸುತ್ತಲೇ ಹೋಗಿದ್ದಾನೆ. ಅವನಿಗೆ ಬಂದ ವಿಪತ್ತುಗಳೆಲ್ಲ ಬಿರುಗಾಳಿಗೆ ಸಿಕ್ಕಿದ ಮೋಡದ ತುಂಡುಗಳಂತೆ ಕರಗಿಹೋದವು. ಯಾವ ಕಷ್ಟಕೋಟಲೆಗಳು ಎದುರಾದರೂ ಅವನು ಕ್ಷಣಮಾತ್ರವೂ ಚಿಂತಾತುರನಾದದ್ದಿಲ್ಲ. ಜಗತ್ತನ್ನು ಆಟದ ಬೊಂಬೆಯಂತೆ ತಿಳಿದು ಹಾಗೆಯೇ ನಡೆಸಿಕೊಂಡಿದ್ದಾನೆ. ಲೋಕಾತೀತರಾದವರ ಉಪದೇಶವು ನಮಗೆ ಪಥ್ಯವೇ ಹೊರತು ಅವರ ಆಚರಣೆ ಪಥ್ಯವಾಗಬೇಕೆಂಬ ನಿಯಮವಿಲ್ಲ. ಶ್ರೀರಾಮನಾದರೋ ಮಾನವನಂತೆ ನಡೆದವನು. ಲೋಕಮರ್ಯಾದೆಗೆ, ಶಾಸ್ತ್ರದ ನಿಯಮಕ್ಕೆ ಒಳಗಾಗಿ ನಡೆದಿದ್ದಾನೆ. ಅವನು ಧರ್ಮದ ಗೆರೆಯನ್ನು ದಾಟಿದವನಲ್ಲ. ಶ್ರೀಕೃಷ್ಣನಾದರೋ ಲೋಕಾತೀತನಾದವನು. ಶಾಸ್ತ್ರಗಳಿಗೆ ಕರ್ತನಾದವನು. ಧರ್ಮದ ಗೆರೆಯಾದರೋ ಕರ್ಮಬಂಧದಲ್ಲಿ ಸಿಕ್ಕಿದ ಮಾನವರಿಗೆ, ದೇವತೆಗಳಿಗಲ್ಲ. "ನ ಮಾಂ ಕರ್ಮಾಣಿ ಬಧ್ನಂತಿ ನ ಮೇ ಕರ್ಮಫಲೇ ಸ್ಪೃಹಾ" ಎಂದು ಹೇಳುವ ಮಹಾತ್ಮನಿಗೆ ಯಾರು ಧರ್ಮದ ಗೆರೆಯನ್ನು ಹಾಕಿಯಾರು?

ಶ್ರೀಕೃಷ್ಣನ ನಡತೆಯನ್ನು ಆಕ್ಷೇಪಿಸತಕ್ಕ ಆಧುನಿಕರಿಗೆ ಒಂದು ಪ್ರಶ್ನೆಯನ್ನು ಹಾಕತಕ್ಕದ್ದಿದೆ–"ಶ್ರೀಕೃಷ್ಣನು ಗೋಪಿಯರೊಡನೆ ವಿಹರಿಸಿದನೆಂದು ನಿಮಗೆ ಗೊತ್ತಾದದ್ದು ಹೇಗೆ?" ಎಂದು. "ಭಾಗವತದಲ್ಲಿಯೇ ಇದೆಯಲ್ಲ" ಎಂದು ಅವರು ಉತ್ತರಿಸುತ್ತಾರೆ. "ಶ್ರೀಕೃಷ್ಣನು ಸಾಕ್ಷಾತ್ ಪರಮಾತ್ಮನೆಂದೂ ಅವನಿಗೆ ಯಾವ ಕರ್ಮಬಂಧವೂ ಇಲ್ಲವೆಂದೂ

ಭಾಗವತದಲ್ಲೇ ಹೇಳಿದೆಯಲ್ಲ" ಎಂದು ನಾವು ತಿರುಗಿ ಕೇಳುತ್ತೇವೆ. ಇದಕ್ಕೆ ವಿತಂಡವಾದದಿಂದ ಅವರು ತಿರುಗಿ, ಉತ್ತರ ಹೇಳುವರೇ ಹೊರತು ನೇರವಾಗಿ ನ್ಯಾಯವಾದ ಉತ್ತರವನ್ನು ಹೇಳಲಾರರು.

ಒಂದಾನೊಂದು ಧರ್ಮಸೂಕ್ಷ್ಮವನ್ನು ತಿಳಿಸುವುದಕ್ಕಾಗಿಯೆ ಗೋಪೀಪ್ರಸಂಗವನ್ನು ಭಾಗವತಕಾರರು ತಂದಿದ್ದಾರೆಂದು ನನ್ನ ನಂಬಿಕೆ. ಹಾಗಿಲ್ಲದಿದ್ದರೆ ಗೋಪಿಕೆಯರ ವಿರಹಕಥೆಯನ್ನು ಅವರು ಸಂಪೂರ್ಣವಾಗಿ ಬಿಟ್ಟುಬಿಡಬಹುದಾಗಿತ್ತು. ಅದನ್ನು ಬರೆಯುವಂತೆ ಒತ್ತಾಯಪಡಿಸಿದವರು ಯಾರು?

ಆಜನ್ಮವೈರಿಗಳಾದ ಶಿಶುಪಾಲಾದಿಗಳು ದ್ವೇಷಬುದ್ಧಿಯಿಂದ ಲಾದರೂ ಸದಾ ಶ್ರೀಕೃಷ್ಣನನ್ನು ಸ್ಮರಿಸುತ್ತ ಇದ್ದುದರಿಂದ ಸದ್ಗತಿಯನ್ನು ಪಡೆದರೆಂದು ಭಾಗವತ ಹೇಳುತ್ತದೆ. ಪ್ರಹ್ಲಾದನು ತಂದೆಯ ಆಜ್ಞೆಯನ್ನು ಉಲ್ಲಂಘಿಸಿದ್ದು ಧರ್ಮವಾಗಬಹುದೊ? ಬೇಡರ ಕಣ್ಣಪ್ಪನು ಶಿವಲಿಂಗವನ್ನು ಮುಟ್ಟಿದ್ದು, ಕಾಲಿನಿಂದ ಅದನ್ನು ತುಳಿದದ್ದು ಧರ್ಮವೊ? ಭಕ್ತಿರಾಜ್ಯದಲ್ಲಿ ಜಾತಿನೀತಿಗಳ ಕಟ್ಟಳೆಯೇ ಇಲ್ಲ. ಭಗವದ್ಭಕ್ತಿಯೆಂಬ ಮಹಾಧರ್ಮವು ಎಲ್ಲ ಕಟ್ಟಳೆಗಳನ್ನೂ ಸುಟ್ಟು ಬೂದಿ ಮಾಡುವಂತಹದು. ಸಾರಾಂಶವೇನೆಂದರೆ, ಗೋಪಿಯರ ಪ್ರೇಮವು ಪರಮಶ್ರೇಷ್ಠವಾದ ಭಗವದ್ಭಕ್ತಿಯ ಒಂದು ಪ್ರಕಾರ.

ಏಕಾದಶ ಮತ್ತು ದ್ವಾದಶ ಸ್ಕಂಧಗಳು ಭಾಗವತದಲ್ಲಿ ಬಹಳ ಮುಖ್ಯವಾದುವುಗಳೆಂದು ನನ್ನ ಎಣಿಕೆ. ಈ ಮಹಾಪುರಾಣದ ಇತರ ಸ್ಕಂಧಗಳಲ್ಲಿ ಹರಡಿದ ಪರಮಾರ್ಥತತ್ತ್ವವು ಈ ಎರಡೂ ಸ್ಕಂಧಗಳಲ್ಲಿ ಸಾರವತ್ತಾಗಿ ಬಂದಿದೆ. ಶ್ರೀಕೃಷ್ಣನು ಉದ್ಧವನಿಗೆ ಸಮಸ್ತ ವೇದಾಂತಸಾರವನ್ನು ಇಲ್ಲಿ ಬೋಧಿಸಿದ್ದಾನೆ. ಶ್ರೀಕೃಷ್ಣಾವತಾರದ ಮುಕ್ತಾಯದ ಘಟ್ಟದಲ್ಲಿ ಭಕ್ತಶಿರೋಮಣಿಯೂ ಅತ್ಯಂತ ಪ್ರಿಯನೂ ಆಗಿದ್ದ ಉದ್ಧವನಿಗೆ ಶ್ರೀಕೃಷ್ಣನು ಮಾಡಿದ ಅಂತಿಮೋಪದೇಶವು ಇದೇ. ಉದ್ಧವನನ್ನು ವ್ಯಾಜವಾಗಿ ಇಟ್ಟುಕೊಂಡು ಅಖಿಲ ಮಾನವಕುಲದ ಕಲ್ಯಾಣಕ್ಕಾಗಿ ಭಗವಂತನು ಅನುಗ್ರಹಿಸಿದ ದಿವ್ಯ ಸಂದೇಶವಿದು. ಜೊತೆಗೆ ಶ್ರೀ ಶುಕಮಹರ್ಷಿಗಳು ಮತ್ತು ಸೂತಪೌರಾಣಿಕರು ಭಗವದುಪದೇಶಕ್ಕೆ ಅನುಗುಣವಾಗಿ ಬೋಧಿಸಿದ ಸಂದೇಶವೂ ಇದೇ.

೬. ಶ್ರೀವಿಷ್ಣುಪುರಾಣ-ಶ್ರೀಮದ್ಭಾಗವತ

ವಿಷ್ಣುವಿನ ಪ್ರಸಿದ್ಧವಾದ ದಶಾವತಾರಗಳಲ್ಲಿ ಕೂರ್ಮ, ವರಾಹ, ನೃಸಿಂಹ, ಶ್ರೀರಾಮ ಮತ್ತು ಶ್ರೀಕೃಷ್ಣ ಈ ಐದು ಅವತಾರಗಳ ವಿಚಾರ ವಿಷ್ಣುಪುರಾಣದಲ್ಲಿ ಬಂದಿದೆ. ಇವುಗಳಲ್ಲಿ ಶ್ರೀಕೃಷ್ಣ ಚರಿತೆ ವಿಸ್ತಾರವಾಗಿ ಬಂದಿದೆ. ನೃಸಿಂಹನು ಹಿರಣ್ಯಕಶಿಪುವನ್ನು ಸಂಹರಿಸಿದ ವೃತ್ತಾಂತವು ಆನುಷಂಗಿಕವಾಗಿ ಒಂದೇ ಮಾತಿನಲ್ಲಿ ಸೂಚಿತವಾಗಿದೆ. ಭಕ್ತಿಯು ಪ್ರಧಾನವೆಂದು ನಿರೂಪಿತವಾಗಿದ್ದರೂ ವಿಸ್ತೃತವಾಗಿಲ್ಲ. ಭಾಗವತದಲ್ಲಾದರೋ ಇವೆಲ್ಲವುಗಳ ವರ್ಣನೆ ವಿಸ್ತೃತವಾಗಿ ಬಂದಿದೆ. ಭಗವದ್ಭಕ್ತಿಯ ಶ್ರೇಷ್ಠತೆಯನ್ನು ಪ್ರತಿಪಾದಿಸುವುದಕ್ಕಾಗಿಯೇ ಭಾಗವತವು ವಿರಚಿತವಾಗಿದೆ ಎಂಬುದನ್ನು ಸ್ಮರಿಸಿಕೊಳ್ಳಬಹುದು. ವಾಸುದೇವಾದಿ ಚತುರ್ವ್ಯೂಹದ ಸ್ತುತಿಯು ಉಭಯ ಪುರಾಣಗಳಲ್ಲಿಯೂ ಬಂದಿದೆ. ವರ್ಣಿತವಾದ ಕಥಾಭಾಗದಲ್ಲಿಯೂ ಪ್ರಮೇಯ ನಿರೂಪಣೆಯಲ್ಲಿಯೂ ಪರಮಾರ್ಥವಿಚಾರದಲ್ಲಿಯೂ ಈ ಉಭಯಪುರಾಣಗಳಿಗಿರುವ ಸಾಮ್ಯವು ಎದ್ದುಕಾಣುವಂತಹುದು. ವಿಷ್ಣುಪುರಾಣದ ವಿಸ್ತಾರವಾದ ಉಪಬೃಂಹಣವೇ ಭಾಗವತವೆನ್ನಲಡ್ಡಿಯಿಲ್ಲ.

ಭಾಗವತದ ಮಹತ್ತ್ವ

ಶ್ರೀಮದ್ಭಾಗವತವು ಪುರಾಣಗಳಲ್ಲಿ ಶ್ರೇಷ್ಠವಾದ ಸ್ಥಾನವನ್ನು ಪಡೆದು ಅತ್ಯಂತ ಜನಪ್ರಿಯವಾಗಿದೆ. ಇದು ಸರ್ವವೇದಾಂತಸಾರವೆಂದೂ ಭಾಗವತದಲ್ಲಿ ಉಕ್ತವಾಗಿದೆ. ನಿಗಮಕಲ್ಪತರುವಿನಿಂದ ಉದುರಿದ ಅಮೃತರಸಮಯವಾದ ಫಲವಿದೆಂದು ಪದ್ಮಪುರಾಣವು ಹೇಳುತ್ತದೆ. ಈ ಗ್ರಂಥಕ್ಕೆ ಇರುವ ವಿಪುಲ ವ್ಯಾಖ್ಯಾನಗಳೇ ಭಾಗವತದ ಪ್ರಾಶಸ್ತ್ಯವನ್ನು ಎತ್ತಿ ತೋರಿಸುತ್ತವೆ. ಸುಮಾರು ಮೂವತ್ತೈದು ವ್ಯಾಖ್ಯಾನಗಳು ಉಪಲಬ್ಧವಾಗಿವೆ. ಇವುಗಳಲ್ಲಿ ಶ್ರೀಧರಸ್ವಾಮಿಗಳ ಭಾವಾರ್ಥದೀಪಿಕೆ,

ವೀರರಾಘವಾಚಾರ್ಯರ ಭಾಗವತಚಂದ್ರಚಂದ್ರಿಕೆ, ವಿಜಯಧ್ವಜರ ಪದರತ್ನಾವಲೀ–ಇವು ಮೂರು ಕ್ರಮವಾಗಿ ಅದ್ವೈತ, ವಿಶಿಷ್ಟಾದ್ವೈತ, ದ್ವೈತ ಮತಾನುಸಾರಿಗಳಾದ ಪ್ರಸಿದ್ಧವ್ಯಾಖ್ಯಾನಗಳು. ವಲ್ಲಭಾಚಾರ್ಯರ ಶುದ್ಧಾದ್ವೈತಮತಾನು ಸಾರಿಯಾದ ಸುಬೋಧಿನೀವ್ಯಾಖ್ಯೆಯೂ ಉಲ್ಲೇಖಾರ್ಹವಾದುದು. ಕ್ರಿ.ಶ. ಹದಿಮೂರನೆಯ ಶತಮಾನದಲ್ಲಿದ್ದ ಬೋಪದೇವನೆಂಬ ವಿಖ್ಯಾತ ವಿದ್ವಾಂಸನು ಭಾಗವತದಲ್ಲಿ ಗಾಢವಾದ ಪರಿಶ್ರಮವನ್ನು ಹೊಂದಿದ್ದನು. ಅವನು "ಹರಿಲೀಲಾಮೃತ" ಎಂಬ ಒಂದು ಗ್ರಂಥವನ್ನು ಬರೆದಿದ್ದಾನೆ. ಅದು ಭಾಗವತ ದ್ವಾದಶಸ್ಕಂಧಗಳ ವಿಷಯಾನುಕ್ರಮಣಿಕೆಯಂತಿದ್ದರೂ ಪ್ರಮೇಯವಾದ ಸೂಕ್ಷ್ಮ ವಿಚಾರಗಳನ್ನೂ ಆತನು ಸಂಗ್ರಹಿಸಿ ತಿಳಿಸಿದ್ದಾನೆ. ಇದಕ್ಕೆ ಮಧುಸೂದನ ಸರಸ್ವತಿಗಳ ವ್ಯಾಖ್ಯಾನವಿದೆ.

ಪರಮಾತ್ಮನನ್ನು ಹೊಂದುವ ಸರಳವಾದ ಸಾಧನ ಮಾರ್ಗವನ್ನು ತೋರಿಸಿಕೊಟ್ಟಿರುವುದೇ ಭಾಗವತದ ಹೆಚ್ಚುಗಾರಿಕೆ. ಭಕ್ತಿಮಾರ್ಗವೇ ಸರ್ವಜನಸಾಧ್ಯವಾದ ಉಪಾಯವೆಂದು ಭಾಗವತವು ನಿರೂಪಿಸುತ್ತದೆ. ಮಹಾಭಾರತವನ್ನು ರಚಿಸಿದ ಮೇಲೆಯೂ ವೇದವ್ಯಾಸರ ಹೃದಯಕ್ಕೆ ತೃಪ್ತಿಯಾಗಲಿಲ್ಲವೆಂದೂ ಭಾಗವತವನ್ನು ರಚಿಸಿದ ಮೇಲೆ ಅವರ ಹೃದಯವು ಸಂತೃಪ್ತವಾಯಿತೆಂದೂ ವರ್ಣನೆಯಿದೆ. ಭಕ್ತಿಗೆ ಪ್ರಾಧಾನ್ಯವಿಲ್ಲದಿದ್ದಾಗ ಜ್ಞಾನವೈರಾಗ್ಯಗಳೂ ಸಹ ಶಕ್ತಿಹೀನವಾಗಿ ಕ್ಷಯಿಸಿಹೋದವೆಂದೂ ಭಾಗವತಶ್ರವಣದಿಂದ ಭಕ್ತಿಯು ಉಜ್ಜೀವಿತವಾಗಿ ಜ್ಞಾನವೈರಾಗ್ಯಗಳು ಶಕ್ತಿಯುತವಾದವೆಂದೂ ಪದ್ಮ ಪುರಾಣದಲ್ಲಿರುವ ಭಾಗವತಮಾಹಾತ್ಮ್ಯವು ತಿಳಿಸುತ್ತದೆ. ಮೋಕ್ಷಸಾಧನಗಳಾದ ಜ್ಞಾನವೈರಾಗ್ಯಗಳು ಭಗವದ್ಭಕ್ತಿಯಿಂದಲೇ ಕಾರ್ಯಕಾರಿಗಳಾಗುತ್ತವೆಯೆಂದು ಇದರ ತಾತ್ಪರ್ಯ. ಪ್ರಹ್ಲಾದನ ಚರಿತ್ರೆಯು ಭಕ್ತಿಯ ಆವಶ್ಯಕತೆಯನ್ನು ಎತ್ತಿ ತೋರಿಸುತ್ತದೆ. ಶೀಲ, ದಾನ, ತಪಸ್ಸುಗಳಿಗಿಂತ ಭಕ್ತಿಯಿಂದ ಭಗವಂತನು ಬಹು ಬೇಗನೆ ಪ್ರಸನ್ನನಾಗುತ್ತಾನೆ. "ಪ್ರೀಯತೇಽನನ್ಯಯಾ ಭಕ್ತ್ಯಾ ಹರಿರನ್ಯದ್ವಿಡಂಬನಮ್" ಹಾಗೆಯೇ ವರ್ಣಾಶ್ರಮ ವಿಹಿತವಾದ ಕರ್ಮವನ್ನು ಆಚರಿಸುತ್ತ ಕರ್ಮಫಲವನ್ನು ಭಗವಂತನಿಗೆ ಅರ್ಪಿಸಬೇಕೆಂಬ ನಿಷ್ಕಾಮಕರ್ಮಯೋಗವನ್ನು ಈ ಗ್ರಂಥವು ಬೋಧಿಸುತ್ತದೆ. ಕರ್ಮವು ಜ್ಞಾನಕ್ಕೆ ಆವಶ್ಯಕವಾದ ಚಿತ್ತಶುದ್ಧಿಯನ್ನುಂಟು ಮಾಡುತ್ತದೆ. ಕರ್ಮಮಾರ್ಗವೂ ಸಹ ಭಕ್ತಿಯಿಂದ ಸಹಕೃತವಾಗಿರಬೇಕು. ಭಕ್ತಿಯಿಲ್ಲದೆ ಜ್ಞಾನವನ್ನು ಪಡೆಯಲು ಮನುಷ್ಯನು ಮಾಡುವ ಪ್ರಯತ್ನವು ನಿಷ್ಫಲ ಮತ್ತು ಕ್ಲೇಶದಾಯಕ. ಶ್ರವಣ, ಕೀರ್ತನ, ಸ್ಮರಣ, ಪಾದಸೇವನ, ಅರ್ಚನ, ವಂದನ, ದಾಸ್ಯ, ಸಖ್ಯ ಮತ್ತು ಆತ್ಮನಿವೇದನ–ಎಂದು ಭಕ್ತಿಯು ನವವಿಧವಾಗಿರುತ್ತದೆ. ಭಕ್ತಿಯಷ್ಟು ಆನಂದರೂಪವಾದದ್ದು ಮೋಕ್ಷವೂ ಅಲ್ಲ, ಭಗವದ್ಭಕ್ತನು

ಮೋಕ್ಷವನ್ನೂ ಒಲ್ಲದೆ ಆತ ನಿತ್ಯ ಭಕ್ತನಾಗಿಯೇ ಇರಲು ಬಯಸುತ್ತಾನೆಂದು ಭಕ್ತಿಯ ಸರ್ವಾತಿಶಾಯಿಯಾದ ಆನಂದವನ್ನು ಭಾಗವತವು ಪ್ರತಿಪಾದಿಸುತ್ತದೆ.

ಆತ್ಮಾರಾಮಾಶ್ಚ ಮುನಯೋ ನಿರ್ಗ್ರಂಥಾ ಅಪ್ಯುರುಕ್ರಮೇ।
ಕುರ್ವಂತ್ಯಹೈತುಕೀಂ ಭಕ್ತಿಮಿತ್ಥಂಭೂತಗುಣೋ ಹರಿಃ॥
(೧-೭-೧೦)

ಪ್ರೇಮಮಯವಾದ ಮಧುರಭಕ್ತಿಯನ್ನು ತೋರಿಸಿಕೊಟ್ಟಿರುವುದು ಭಾಗವತದ ಒಂದು ವೈಶಿಷ್ಟ್ಯವೆನ್ನಬಹುದು. ಗೋಪಿಕಾಸ್ತ್ರೀಯರು ಕಾಮಪ್ರಚೋದಿತವಾದ ಪ್ರೇಮಭಕ್ತಿಯನ್ನು ಶ್ರೀಕೃಷ್ಣನಲ್ಲಿ ತಳೆದು ಶ್ರೇಯಸ್ಸನ್ನು ಪಡೆದರೆಂದು ಭಾಗವತವು ನಿರೂಪಿಸುತ್ತದೆ. ಅವರ ಪ್ರೇಮವು ಕಾಮದೂಷಿತವಾಗಿದ್ದರೂ ಪರಮಾತ್ಮನಲ್ಲಿಯೇ ನೆಲೆಸಿದ್ದರಿಂದ ಅವರಿಗೆ ಸದ್ಗತಿಯಾಯಿತೆಂದು ಭಾಗವತವು ಸ್ಪಷ್ಟವಾಗಿ ಹೇಳುತ್ತದೆ. ಮಳೆಯ ನೀರು ಮುತ್ತಿನ ಚಿಪ್ಪಿನಲ್ಲಿ ಬಿದ್ದಾಗ ಮುತ್ತೇ ಆಗಿಬಿಡುತ್ತದೆಯಂತೆ. ಅಂತೆಯೇ ಗೋಪಿಯರ ಪ್ರೇಮಭಕ್ತಿಯು ಸತ್ಪಾತ್ರದಲ್ಲಿ ನೆಟ್ಟದ್ದರಿಂದ ಅದರ ಪರಿಣಾಮವು ಶ್ರೇಷ್ಠವಾಯಿತೆಂದು ಭಾಗವತಕಾರರ ಆಶಯವಾಗಿರುತ್ತದೆ.

ಕರ್ಮವು ಕರ್ಮಬಂಧವನ್ನು ಸಂಪೂರ್ಣವಾಗಿ ತೊಡೆದು ಹಾಕಲಾರದು. ಯಾವಾತನಿಗೆ ಆತ್ಮಜ್ಞಾನವಾಗಿಲ್ಲವೋ ಆತನೇ ಕರ್ಮಕ್ಕೆ ಅಧಿಕಾರಿ. ಕರ್ಮಬಂಧವನ್ನು ತೊಡೆದುಹಾಕತಕ್ಕದ್ದು ಜ್ಞಾನವೇ ಸರಿ. (೬-೧-೧೧) "ತ್ರಯ್ಯಾಂ ಜಡೀಕೃತಮತಿಃ ಮಧುಪುಷ್ಪಿತಾಯಾಂ ವೈತಾನಿಕೇ ಮಹತಿ ಕರ್ಮಣಿ ಯುಜ್ಯಮಾನಃ" (೬-೩-೨೫) ಎಂಬ ನುಡಿಯು ಭಗವದ್ಗೀತೆಯ "ಯಾಮಿಮಾಂ ಪುಷ್ಪಿತಾಂ ವಾಚಂ ಪ್ರವದಂತ್ಯವಿಪಶ್ಚಿತಃ" ಎಂಬ ನುಡಿಯನ್ನು ನೆನಪಿಗೆ ತರುತ್ತದೆ. ಈ ಕರ್ಮಕಾಂಡವು ಆತ್ಮಜ್ಞಾನಿಗಳಲ್ಲದವರಿಗೆ ಹೊರತು ಜ್ಞಾನಿಗಳಿಗಲ್ಲ. ಪರಮಾರ್ಥವಾಗಿ ವೇದವು ಕರ್ಮಚೋದಕವಲ್ಲವೆನ್ನುತ್ತದೆ ಭಾಗವತ. "ಆಹುರ್ಧೂಮ್ರಧಿಯೋ ವೇದಂ ಸಕರ್ಮಕಮತದ್ವಿದಃ" (೪-೨೯-೪೮).

ಮೂರ್ತಿಪೂಜೆಯನ್ನು ಭಾಗವತವು ಸಾಧಕನಿಗೋಸ್ಕರ ಹೇಳಿದೆ. ಆದರೆ ಸಾಧಕನು ಸರ್ವಭಾವಗಳಲ್ಲಿಯೂ ಪರಮಾತ್ಮನು ಇದ್ದಾನೆಂಬ ದೃಢವಾದ ನಿಲುವನ್ನು ತಳೆದು ಚಿತ್ತಸ್ಥೈರ್ಯಸಂಪಾದನೆಗಾಗಿ ಮೂರ್ತಿಯನ್ನು ಪೂಜಿಸತಕ್ಕದ್ದು. ಹಾಗಿಲ್ಲದೆ ಮೂರ್ತಿಯೊಂದೇ ದೇವರೆಂಬ ಭಾವನೆಯನ್ನು ತಳೆದರೆ ಆ ಪೂಜೆಯು ವಿಡಂಬನೆಯೇ ಸರಿ–

ಯೋ ಮಾಂ ಸರ್ವೇಷು ಭೂತೇಷು ಸಂತಮಾತ್ಮಾನಮೀಶ್ವರಮ್।
ಹಿತ್ವಾರ್ಚಾಂ ಭಜತೇ ಮೌಢ್ಯಾತ್ ಭಸ್ಮನ್ಯೇವ ಜುಹೋತಿ ಸಃ॥
(೩-೨೯-೨೨)

ಭಕ್ತಿಯು ಜ್ಞಾನಾರ್ಥ

ಭಕ್ತಿಯು ಮೋಕ್ಷಕ್ಕೆ ಪರಮಸಾಧನವೆಂದು ಹೊಗಳಿದ್ದರೂ ಅದು ಜ್ಞಾನದ್ವಾರಾ ಮೋಕ್ಷಕ್ಕೆ ನಿಮಿತ್ತವೇ ಹೊರತು ಸಾಕ್ಷಾತ್ ಅಲ್ಲ. ಭಕ್ತಿಯಿಂದ ಜ್ಞಾನ ವೈರಾಗ್ಯಗಳು ಉಜ್ಜೀವಿತವಾದವು-ಎಂಬ ಪದ್ಮಪುರಾಣದ ಕಥೆಯನ್ನು ಇಲ್ಲಿ ಸ್ಮರಿಸಿಕೊಳ್ಳಬೇಕು.

"ಭಕ್ತ್ಯಾ ಮಾಮಭಿಜಾನಾತಿ ಯಾವಾನ್ ಯಶ್ಚಾಸ್ಮಿತತ್ತ್ವತಃ।
ತತೋ ಮಾಂ ತತ್ತ್ವತೋ ಜ್ಞಾತ್ವಾ ವಿಶತೇ ತದನಂತರಮ್॥

ಎಂಬ ಭಗವದ್ಗೀತಾವಚನವನ್ನೂ (೧೮-೫೫) ಇಲ್ಲಿ ಉದಾಹರಿಸಬಹುದು. ಭಾಗವತದಲ್ಲಿಯೂ ಸಹ ಭಕ್ತಿಯು ಜ್ಞಾನಾರ್ಥವೆಂದು ಸ್ಪಷ್ಟವಾಗಿ ಹೇಳಿದೆ-

(೧) ತಾವತ್ ಪರಿಚರೇದ್ಭಕ್ತಃ (೧೧-೧೮-೩೯)

(೨) ವೇನಪುತ್ರನಾದ ಪೃಥುರಾಜನು ಭಗವಂತನ ಸ್ಮರಣೆಯಿಂದ ವಿರಕ್ತಿಪೂರ್ವಕವಾದ ಜ್ಞಾನವನ್ನು ಪಡೆದನೆಂದೂ ಅದರಿಂದ ನಿಜ ಜೀವಕೋಶವನ್ನು ತ್ಯಜಿಸಿದನೆಂದೂ ವರ್ಣನೆ ಇದೆ. (೪-೨೩-೧೧)

(೩) ತೀವ್ರವಾದ ಭಕ್ತಿಯೋಗದಿಂದ ತತ್ತ್ವಜ್ಞಾನವಾಗಿ ಮನುಷ್ಯನು ಪರಮಾತ್ಮನನ್ನು ಸೇರಿಕೊಳ್ಳುತ್ತಾನೆಂದು ಭಗವಂತನು ದೇವಹೂತಿಗೆ ಉಪದೇಶಿಸಿದ್ದಾನೆ. (೩-೨೭-೫- ರಿಂದ ೧೬)

(೪) ನನ್ನ ಭಕ್ತನು ನನ್ನ ಅನುಗ್ರಹದಿಂದ ತತ್ತ್ವಾರ್ಥವನ್ನು ತಿಳಿದು ಛಿನ್ನ ಸಂಶಯನಾಗಿ ಕೈವಲ್ಯವನ್ನು ಪಡೆಯುತ್ತಾನೆ. (೩-೨೭-೨೮, ೨೯)

ಒಟ್ಟಿನಲ್ಲಿ ಭಾಗವತದ ತಾತ್ಪರ್ಯವು ಇಷ್ಟೆಂದು ತೋರುತ್ತದೆ: ಯಾರಿಗೆ ವೈರಾಗ್ಯವಿನ್ನೂ ಹುಟ್ಟಿರುವುದಿಲ್ಲವೋ ಅವರಿಗೆ ಕರ್ಮಯೋಗವು ಯುಕ್ತವಾದದ್ದು. ಯಾರಿಗೆ ವಿಶೇಷವಾದ ವೈರಾಗ್ಯವಾಗಲಿ ಸಂಸಾರದಲ್ಲಿ ತೀವ್ರವಾದ ಆಸಕ್ತಿಯಾಗಲಿ ಇಲ್ಲವೋ ಅವರಿಗೆ ಭಕ್ತಿಯೋಗವು ಉತ್ತಮ. ಯಾರು ಸಂಸಾರದಲ್ಲಿ ತೀವ್ರವಾದ ವೈರಾಗ್ಯವನ್ನು ಪಡೆದಿರುತ್ತಾರೋ ಅವರಿಗೆ ಜ್ಞಾನಯೋಗವು ವಿಹಿತವಾದದ್ದು.

ಭಾಗವತರೆಂದರೆ ಯಾರು?

'ಭಗವಾನ್ ಭಕ್ತಿಃ ಅಸ್ಯೇತಿ ಭಾಗವತಃ' ಎಂದು ಭಾಗವತ ಶಬ್ದದ ವ್ಯುತ್ಪತ್ತಿ। 'ಭಕ್ತಿಃ' ಎಂಬ ಪಾಣಿನಿ ಸೂತ್ರದಿಂದ (ಅಷ್ಟಾ. ೪-೩-೯೫) ಈ ಶಬ್ದವು ಸಿದ್ಧವಾಗುತ್ತದೆ. 'ಭಜ್ಯತೇ ಸೇವ್ಯತೇ ಇತಿ ಭಕ್ತಿಃ'. ಭಕ್ತಿಯೆಂದರೆ ಸೇವ್ಯಮಾನ ಎಂದರ್ಥ. ಸೂತ್ರದಲ್ಲಿ ಭಕ್ತಿಶಬ್ದವು ಭಾವನಾಮವಲ್ಲ, ಅದು ಕರ್ಮಸಾಧನ. ಭಾಗವತನೆಂದರೆ ಭಗವದ್ಭಕ್ತನೆಂದರ್ಥ.

ಈ ಪುರಾಣವನ್ನು ಭಾಗವತವೆನ್ನುವಾಗ ಶಬ್ದದ ವ್ಯುತ್ಪತ್ತಿ ಬೇರೆಯಾಗುತ್ತದೆ. ಭಗವಂತಮಧಿಕೃತ್ಯ ಕೃತೋ ಗ್ರಂಥಃ ಭಾಗವತಮ್ ಭಗವಂತನನ್ನು ಉದ್ದೇಶಿಸಿ ಬರೆದ ಗ್ರಂಥ ಭಾಗವತ. "ಅಧಿಕೃತ್ಯ ಕೃತೇ ಗ್ರಂಥೇ" ಎಂಬ ಪಾಣಿನಿ ಸೂತ್ರದಿಂದ (೪-೩-೮೭) ಅಣ್‌ಪ್ರತ್ಯಯ.

ಭಕ್ತರಲ್ಲಿ ಭಾಗವತೋತ್ತಮನು ಯಾರೆಂದರೆ-

(೧) ಸಮಸ್ತ ಭೂತಗಳಲ್ಲಿಯೂ ಆತ್ಮನಾದ ಶ್ರೀಹರಿಯ ನಿರತಿಶಯವಾದ ಐಶ್ವರ್ಯವನ್ನು ಯಾವನು ಕಾಣುತ್ತಾನೋ ಮತ್ತು ಭಗವಂತನಾದ ಶ್ರೀಹರಿಯಲ್ಲಿ ಸಮಸ್ತ ಭೂತಗಳೂ ನೆಲೆಸಿವೆಯೆಂದು ಯಾವನು ಅರಿಯುತ್ತಾನೋ ಅವನು ಭಾಗವತೋತ್ತಮ. (೧೧-೨-೪೫)

(೨) ಯಾವಾತನು ಇಂದ್ರಿಯಗಳಿಂದ ವಿಷಯಗಳನ್ನು ಗ್ರಹಿಸಿದರೂ ಸಹ ದ್ವೇಷಿಸುವುದೂ ಇಲ್ಲವೋ ಹರ್ಷಿಸುವುದೂ ಇಲ್ಲವೋ ಮತ್ತು ಈ ವಿಶ್ವವೆಲ್ಲವೂ ವಿಷ್ಣುವಿನ ಮಾಯಾ ವಿಜೃಂಭಿತವೆಂದು ತಿಳಿದಿರುವನೋ ಅವನು ಭಾಗವತೋತ್ತಮ. (೧೧-೨-೪೮)

(೩) ಯಾವಾತನಿಗೆ ಹಣದ ವಿಷಯದಲ್ಲಿ ನನ್ನದು-ಅನ್ಯರದು ಎಂಬುದಾಗಿಯೂ ಜನರ ವಿಷಯದಲ್ಲಿ ನನ್ನವರು-ಅನ್ಯರು ಎಂಬುದಾಗಿಯೂ ಭೇದಬುದ್ಧಿ ಇರುವುದಿಲ್ಲವೋ ಸರ್ವಭೂತ ಗಳಲ್ಲಿಯೂ ಸಮತ್ವಬುದ್ಧಿ ಇರುವುದೋ ಅಂತಹ ಶಾಂತಸ್ವಭಾವದವನು ಭಾಗವತೋತ್ತಮ. (೧-೨-೫೨)

ಈ ಲಕ್ಷಣಗಳು ಆತ್ಮಜ್ಞಾನಿಗೆ ಮಾತ್ರ ಅನ್ವಯಿಸತಕ್ಕವು. ಆರ್ತನೇ ಮೊದಲಾದ ಚತುರ್ವಿಧಭಕ್ತರಲ್ಲಿ 'ಜ್ಞಾನೀ ತ್ವಾತ್ಮೈವ ಮೇ ಮತಮ್' ಎಂಬ ಭಗವದ್ಗೀತಾವಚನದೊಡನೆ (೭-೧೮) ಇದನ್ನು ಹೋಲಿಸಿನೋಡಬಹದು. ಜ್ಞಾನಿಯೇ ಭಾಗವತೋತ್ತಮ.

ಧ್ಯಾನಯೋಗ

ನವವಿಧ ಭಕ್ತಿಪ್ರಕಾರಗಳಲ್ಲಿ ಅರ್ಚನೆಯೂ ಒಂದು ಪ್ರಕಾರವಷ್ಟೆ. ಮೂರ್ತಿಪೂಜೆ ಈ ಅರ್ಚನೆಯ ಪಂಕ್ತಿಗೆ ಸೇರುತ್ತದೆ. ಇದು ಕ್ರಿಯಾಯೋಗ (ಕರ್ಮಕಾಂಡ)ವೆಂದೂ ಅನಂತಪಾರವೆಂದೂ ಭಗವಂತನು ಹೇಳಿದ್ದಾನೆ. ಅಷ್ಟವಿಧಮೂರ್ತಿಗಳಲ್ಲಿ ಮಾನಸ ಪೂಜೋಪಯುಕ್ತವಾದ ಮನೋಮಯ ಮೂರ್ತಿಯೂ ಒಂದೆಂಬುದು ಗಮನಾರ್ಹವಾದದ್ದು. ಅಗ್ನಿಯಲ್ಲಿ ಮಾಡುವ ಹೋಮವು ಅರ್ಚಾಪ್ರಕಾರಗಳಲ್ಲೊಂದು. ಎಲ್ಲೆಡೆಯಲ್ಲಿಯೂ ಚತುರ್ಭುಜನಾದ ವಿಷ್ಣುವನ್ನು ಧ್ಯಾನಿಸಿಕೊಳ್ಳಬೇಕೆಂದು ಹೇಳಲಾಗಿದೆ.

ಶ್ರವಣಾದಿ ನವಪ್ರಕಾರಗಳಲ್ಲಿ ಸ್ಮರಣವು ಧ್ಯಾನಯೋಗವೆನಿಸುತ್ತದೆ. ಇದೇ ಉಪಾಸನೆ. ಉಪಾಸನೆಯಲ್ಲಿ ಸರ್ವಾಂಗಸುಂದರನಾದ ವಿಷ್ಣುಮೂರ್ತಿಯನ್ನು ಮನಸ್ಸಿನಲ್ಲಿ ಕಲ್ಪಿಸಿಕೊಂಡು ಸಾಧಕನು ಸಾಧನೆಯ ಪ್ರಥಮ ಹಂತದಲ್ಲಿ ಧ್ಯಾನಿಸುತ್ತಿರಬೇಕು. ಈ ಮನೋಮಯ ಮೂರ್ತಿಯ ಸರ್ವಾಂಗಗಳಲ್ಲಿಯೂ ಸಾಧಕನ ಮನಸ್ಸು ನೆಟ್ಟಿರುತ್ತದೆ. ಅನಂತರ ಮುಖವೊಂದನ್ನೇ ಧ್ಯಾನಿಸುತ್ತಿರಬೇಕು. ಇತರ ಅಂಗಗಳನ್ನು ಚಿಂತಿಸಬಾರದು. ಹೀಗೆ ಮುಖಧ್ಯಾನದಲ್ಲಿಯೇ ನಿಲ್ಲುವ ಶಕ್ತಿಯನ್ನು ಮನಸ್ಸು ಗಳಿಸಿದಮೇಲೆ, ಅದನ್ನು ಪರಮಕಾರಣವಾದ ಅವ್ಯಕ್ತಸ್ವರೂಪದಲ್ಲಿ ನಿಲ್ಲಿಸಬೇಕು. ಅಲ್ಲಿ ಮನಸ್ಸು ಸ್ಥೈರ್ಯವನ್ನು ಪಡೆದಮೇಲೆ ಮನಸ್ಸನ್ನು ಶುದ್ಧಬ್ರಹ್ಮದಲ್ಲಿ ನಿಲ್ಲಿಸಿದಾಗ ಧ್ಯಾತೃಧ್ಯೇಯವಿಭಾಗವು ಕಳಚಿಕೊಳ್ಳುತ್ತದೆ. ಆಗ ಧ್ಯಾನಕ್ಕೆ ಬ್ರಹ್ಮವು ವಿಷಯವಾಗದೆ ಇರುವುದರಿಂದ ನಿರ್ವಿಕಲ್ಪಕ ಸಮಾಧಿಸ್ಥಿತಿಗೆ ಭಕ್ತನು ಏರುತ್ತಾನೆ. ಆಗ ಜ್ಯೋತಿಯು ಜ್ಯೋತಿಯಲ್ಲಿ ಕೂಡಿಹೋದಂತೆ ಧ್ಯಾನಯೋಗಿಯು ತನ್ನನ್ನು ಪರಮಾತ್ಮನಲ್ಲಿ ಏಕೀಭವಿಸಿದಂತೆ ಕಂಡುಕೊಳ್ಳುವನು. ಆ ಸ್ಥಿತಿಯಲ್ಲಿ ಯೋಗಿಗೆ 'ಇದು ದ್ರವ್ಯ, ಇದು ಜ್ಞಾನ, ಇದು ಕ್ರಿಯೆ' ಎಂಬ ಭ್ರಮೆ ಶಾಂತವಾಗುತ್ತದೆ (೧೧-೧೪). ವಿಷ್ಣುಪುರಾಣದ ಷಷ್ಠಾಂಶದ ಏಳನೆಯ ಅಧ್ಯಾಯದಲ್ಲಿಯೂ ಈ ಧ್ಯಾನಯೋಗವು ಸುಂದರವಾಗಿ ನಿರೂಪಿತವಾಗಿದೆ.

ಚತುರ್ವ್ಯೂಹಗಳು

ಪಾಂಚರಾತ್ರಾಗಮದಲ್ಲಿ ವಿಷ್ಣುವಿನ ಚತುರ್ವ್ಯೂಹದ ವಿಚಾರ ಬರುತ್ತದೆ. ವ್ಯೂಹ, ವಿಭವ, ಅರ್ಚಾವತಾರ, ಅಂತರ್ಯಾಮಿ-ಎಂದು ಪರಮಾತ್ಮನಿಗೆ ನಾಲ್ಕು ಅವತಾರಗಳಿವೆ. ಇವುಗಳಲ್ಲಿ ವ್ಯೂಹಾವತಾರವು ವಾಸುದೇವ, ಸಂಕರ್ಷಣ, ಪ್ರದ್ಯುಮ್ನ, ಅನಿರುದ್ಧ-ಎಂದು ನಾಲ್ಕು ಬಗೆಯಾದ್ದರಿಂದ ಚತುರ್ವ್ಯೂಹವೆಂದು ಹೆಸರು ಬಂದಿದೆ. ವ್ಯೂಹವೆಂದರೆ ಮೂರ್ತಿ. ಈ ಮತದಲ್ಲಿ ಸಾತ್ತ್ವಿಕ, ರಾಜಸ, ತಾಮಸ ಗುಣಗಳನ್ನು ಕ್ರಮವಾಗಿ ವೈಕಾರಿಕ, ತೈಜಸ, ಭೂತಾದಿ ಎಂದು ವ್ಯವಹರಿಸುತ್ತಾರೆ. ಇದೇ ಅರ್ಥದಲ್ಲಿ ವೈಕಾರಿಕಾದಿ ಶಬ್ದಗಳು ಭಾಗವತದಲ್ಲಿ ಪ್ರಯುತಕ್ತವಾಗಿವೆ-

> **ವೈಕಾರಿಕಸ್ತೈಜಸಶ್ಚ ತಾಮಸಶ್ಚೇತ್ಯಹಂ ತ್ರಿವೃತ್॥**
>
> **(೧೧-೨೪-೭)**

ಹಾಗೆಯೇ ಚತುರ್ವ್ಯೂಹಗಳ ಪ್ರಸ್ತಾವನೆಯೂ ಉಂಟು-

> **ನಮಸ್ತೇ ವಾಸುದೇವಾಯ ನಮಃ ಸಂಕರ್ಷಣಾಯ ಚ।**
> **ಪ್ರದ್ಯುಮ್ನಾಯಾನಿರುದ್ಧಾಯ ತುಭ್ಯಂ ಭಗವತೇ ನಮಃ॥**
>
> **(೧೧-೫-೨೯)**

ಪಾಂಚರಾತ್ರಾಗದಮದಲ್ಲಿ ಬರುವ ಸಾತ್ತ್ವತ, ಭಾಗವತ ಎಂಬ ಶಬ್ದಗಳನ್ನು ಭಾಗವತವು ವಿಶೇಷವಾಗಿ ಬಳಸಿದೆ. ವಿಷ್ಣುಪುರಾಣ ದಲ್ಲಿಯೂ ಚತುರ್ವ್ಯೂಹವನ್ನು ಮನ್ನಿಸಿ–

ಓಂ ನಮೋ ವಾಸುದೇವಾಯ ನಮಃ ಸಂಕರ್ಷಣಾಯ ಚ।
ಪ್ರದ್ಯುಮ್ನಾಯ ನಮಸ್ತುಭ್ಯಮನಿರುದ್ಧಾಯ ತೇ ನಮಃ

(೫–೧೮–೫೮)

ಎಂದು ಸ್ತುತಿಸಲಾಗಿದೆ. ಆದರೆ ಈ ಎಲ್ಲಾ ಸ್ಥಳಗಳಲ್ಲಿಯೂ ಚತುರ್ವ್ಯೂಹಗಳು ಪರಮಾತ್ಮನ ವಿವಿಧ ರೂಪಗಳನ್ನು ಸೂಚಿಸುತ್ತವೆ. ಈ ಮೂರ್ತಿಗಳಿಗೆ ಅಭೇದವೇ ಹೊರತು ಭೇದವಲ್ಲ.

ಪಾಂಚರಾತ್ರಾಗಮದಲ್ಲಿ ಇನ್ನೂರೈವತ್ತು ಸಂಹಿತೆಗಳಿದ್ದು, ಈಗ ಹದಿಮೂರು ಸಂಹಿತೆಗಳು ಮಾತ್ರ ಉಪಲಬ್ಧವಾಗಿವೆ. ಉಪಲಬ್ಧವಾದ ಲಕ್ಷ್ಮೀತಂತ್ರದಲ್ಲಿ ವಾಸುದೇವನಿಂದ ಸಂಕರ್ಷಣನ (ಜೀವ) ಉತ್ಪತ್ತಿಯಾಗುತ್ತದೆ. ಈ ಸಂಕರ್ಷಣನಿಂದ (ಜೀವ) ಪ್ರದ್ಯುಮ್ನನ (ಮನಸ್ಸು) ಉತ್ಪತ್ತಿಯೂ ಪ್ರದ್ಯುಮ್ನನಿಂದ ಅನಿರುದ್ಧನ (ಅಹಂಕಾರ) ಉತ್ಪತ್ತಿಯೂ ಆಗುತ್ತದೆಯೆಂದು ವರ್ಣಿಸಿದೆ. ಅಹಿರ್ಬುಧ್ನ್ಯ ಸಂಹಿತೆಯಲ್ಲಾದರೋ ಈ ಚತುರ್ವ್ಯೂಹಗಳಿಗೆ ಅಭೇದವರ್ಣನೆ ಇದೆ. ಭಾಗವತ ವಿಷ್ಣುಪುರಾಣಗಳು ಮನ್ನಿಸಿರುವುದು ಈ ಅಭೇದವನ್ನು.

ಶ್ರೀಶಂಕರಾಚಾರ್ಯರು ಶಾರೀರಕಮೀಮಾಂಸೆಯಲ್ಲಿ ಚತುರ್ವ್ಯೂಹಗಳ ಕಲ್ಪನೆಯನ್ನು ಖಂಡಿಸಿದ್ದಾರೆ (ಬ್ರ.ಸೂ. ೨–೨–೪೨ ರಿಂದ ೪೫). ಈ ಖಂಡನೆ ಭೇದಮೂಲಕವಾದ ಚತುರ್ವ್ಯೂಹಕ್ಕೆ ಸಂಬಂಧಿಸುತ್ತದೆಯೇ ಹೊರತು, ಭಾಗವತ–ವಿಷ್ಣುಪುರಾಣಗಳಲ್ಲಿ ಹೇಳಿರುವ ಚತುರ್ವ್ಯೂಹಗಳಿಗಲ್ಲವೆಂಬುದನ್ನು ಸ್ಪಷ್ಟವಾಗಿ ತಿಳಿದಿರಬೇಕು. ಪಾಂಚರಾತ್ರಾಗಮವು ವಿವಿಧ ಪ್ರಕಾರದಲ್ಲಿ ಹರಡಿಹೋಗಿದ್ದು ಅದರ ಪ್ರಮೇಯವು ಏಕರೂಪವಾಗಿಲ್ಲ. ಪರಮಾತ್ಮನಿಂದ ಜೀವನು ಹುಟ್ಟುತ್ತಾನೆ; ಜೀವನಿಂದ ಮನಸ್ಸು ಹುಟ್ಟುತ್ತದೆ; ಮನಸ್ಸಿನಿಂದ ಅಹಂಕಾರ ಹುಟ್ಟುತ್ತದೆ– ಎಂಬ ಈ ಕಲ್ಪನೆಗಳು ನಿರಾಧಾರವಾದ್ದರಿಂದಲೂ ನಾನಾ ದೋಷಗ್ರಸ್ತವಾದ್ದರಿಂದಲೂ ಅವೈದಿಕಗಳೆಂದು ಆಚಾರ್ಯರು ಹೇಳಿದ್ದಾರೆ. ಏವಂ ಚ ಲಕ್ಷ್ಮೀತಂತ್ರವೇ ಮೊದಲಾದ ಕೆಲವು ಸಂಹಿತೆಗಳಲ್ಲಿ ಭೇದಮೂಲಕವಾದ ಚತುರ್ವ್ಯೂಹಮತವು ನಿರೂಪಿತವಾಗಿತ್ತೆಂದು ತಿಳಿಯಬೇಕು. ಅಲ್ಲದೆ ಪಾಂಚರಾತ್ರಾಗಮದ ಕೆಲವು ಶಬ್ದಗಳು ಭಾಗವತದಲ್ಲಿ ಬಂದಿವೆಯೇ ಹೊರತು, ಅದರ ತತ್ತ್ವನಿರ್ಣಯವಾಗಲಿ ಸಾಧನಮಾರ್ಗವಾಗಲಿ ಭಾಗವತದಲ್ಲಿ ನಿರೂಪಿತವಾಗಿಲ್ಲ.

ಭಗವದ್ಗೀತಾ ಪ್ರಸ್ಥಾನವೇ ಭಾಗವತಕ್ಕೆ ಸಂಮತವಾದದ್ದು. ವಸ್ತುತಃ ಚತುರ್ವ್ಯೂಹದ ರಹಸ್ಯಾರ್ಥವು ಭಾಗವತದಲ್ಲಿಯೇ ಸೂಚಿತವಾಗಿದೆ. ಜಾಗ್ರತ್ತಿನಲ್ಲಿ ವಿಶ್ವನೆನಿಸಿದವನೇ ಸಂಕರ್ಷಣ. ಸ್ವಪ್ನದಲ್ಲಿ ತೈಜಸನಾದವನು ಪ್ರದ್ಯುಮ್ನ. ಸುಷುಪ್ತಿಯಲ್ಲಿರುವ ಪ್ರಾಜ್ಞನು ಅನಿರುದ್ಧ. ಈ ಅವಸ್ಥಾತ್ರಯಕ್ಕೆ ಸಾಕ್ಷಿಯಾದವನು ವಾಸುದೇವ (ನೋಡಿ: ೧೨-೧೧-೨೧, ೨೨).

ವಿಷ್ಣು ಸರ್ವೋತ್ತಮ

ಮಾನವನು ತನ್ನ ಶ್ರೇಯಸ್ಸಿಗಾಗಿ ವಿಷ್ಣುವನ್ನು ಸರ್ವ ಭಾವಗಳಿಂದಲೂ ಭಜಿಸಬೇಕು- ಎನ್ನುತ್ತದೆ ಭಾಗವತ. ವಿಷ್ಣುವಿನ ಸರ್ವೋತ್ತಮತ್ವವನ್ನು ಈ ಗ್ರಂಥವು ಪ್ರತಿಪಾದಿಸುತ್ತದೆ ಎಂಬುದು ನಿರ್ವಿವಾದ. ಆದ್ದರಿಂದಲೇ ವೈಷ್ಣವಮಾರ್ಗೀಯರೆಲ್ಲರೂ ತಮ್ಮ ದಾರ್ಶನಿಕ ಭಿನ್ನಾಭಿಪ್ರಾಯಗಳೇನೇ ಇರಲಿ- ಭಾಗವತವನ್ನು ಅತ್ಯಂತ ಗೌರವದಿಂದ ಪ್ರಮಾಣಗ್ರಂಥವೆಂದು ಸ್ವೀಕರಿಸುತ್ತಾರೆ. ಆದರೆ ಉಪಾಸನಾರ್ಥವಾಗಿ ಸತ್ತ್ವಮೂರ್ತಿಯಾದ ವಿಷ್ಣುವನ್ನು ಭಜಿಸುವುದು ಶ್ರೇಯಸ್ಕರವೆಂದು ಇದು ಪ್ರದಿಪಾದಿಸುತ್ತದೆಯೇ ಹೊರತು, ತ್ರಿಮೂರ್ತಿಗಳಲ್ಲಿ ಭೇದಭಾವದಿಂದ ವಿಷ್ಣು ಶ್ರೇಷ್ಠನೆನ್ನುವುದಿಲ್ಲ.

ಸತ್ತ್ವಂ ರಜಸ್ತಮ ಇತಿ ಪ್ರಕೃತೇರ್ಗುಣಾಸ್ತೈ
ರ್ಯುಕ್ತಃ ಪರಃ ಪುರುಷ ಏಕ ಇಹಾಸ್ಯ ಧತ್ತೇ।
ಸ್ಥಿತ್ಯಾದಂಯೇ ಹರಿವಿರಂಚಿಹರೇತಿ ಸಂಜ್ಞಾಃ
ಶ್ರೇಯಾಂಸಿ ತತ್ರ ಖಲು ಸತ್ತ್ವತನೋರ್ನೃಣಾಂ ಸ್ಯುಃ॥
(೧-೩-೨೩)

"ಸತ್ತ್ವ, ರಜಸ್ಸು, ತಮಸ್ಸುಗಳೆಂದು ಪ್ರಕೃತಿಯ ಮೂರು ಗುಣಗಳಿವೆ. ಒಬ್ಬನೇ ಆದ ಪರಮಾತ್ಮನು ಸ್ಥಿತಿ-ಸೃಷ್ಟಿ-ಲಯಗಳನ್ನು ನಡೆಸುವುದಕ್ಕಾಗಿ ಅನುಕ್ರಮವಾಗಿ ಹರಿ- ಬ್ರಹ್ಮ-ಹರ ಎಂಬ ಹೆಸರುಗಳನ್ನು ಧರಿಸುತ್ತಾನೆ. ಇವರಲ್ಲಿ ಸತ್ತ್ವಮೂರ್ತಿಯಾದ ಶ್ರೀಹರಿಯಿಂದ ಜನರಿಗೆ ಶ್ರೇಯಸ್ಸುಗಳು ನಿಶ್ಚಯವಾಗಿ ದೊರಕುತ್ತವೆ."

ಒಬ್ಬನೇ ಪರಮಾತ್ಮನು ಸೃಷ್ಟ್ಯಾದಿ ಕರ್ಮಗಳನ್ನು ನಡೆಸುವುದಕ್ಕಾಗಿ ವಿಭಿನ್ನ ನಾಮರೂಪಗಳನ್ನು ಪಡೆಯುತ್ತಾನೆ. ಈ ಶ್ಲೋಕಗಳನ್ನು ನೋಡಬಹುದು-

(೧) ಆದಾವಭೂತ್ (೧೧-೪-೫)

(೨) ನ ತೇ ಮಯ್ಯಚ್ಯುತೇಽಜೇ ಚ (೧೨-೧೦-೨೨)

(೩) ನಾನು (ವಿಷ್ಣು), ಬ್ರಹ್ಮ, ಶಿವ-ಇವರು ಜಗತ್ತಿಗೆ ಪರಮ ಕಾರಣರಾಗಿದ್ದೇವೆ.

ಗುಣಮಯಿಯಾದ ಮಾಯೆಯನ್ನು ಧರಿಸಿ ಸೃಜಿಸುತ್ತ, ರಕ್ಷಿಸುತ್ತ, ಲಯಗೊಳಿಸುತ್ತ ಕ್ರಿಯಾನುಸಾರವಾಗಿ ಬೇರೆ ಬೇರೆ ಹೆಸರನ್ನು ಧರಿಸಿದ್ದೇನೆ. ಅದ್ವಿತೀಯಬ್ರಹ್ಮವೂ ಕೇವಲನೂ ಆದ ಪರಮಾತ್ಮನಲ್ಲಿ ಬ್ರಹ್ಮರುದ್ರರನ್ನೂ ಪಂಚಭೂತಗಳನ್ನೂ ಅಜ್ಞನಾದವನು ಭಿನ್ನರೆಂದು ಭೇದಬುದ್ಧಿಯಿಂದ ಕಾಣುತ್ತಾನೆ. (೪–೭–೫೦ ರಿಂದ ೫೩)

(೪) ನಮೋ ಜಗತ್‌ಸ್ಥಾನಲಯೋದಯೇಷು

ಗೃಹೀತಮಾಯಾಗುಣವಿಗ್ರಹಾಯ। (೪–೩೦–೨೩)

(೫) ಧತ್ತೇ ಯದಾ ಸ್ವದೃಗ್‌ಭೂಮನ್

ಬ್ರಹ್ಮವಿಷ್ಣು ಶಿವಾಭಿಧಾಮ್‌। (೮–೭–೨೩)

ವಿಷ್ಣುವಿನ ಪರಮಭಕ್ತನಾಗಿದ್ದ ಮಾರ್ಕಂಡೇಯಮುನಿಯು ಸಮಾಹಿತ ಚಿತ್ತನಾಗಿದ್ದಾಗ, ಶಿವನು ಯೋಗಮಾಯೆಯಿಂದ ಮುನಿಯ ಹೃದಯದೊಳಗೆ ಕಾಣಿಸಿಕೊಂಡನು. ಆಗ ಮುನಿಯು ಸಮಾಧಿಯಿಂದ ಎಚ್ಚೆತ್ತು ನೋಡಿದಾಗ, ಬಾಹ್ಯದಲ್ಲಿಯೂ ಶಿವನು ಪ್ರತ್ಯಕ್ಷನಾದನು. ಮಾರ್ಕಂಡೇಯನು ಆಗ ಶಿವನನ್ನು ಹೀಗೆ ಸ್ತುತಿಸುತ್ತಾನೆ–

ನಮಃ ಶಿವಾಯ ಶಾಂತಾಯ ಸತ್ತ್ವಾಯ ಪ್ರಮೃಡಾಯ ಚ।
ರಜೋಜುಷೇಪ್ಯಘೋರಾಯ ನಮಸ್ತುಭ್ಯಂ ತಮೋಜುಷೇ॥

ಈ ಸ್ತೋತ್ರದಲ್ಲಿ ಶಿವನನ್ನು ಸತ್ತ್ವರಜಸ್ತಮಸ್ಸುಗಳೆಂಬ ಗುಣತ್ರಯ ವಿಶಿಷ್ಟನೆಂದು ಹೇಳಿರುವುದು ಗಮನಾರ್ಹ. ಶಿವನು ಆ ಋಷಿಯನ್ನು ಕುರಿತು ಮಾತಾನಾಡಿದಾಗ 'ಬ್ರಹ್ಮ–ವಿಷ್ಣು–ಮಹೇಶ್ವರರೆಂಬ ನಾವು ಮೂವರು ಮೋಕ್ಷವನ್ನು ಕೊಡತಕ್ಕವರು ಎನ್ನುತ್ತಾನೆ. "ನನ್ನಲ್ಲಿ–ಅಚ್ಯುತನಲ್ಲಿ–ಬ್ರಹ್ಮನಲ್ಲಿ ಜ್ಞಾನಿಗಳು ಅಣುಮಾತ್ರಭೇದವನ್ನೂ ಕಾಣುವುದಿಲ್ಲ" ಎಂದು ನುಡಿಯುತ್ತಾನೆ. ಆಮೇಲೆ ಮಾರ್ಕಂಡೇಯನು – 'ಸ್ವಾಮಿ ಮನಸ್ಸಿನಿಂದಲೇ ಈ ವಿಶ್ವವನ್ನು ಸೃಷ್ಟಿಮಾಡಿ, ಅದರೊಳಗೆ ಅನುಪ್ರವೇಶಿಸಿದವನು ನೀನು. ತ್ರಿಗುಣನೂ ಗುಣನಿಯಂತ್ರವೂ ಕೇವಲನೂ, ಅದ್ವಿತೀಯನೂ ಗುರುವೂ ಪರಬ್ರಹ್ಮಮೂರ್ತಿಯೂ ಆದ ನಿನಗೆ ನಮಸ್ಕಾರ ಎಂದು ಸ್ತುತಿಸುತ್ತಾನೆ. (ಭಾಗ ೧೨–೧೦)

ದಕ್ಷಯಜ್ಞದಲ್ಲಿ ಶಿವನಿಗೆ ಆಹ್ವಾನವಿರಲಿಲ್ಲ. ಆದ್ದರಿಂದ ಯಜ್ಞಕ್ಕೆ ಬ್ರಹ್ಮನೂ ವಿಷ್ಣುವೂ ಹೋಗಿರಲಿಲ್ಲ. ಶಿವನಿಂದಕನಾದ ದಕ್ಷನಿಗೂ ಕೇವಲ ವಿಷ್ಣುಭಕ್ತನಾಗಿ ಶಿವನಿಂದಕನಾಗಿದ್ದ ಭೃಗುಮುನಿಗೂ ಪ್ರಮಥಗಣಗಳಿಂದ ದಂಡನೆಯಾಗುತ್ತದೆ. (ಭಾಗ – ೪–೨ ರಿಂದ ೭ ಅಧ್ಯಾಯ)

ಹರಿಹರರಲ್ಲಿ ಭೇದವನ್ನು ಕಲ್ಪಿಸಿ, ಒಬ್ಬರನ್ನೊಬ್ಬರು ನಿಂದಿಸ ತಕ್ಕವರು ಇದರಿಂದ ಏನಾದರೂ ಪಾಠವನ್ನು ಕಲಿತುಕೊಂಡಾರು.

ತ್ರಿಮೂರ್ತಿಗಳು ಸಗುಣರು. ಪರಬ್ರಹ್ಮವು ಇವರಿಗೆ ಮೂಲವಾದ ನಿರ್ಗುಣಸ್ವರೂಪ.

ಭಾಗವತದಲ್ಲಿ ವಿಷ್ಣುವನ್ನು ಸಗುಣನೆಂದೂ ಶಂಖಚಕ್ರಾದಿಗಳನ್ನು ಧರಿಸಿದ ವಿಶಿಷ್ಟಮೂರ್ತಿ ಎಂದೂ ಸ್ತುತಿಸಿದ್ದರೂ ಆತನ ನಿರ್ಗುಣ ಸ್ವರೂಪವನ್ನು ಹಲವಾರು ಕಡೆಗಳಲ್ಲಿ ವರ್ಣಿಸಿದೆ. ಸಗುಣ–ನಿರ್ಗುಣ ಈ ವಿಶೇಷಣಗಳು ಸಂಮಿಶ್ರವಾಗಿ ಬಂದಿದ್ದರೂ ಅವನ್ನು ವಿವಿಕ್ತವಾಗಿ ಬಿಡಿಸಿ ಅನ್ವಯಿಸಿಕೊಳ್ಳಬೇಕಾಗುತ್ತದೆ. ಏಕೆಂದರೆ, ಈ ತ್ರಿಮೂರ್ತಿಗಳ ತಾತ್ತ್ವಿಕ ಸ್ವರೂಪವು ಬೇರೆಯೇ ಆಗಿದೆಯೆಂದು ಭಾಗವತವು ಸ್ಪಷ್ಟವಾಗಿ ನಿರೂಪಿಸಿದೆ.

ಗುಣಮಯ್ಯಾ ಸ್ವಶಕ್ತ್ಯಾಸ್ಯ ಸರ್ಗಸ್ಥಿತ್ಯಪ್ಯಯಾನ್ ವಿಭೋ।
ಧತ್ತೇ ಯದಾ ಸ್ವದೃಗ್‌ಭೂಮನ್ ಬ್ರಹ್ಮವಿಷ್ಣುಶಿವಾಭಿಧಾಮ್ ॥೧॥

ಹೇ ವಿಭುವೆ, ಭೂಮನೆ, ಸ್ವತಃಸಿದ್ಧಜ್ಞಾನನಾದ ನೀನು ಈ ಜಗತ್ತಿನ ಸರ್ಗಪ್ರಳಯಗಳನ್ನು ನಡೆಸುವಾಗ ಗುಣಮಯವಾದ ಸ್ವಶಕ್ತಿಯಿಂದ ಬ್ರಹ್ಮವಿಷ್ಣು ಎಂಬ ಹೆಸರನ್ನು ಧರಿಸುತ್ತೀಯೆ.

ಜ್ಯೋತಿಃ ಪರಂ ಯತ್ರ ರಜಸ್ತಮಶ್ಚ
ಸತ್ತ್ವಂ ನ, ಯದ್ ಬ್ರಹ್ಮ ನಿರಸ್ತಭೇದಮ್ ॥೨॥

ಹೇ ಸ್ವಾಮಿ, ನಿನ್ನ ಪರಂಜ್ಯೋತಿಃ ಸ್ವರೂಪವು ಬ್ರಹ್ಮ ವಿಷ್ಣು, ದೇವೇಂದ್ರರಿಗೂ ಗಮ್ಯವಲ್ಲ. ಅದು ನಿರಸ್ತ ಭೇದವಾಗಿದೆ. ಅದರಲ್ಲಿ ರಜಸ್ತಮೋಗುಣಗಳಾಗಲಿ, ಸತ್ತ್ವಗುಣವಾಗಲಿ ಇಲ್ಲ. (ಇದು ಶಿವಸ್ತುತಿ, ಸ್ಕಂಧ ೮, ಅಧ್ಯಾಯ ೭, ಶ್ಲೋಕ ೨೩ ರಿಂದ ೧೫ ಶ್ಲೋಕಗಳು ಪರಬ್ರಹ್ಮಸ್ವರೂಪವನ್ನು ವರ್ಣಿಸುತ್ತವೆ.)

ಅನುಪ್ರವೇಶ

'ತತ್ ಸೃಷ್ಟ್ವಾ ತದೇವಾನುಪ್ರಾವಿಶತ್, ಅನೇನ ಜೀವೇನಾತ್ಮನಾನು ಪ್ರವಿಶ್ಯ ನಾಮರೂಪೇ ವ್ಯಾಕರವಾಣಿ' ಎಂಬುದಾಗಿ ಉಪನಿಷತ್ತುಗಳಲ್ಲಿ ಪರಮಾತ್ಮನ ದೇಹಾನುಪ್ರವೇಶವನ್ನು ಹೇಳಿದೆ. ದೇಹವನ್ನು ಸೃಷ್ಟಿಮಾಡಿ ಪರಮಾತ್ಮನು ಜೀವರೂಪದಿಂದ ಅನುಪ್ರವೇಶ ಮಾಡಿದನೆಂದು ಅಭೇದವಾದಿಗಳು ಅರ್ಥ ಹೇಳುತ್ತಾರೆ. ಶ್ರುತಿಯಲ್ಲಿ 'ಅನೇನ ಜೀವೇನಾತ್ಮನಾ' ಎಂದು ಅಭೇದವಚನವಿದೆ. ಭೇದವಾದಿಗಳಾದರೋ 'ಸಹ' ಎಂಬ ಪದವನ್ನು ಅಧ್ಯಾಹಾರಮಾಡಿಕೊಂಡು ಜೀವೇನ ಸಹ–ಜೀವನೊಡನೆ ಎಂದು ಅರ್ಥ ಹೇಳುತ್ತಾರೆ. ಈ ಅನುಪ್ರವೇಶದ ವಿಷಯವು ಭಾಗವತದಲ್ಲಿ ಬಂದಿದೆ–

ಸ್ವಮಾಯಯಾ ಸೃಷ್ಟಮಿದಂ ಸದಸಲ್ಲಕ್ಷಣಂ ವಿಭುಃ।
ಪ್ರವಿಷ್ಟ ಈಯತೇ ತತ್ತತ್‌ಸ್ವರೂಪೋಽಗ್ನಿರಿವೈಧಸಿ ॥೧॥
(೧೧-೭-೪೭)

ಪರಮಾತ್ಮನು ತನ್ನ ಮಾಯೆಯಿಂದ ಸೃಷ್ಟಿಸಿರುವ ಸದಸದ್ರೂಪವಾದ ಎಂದರೆ ದೇವತಿರ್ಯಗಾದಿ ಶರೀರವನ್ನು ಪ್ರವೇಶಿಸಿ, ಸೌದೆಯಲ್ಲಿ ಸೇರಿದ ಅಗ್ನಿಯಂತೆ, ಶರೀರದ ಆಯಾ ರೂಪವನ್ನು ಧರಿಸಿದ ಹಾಗೆ ಕಂಡುಬರುತ್ತಾನೆ.

ಸೃಷ್ಟ್ವೇದಂ ಮನಸಾ ವಿಶ್ವಮಾತ್ಮನಾನುಪ್ರವಿಶ್ಯ ಯಃ।
ಗುಣೈಃ ಕುರ್ವದ್ಭಿರಾಭಾತಿ ಕರ್ತೇವ ಸ್ವಪ್ನದೃಗ್ಯಥಾ ॥೨॥
(೧೨-೧೦-೩೧)

ಮನಸ್ಸಿನಿಂದ ಈ ವಿಶ್ವವನ್ನು ಸೃಷ್ಟಿಮಾಡಿ, ತಾನು ಅದರೊಳಗೆ ಅನುಪ್ರವೇಶಿಸಿ, ಕರ್ತವ್ಯಗಳಾದ ಸತ್ತ್ವಾದಿಗುಣಗಳ ಮೂಲಕ, ಕನಸು ಕಾಣುವವನ ಹಾಗೆ, ತಾನೇ ಕರ್ತೃವೋ ಎಂಬಂತೆ ತೋರಿಸಿಕೊಳ್ಳ ತಕ್ಕವನು ನೀನು.

ಇಲ್ಲಿ ವಿಶ್ವದ ಸೃಷ್ಟಿ 'ಮನಸ್ಸಿನಿಂದ' ಎಂದಿದೆ. ಮಾನಸಸೃಷ್ಟಿ ಐಂದ್ರಜಾಲಿಕವೋ ಸತ್ಯವೋ ಎಂಬುದು ವಿಚಾರರ್ಹವಾದದ್ದು. ಸೃಷ್ಟಿ ಸ್ಥಿತಿ ಸಂಹಾರಗಳನ್ನು ಪರಮಾತ್ಮನು ಮಾಯೆಯಿಂದ ನಡೆಸುತ್ತಾನೆಂದು ಭಾಗವತದ ಹಲವಾರು ಸ್ಥಳಗಳಲ್ಲಿ ವರ್ಣನೆ ಇದೆ. ಇಂತಹ ಸಂದರ್ಭದಲ್ಲಿ ಮಾಯೆಯೆಂಬ ಶಬ್ದ ಈ ಗ್ರಂಥದಲ್ಲಿ ನೂರಾರು ಸಲ ಬಂದಿದೆ. ಮಾಯೆಯಿಂದಾದ ಮಾನಸಸೃಷ್ಟಿಯ ಸ್ವರೂಪವೇನು? ಪ್ರತಿಯೊಂದು ಕಾರ್ಯವೂ ಬುದ್ಧಿಪೂರ್ವಕವಾಗಿ ನಡೆಯುವುದರಿಂದ ಮನಸ್ಸಿನ ಸಹಕಾರವು ಸರ್ವತ್ರ ಇದ್ದೇ ಇರುತ್ತದೆ. ಆದ್ದರಿಂದ 'ಮನಸಾ' ಎಂದು ಮತ್ತೆ ಹೇಳಬೇಕಾದ್ದಿಲ್ಲ. ಗುಣಗಳು ಕರ್ತೃಗಳೆಂದೂ ಅನುಪ್ರವೇಶಿಸಿದವನು ಕರ್ತೃವಿನಂತೆ ತೋರುತ್ತಾನೆಂದೂ ಹೇಳಿದೆ ಮತ್ತು ಆತನು ಕನಸುಕಾಣುವವನಂತೆ ಇದ್ದಾನೆಂದೂ ವರ್ಣನೆ ಇದೆ. ಮನಸ್ಸಿನಿಂದ ಸೃಷ್ಟಿಸಿ, ಅನುಪ್ರವೇಶಿಸಿ, ಕರ್ತೃವೋ ಎಂಬಂತೆ ಕನಸು ಕಾಣತಕ್ಕವನು ಯಾರು?

ವೇದಾಂತ ದರ್ಶನದಲ್ಲಿ ದ್ವೈತ, ವಿಶಿಷ್ಟಾದ್ವೈತ, ಅದ್ವೈತ-ಎಂಬ ಮೂರು ಸಂಪ್ರದಾಯಗಳು ಪ್ರಸಿದ್ಧವಾದವು. ನಾವು ಇವುಗಳಲ್ಲೊಂದು ಸಂಪ್ರದಾಯದ ಚೌಕಟ್ಟಿನೊಳಗೆ ನಮ್ಮನ್ನು ಗಟ್ಟಿಯಾಗಿ ಕಟ್ಟಿಹಾಕಿಕೊಂಡಿರುತ್ತೇವೆ. ಉಪನಿಷತ್ತು, ಭಗವದ್ಗೀತೆ, ಬ್ರಹ್ಮಸೂತ್ರ, ಶ್ರೀಮದ್ಭಾಗವತ ಇವುಗಳಲ್ಲಿ ನಮ್ಮ ಸಂಪ್ರದಾಯಕ್ಕೆ ಅನುಗುಣವಾದ ಅಂಶಗಳನ್ನೇ ಹುಡುಕುತ್ತೇವೆ. ಅಲ್ಲಿರುವ ಶಬ್ದಗಳನ್ನು ಯಥೇಚ್ಛವಾಗಿ ಎಳೆದು, ನಮ್ಮ ಸಿದ್ಧಾಂತವೇ ಅಲ್ಲಿದೆಯೆಂಬ ಆಗ್ರಹಕ್ಕೆ ಒಳಗಾಗುತ್ತೇವೆ. ಇದೇ ಆಗ್ರಹವನ್ನು ಸಾಂಖ್ಯ,

ವೈಶೇಷಿಕಾದಿ ದರ್ಶನಗಳಲ್ಲಿ ನಾವು ತೋರಿಸುವುದಿಲ್ಲ. ನಮಗೆ ಅಭಿನಿವೇಶವಿಲ್ಲದ ತಟಸ್ಥದರ್ಶನಗಳು ಅವು ತಟಸ್ಥ ದೃಷ್ಟಿಯಿಂದಲೇ ಆ ಗ್ರಂಥಗಳ ಪ್ರಮೇಯವನ್ನು ಗುರುತಿಸುತ್ತೇವೆ. ವೇದಾಂತದರ್ಶನಕ್ಕೆ ಬಂದೊಡನೆ ನಮ್ಮ ತಟಸ್ಥದೃಷ್ಟಿ ಹಾರಿ ಹೋಗುತ್ತದೆ! ಸ್ವತ್ವವೆಂಬ ಅಭಿಮಾನ ಎದ್ದುನಿಂತಾಗ, ಲೌಕಿಕವ್ಯವಹಾರದಲ್ಲಿ ಹೇಗೋ ಹಾಗೆ, ಸತ್ಯದೃಷ್ಟಿಗೆ ವ್ಯಾಮೋಹ ಮುಸುಕಿಕೊಳ್ಳುತ್ತದೆ.

ಶ್ರೀಮದ್ಭಾಗವತವು ಸಕಲವೇದಾಂತಸಾರವೆಂದು ಅದೇ ಗ್ರಂಥವು ಹೇಳುತ್ತದೆ. ಉಪನಿಷತ್ತುಗಳ ಸಾರವೇ ಭಾಗವತದಲ್ಲಿದೆಯೆಂಬುದು ಸರ್ವಸಮ್ಮತ. ಪುರಾಣಗಳು ವೇದಾರ್ಥದ ಉಪಬೃಂಹಣಕ್ಕಾಗಿ ಹೊರಟಿವೆ. ಉಪಬೃಂಹಣವೆಂದರೆ ಅರ್ಥವಿವರಣೆಯೇ ಸರಿಯಷ್ಟೆ. ವೇದವಾಕ್ಯಗಳನ್ನು ಶಬ್ದಶಃ ಅಲ್ಲಲ್ಲಿ ನಿರೂಪಿಸಿರುವುದನ್ನು ನಾವು ಭಾಗವತ ಪುರಾಣದಲ್ಲಿ ಕಾಣಬಹುದು. ಒಂದು ಸಲವಲ್ಲ, ಎರಡು ಸಲವಲ್ಲ, ಇಪ್ಪತ್ತು ಸಲ ಒಂದೇ ವಿಷಯವನ್ನು ಭಾಗವತವು ಮತ್ತೆ ಮತ್ತೆ ನಿರೂಪಿಸಿದೆ. ವಿಷಯವು ಕಠಿಣವಾದ್ದರಿಂದ ಪುನಃ ಪುನಃ ಅದನ್ನೇ ಪ್ರಕರಣವಿಶೇಷದಲ್ಲಿ ಹೇಳಿ ಮನನಮಾಡಿಸುವುದೇ ಗ್ರಂಥದ ಉದ್ದೇಶವಾಗಿರುತ್ತದೆ. ವ್ಯಾಖ್ಯಾನಕಾರರು ತಮ್ಮ ತಮ್ಮ ಪ್ರಕ್ರಿಯೆಗಳಿಗೆ ಅನುಗುಣವಾಗಿ ತಾತ್ತ್ವಿಕ ವಿಷಯವನ್ನು ವಿವರಿಸುತ್ತಾರೆ. ಅವರಿಗೂ ಸಂಪ್ರದಾಯದ ಬಿಗಿಕಟ್ಟಿನಿಂದ ಬಿಡಿಸಿಕೊಳ್ಳಲು ಸಾಧ್ಯವಾಗಿಲ್ಲ. ತಟಸ್ಥ ದೃಷ್ಟಿಯನ್ನು ನಾವು ಬೆಳೆಸಿಕೊಂಡಿಲ್ಲ. ಯಾವ ಪೂರ್ವಗ್ರಹವನ್ನೂ ಇಟ್ಟುಕೊಳ್ಳದೆ, ಗ್ರಂಥವು ಏನು ಹೇಳುತ್ತದೆಯೆಂಬುದನ್ನು ನಾವು ನೋಡುವುದಿಲ್ಲ. ನಮ್ಮ ಅಭಿಪ್ರಾಯವನ್ನೇ ಗ್ರಂಥದೊಳಗೆ ತುರುಕಲು ಪ್ರಯತ್ನಿಸುತ್ತೇವೆ. ಗ್ರಂಥದಲ್ಲಿರುವ ವಾಕ್ಯಗಳನ್ನು ಎಳೆದಾಡಿ ನಮ್ಮ ಅಭಿಪ್ರಾಯಕ್ಕೆ ತಿರುಗಿಸಲು ಹೆಣಗುತ್ತೇವೆ.

ಒಂದು ಗ್ರಂಥದ ತಾತ್ಪರ್ಯನಿರ್ಣಯಕ್ಕೆ ಉಪಕ್ರಮವೇ ಮೊದಲಾದ ಲಿಂಗಗಳನ್ನು ಶಾಸ್ತ್ರಕಾರರು ಹೇಳಿದ್ದಾರೆ. ಅವೆಲ್ಲವನ್ನೂ ಇಲ್ಲಿ ನಿರೂಪಿಸುವುದು ಗ್ರಂಥದ ವಿಸ್ತರಕ್ಕೆ ದಾರಿಯಾದೀತೆಂದು 'ಅಭ್ಯಾಸ'ವನ್ನು ಮಾತ್ರ ಇಲ್ಲಿ ತೋರಿಸಲಾಗುತ್ತದೆ. ಅಭ್ಯಾಸವೆಂದರೆ ಹೇಳಿದ ವಿಷಯವನ್ನೇ ಸಂದರ್ಭಾನುಸಾರವಾಗಿ ಮತ್ತೆ ಮತ್ತೆ ಹೇಳುವುದು. ಮುಂದೆ ಉದಾಹರಿಸುವ ವಾಕ್ಯಗಳಿಂದ ಯಾವ ಸಿದ್ಧಾಂತದ ಕಡೆಗೆ ಭಾಗವತವು ಕೈತೋರಿಸುತ್ತದೆಯೆಂಬುದನ್ನು ತತ್ತ್ವಜಿಜ್ಞಾಸುಗಳು ವಿಚಾರ ಮಾಡಲಿ ಪರಬ್ರಹ್ಮವು ಅದ್ವಿತೀಯವಾದದ್ದು. ಅದನ್ನು ಬಿಟ್ಟು ಇನ್ನೊಂದು ವಸ್ತುವಿಲ್ಲ.

(೧) ಮನಸ್ಸಿನಿಂದಾಗಲಿ ವಾಕ್ಕಿನಿಂದಾಗಲಿ ದೃಷ್ಟಿಯಿಂದಾಗಲಿ ಅಥವಾ ಇತರ

ಇಂದ್ರಿಯಗಳಿಂದಾಗಲಿ ಯಾವ ಯಾವುದು ಗ್ರಹಿಸಲ್ಪಡುತ್ತದೆಯೋ ಅದೆಲ್ಲವೂ 'ನಾನೇ, ನನಗಿಂತ ಇನ್ನೊಂದಿಲ್ಲ' ಎಂಬುದಾಗಿ ತತ್ತ್ವವಿಚಾರದಿಂದ ತಿಳಿದುಕೊಳ್ಳಿರಿ. (೧೧-೧೩-೨೪)

(೨) ಕಾರ್ಯವೆನಿಸತಕ್ಕ ಈ ಜಗತ್ತಿಗೆ ಪ್ರಕೃತಿಯು ಉಪಾದಾನಕಾರಣ. ಪುರುಷನು ಪ್ರಕೃತಿಗೆ ಅಧಿಷ್ಠಾತೃವಾದ ಆಧಾರ. ಪ್ರಕೃತಿಯನ್ನು ಕ್ಷೋಭಿಸತಕ್ಕದ್ದು ಕಾಲ. ಪ್ರಕೃತಿ, ಪುರುಷ, ಕಾಲ-ಈ ಮೂರು ಸಹ ಪರಬ್ರಹ್ಮವಾದ ನಾನೇ ಆಗಿದ್ದೇನೆ. (೧೧-೨೪-೧೯)

(೩) ಸತ್ಯವಸ್ತುವಿಗೆ ನಾನಾತ್ವವಿಲ್ಲ. ನಾನಾತ್ವವಿದೆಯೆಂದು ಯಾವನಾದರೂ ಭಾವಿಸಿದರೆ ಅವನು ಅಜ್ಞಾನಿ. ತೋರತಕ್ಕ ನಾನಾತ್ವವಾದರೋ ಘಟಾಕಾಶಕ್ಕೂ ಮಹಾಕಾಶಕ್ಕೂ ಇರುವಂತೆ, ಜಲಸ್ಥಸೂರ್ಯನಿಗೂ ಆಕಾಶಸ್ಥಸೂರ್ಯನಿಗೂ ಇರುವಂತೆ, ಶರೀರಸ್ಥ ವಾಯುವಿಗೂ ಬಾಹ್ಯವಾಯುವಿಗೂ ಇರುವಂತೆ ಉಪಾಧಿಕೃತವಾದದ್ದು. (೧೨-೪-೩೦)

(೪) ಕಾಲ, ದೇಶ, ಕ್ರಿಯಾ, ಕರ್ತೃ, ಕರಣ, ಕಾರ್ಯ, ಆಗಮ, ದ್ರವ್ಯ, ಫಲ-ಎಂಬುದಾಗಿ ಶ್ರೀಹರಿಯು ಮಾಯೆಯಿಂದ ಒಂಭತ್ತು ಪ್ರಕಾರವಾಗಿದ್ದಾನೆ. (೧೨-೧೧-೩೧)

(೫) ನಾನ್ಯದ್ ಭಗವತಃ ಕಿಂಚಿದ್ ಭಾವ್ಯಂ ಸದಸದಾತ್ಮಕಮ್ (೨-೬-೩೨). ಭಗವಂತನಿಗಿಂತ ಅತಿರಿಕ್ತವಾಗಿ ಸದಸದ್ರೂಪವಾದ ಯಾವ ವಸ್ತುವೂ ಇಲ್ಲ.

ಇನ್ನೂ ನೋಡಿ: ೨-೬-೧೫, ೨-೬-೪೧, ೨-೭-೩೯, ೨-೫-೧೪, ೬-೪-೪೭, ೬-೧೬-೫೧, ೮ ೩-೩, ೧೧-೧೩-೩೧, ೧೧-೨೮-೬, ೧೧-೨೮-೧೯, ೧೨-೧೧-೩೧ ಇತ್ಯಾದಿ.

ಪರಮಾತ್ಮನು ನಿರ್ಗುಣ, ನಿರ್ವಿಶೇಷ, ಜ್ಞಾನಘನ, ಮಾಯೆಯಿಂದ ಸಗುಣನಾಗಿಯೂ ತೋರುತ್ತಾನೆ.

(೧) ಸತ್ತ್ವ, ರಜಸ್ಸು, ತಮಸ್ಸು-ಇವು ಪ್ರಕೃತಿಯಾದ ಬುದ್ಧಿಯ ಗುಣಗಳೇ ಹೊರತು ಆತ್ಮನ ಗುಣಗಳಲ್ಲ (೧೧-೧೩-೧)

(೨) ನ ವಿದ್ಯತೇ ಯಸ್ಯ ಚ ಜನ್ಮ ಕರ್ಮ ವಾ
ನ ನಾಮರೂಪೇ ಗುಣದೋಷ ಏವ ವಾ (೮-೩-೮)

ಯಾವ ಪರಮಾತ್ಮನಿಗೆ ಜನ್ಮಕರ್ಮಗಳಾಗಲಿ ನಾಮರೂಪಗಳಾಗಲಿ ಇಲ್ಲವೋ ಯಾರಲ್ಲಿ ಗುಣವಾಗಲಿ ದೋಷವಾಗಲಿ ಇಲ್ಲವೋ ಆತನು ಜಗತ್ತಿನ ಸೃಷ್ಟಿ ಸ್ಥಿತಿ ಲಯಗಳಲ್ಲಿ ತನ್ನ ಮಾಯೆಯಿಂದ ನಾಮರೂಪಾದಿಗಳನ್ನು ಧರಿಸುತ್ತಾನೆ.

(೩) ನಿಷೇಧಶೇಷೋಜಯತಾದಶೇಷಃ (೮–೩–೨೪)

ವಸ್ತು ಗುಣಾದಿಗಳೆಲ್ಲವನ್ನೂ ಇದಲ್ಲ ಇದಲ್ಲ–ಎಂದು ನಿಷೇಧಮಾಡುತ್ತ ಹೋದಾಗ ಉಳಿಯುವ ಸರ್ವಸ್ವರೂಪವಾದ ಬ್ರಹ್ಮವು ಜಯಿಸಲಿ!

(೪) ನಿರ್ವಿಶೇಷಾಯ ಸಾಮ್ಯಾಯ ನಮೋ ಜ್ಞಾನಘನಾಯ ಚ

(೮–೩–೧೨)

ನಿರ್ವಿಶೇಷವೂ ಸಾಮ್ಯವೂ ಜ್ಞಾನಘನವೂ ಆದ (ಶಾಂತ–ಘೋರ–ಮೂಢನಾದ) ಪುರುಷನಿಗೆ ನಮಸ್ಕಾರ.

(೫) ನಿರ್ಗುಣನೂ ನಿರಪೇಕ್ಷನೂ ಆದ ನನ್ನನ್ನು ಎಲ್ಲ ಗುಣಗಳೂ ಆಶ್ರಯಿಸುವುದುಂಟು! (೧೧–೧೩–೪೦)

ಇನ್ನೂ ನೋಡಿ: ೧೧–೨೯–೨೦, ೧–೨–೩೧, ೪–೨೦–೭, ೪–೨೧–೩೪, ೮–೬–೧೧ ಇತ್ಯಾದಿ.

ಸೃಷ್ಟಿಯು ಮಾಯಾಕಲ್ಪಿತವಾದ ಮನೋವಿಲಾಸ; ಜಗತ್ತು ಸತ್ಯವಲ್ಲ, ಮಿಥ್ಯೆ.

(೧) ಆತ್ಮನಲ್ಲಿ ಕಾಣಿಸಿಕೊಳ್ಳತಕ್ಕ ಈ ಜಗತ್ತೆಲ್ಲವೂ ಮಾಯೆಯೆಂದು ಯುಕ್ತಿಯಿಂದ ನಿಶ್ಚಯಿಸಿ ಇದನ್ನು ತ್ಯಜಿಸಿ ಸ್ವಸ್ಥನಾಗಿರಬೇಕು. ಇದನ್ನು ಸ್ಮರಿಸಿಕೊಳ್ಳಲೂ ಕೂಡದು. (೧೧–೧೯–೨೭)

(೨) ಪಂಚಭೂತವಿಕಾರಗಳಿಂದ ನಿರ್ಮಿತವಾದ ಈ ರಾಜಸ ಸೃಷ್ಟಿಯು ವಸ್ತುತಃ ಇಲ್ಲದಿದ್ದರೂ ಕಾಣಿಸಿಕೊಳ್ಳುತ್ತದೆ. (೧೧–೨೮–೨೨)

(೩) ಸಾಮಾನ್ಯ ವಿಶೇಷಭಾವಗಳಿಂದ ತೋರಿಸಿಕೊಳ್ಳತಕ್ಕದ್ದು ಭ್ರಮೆಯೇ ಸರಿ. (೧೨–೪–೨೮)

(೪) ಎಲ್ಲ ಬಗೆಯ ನನ್ನ ವಿಭೂತಿ ಪ್ರಕಾರಗಳನ್ನೂ ನಿನಗೆ ಸಂಕ್ಷೇಪವಾಗಿ ತಿಳಿಸಿದ್ದೇನೆ. ಇವೆಲ್ಲವೂ ಕಲ್ಪಿತವಾದ ಭಾವನಾ ವಿಶೇಷಗಳು, ಪರಮಾರ್ಥವಲ್ಲ (ಗಗನ ಪುಷ್ಪದಂತೆ) ವಾಙ್ಮಾತ್ರದಿಂದ ಹೇಳಬಹುದಾದವುಗಳು. (೧೧–೧೬–೪೧)

(೫) ಅವಿದ್ಯಯಾ ಮನಸಾ ಕಲ್ಪಿತಾಸ್ತೇ
ಯೇಷಾಂ ಸಮೂಹೇನ ಕೃತೋ ವಿಶೇಷಃ (೫–೧೨–೯)

ಯಾವ ಪರಮಾಣುಗಳ ಸಮೂಹದಿಂದ ಭೂಮಿ ಮುಂತಾದ ವಿಶೇಷಗಳಾಗುತ್ತವೆಯೋ ಆ ಪರಮಾಣುಗಳು ಅವಿದ್ಯೆಯಿಂದ ಮನಃಕಲ್ಪಿತವಾದವು.

ಆತ್ಮನಲ್ಲಿ ಮಾಯಾರಚಿತವಾದ ವಿಶ್ವವು 'ಅವಿದ್ಯಾರಚಿತ ಸ್ವಪ್ನಗಂಧರ್ವನಗರೋಪಮ' (೪-೧೨-೧೫) ಎಂದು ಸ್ಫುಟವಾದ ಹೇಳಿಕೆ ಇದೆ.

ಇನ್ನೂ ನೋಡಿ: ೧೧-೧೩-೩೪, ೭-೧೫-೫೮, ೪-೨೯-೩೫, ೧೧-೧೯-೧, ೧೧-೨೨-೫೪ ಇತ್ಯಾದಿ.

ಜೀವೋ ಬ್ರಹ್ಮೈವ ನಾಪರಃ

(೧) ಈಶ್ವರನೂ ಜೀವನೂ ಗುಣವೂ ಗುಣಿಯೂ (ಕ್ಷೇತ್ರಜ್ಞನಾದ) ಸರ್ವಾತ್ಮನೂ (ಕ್ಷೇತ್ರವಾದ) ಸರ್ವವೂ ನಾನೇ ಆಗಿದ್ದೇನೆ. ನನ್ನನ್ನು ಬಿಟ್ಟು ಇನ್ನೊಂದು ಪದಾರ್ಥವು ಎಲ್ಲಿಯೂ ಇಲ್ಲ. (೧೧-೧೬-೩೮)

(೨) ಮುನಿಯಾದವನು ತನ್ನನ್ನು ನನ್ನೊಡನೇ ಅಭೇದ ದೃಷ್ಟಿಯಿಂದ ಒಬ್ಬನೇ ಧ್ಯಾನಿಸುತ್ತಿರಬೇಕು. (೧೧-೧೮-೨೧)

(೩) ಪರೀಕ್ಷಿತರಾಜ, 'ನಾನು ಪರಂಧಾಮವಾದ ಬ್ರಹ್ಮವೇ ಆಗಿದ್ದೇನೆ. ಪರಮಪದವಾದ ಬ್ರಹ್ಮವು ನಾನೇ ಆಗಿದ್ದೇನೆ' ಎಂದು ಸಮೀಕ್ಷಿಸುತ್ತ ನಿರುಪಾಧಿಕವಾದ ನಿಷ್ಕಲಬ್ರಹ್ಮದಲ್ಲಿ ಚಿತ್ತವನ್ನು ನಿಲ್ಲಿಸು. (೧೨-೫-೧೧)

(೪) ಆತ್ಮನಶ್ಚ ಪರಸ್ಯಾಪಿ ಯಃ ಕರೋತ್ಯಂತರೋದರಮ್।
ತಸ್ಯ ಭಿನ್ನದೃಶೋ ಮೃತ್ಯುರ್ವಿದಧೇ ಭಯಮುಲ್ಬಣಮ್॥
(೩-೨೯-೨೬)

ತನಗೂ ಪರಮಾತ್ಮನಿಗೂ ನಡುವೆ ಅತ್ಯಲ್ಪಭೇದವಿದೆಯೆಂದು ಸಹ ಯಾವನು ಎಣಿಸುತ್ತಾನೋ ಅಂತಹ ಭೇದದೃಷ್ಟಿಯುಳ್ಳವನಿಗೆ ಮೃತ್ಯುವು ಉಗ್ರವಾದ ಭಯವನ್ನುಂಟುಮಾಡುತ್ತದೆ.

(೫) ಅಹಂ ಭವಾನ್ ನ ಚಾನ್ಯಸ್ತ್ವಂ ತ್ವಮೇವಾಹಂ ವಿಚಕ್ಷ್ವಭೋಃ।
ನ ನಃ ಪಶ್ಯಂತಿ ಕವಯಶ್ಛಿದ್ರಂ ಜಾತು ಮನಾಗಪಿ॥
(೪-೨೮-೬೨)

ನಾನೇ ನೀನು, ನೀನು ಬೇರೆಯಲ್ಲ, ನೀನೇ ನಾನಾಗಿದ್ದೇ ನೆಂಬುದನ್ನು ನೋಡು! ಜ್ಞಾನಿಗಳು ನಮ್ಮಿಬ್ಬರಲ್ಲಿ ಅತ್ಯಲ್ಪಭೇದವನ್ನೂ ಎಂದೂ ಕಾಣುತ್ತಿಲ್ಲ.

ಇನ್ನು ನೋಡಿ: ೧-೫-೨೭, ೧೧-೩-೪, ೫, ೬, ೧೧-೩-೩೭, ೧೧-

೧೨-೧೭, ೩-೨೯-೩೪, ೩-೩೩-೨೬, ೪-೨೮-೪೨, ೪-೩೧-೧೮, ೮೩-೩-೧೩ ಇತ್ಯಾದಿ.

ಮೋಕ್ಷಸ್ವರೂಪ

(೧) ಗಡಿಗೆಯನ್ನೊಡೆದಾಗ ಗಡಿಗೆಯೊಳಗಿನ ಆಕಾಶವು ಮೊದಲಿನಂತೆ ಹೇಗೆ ಮಹಾಕಾಶವೇ ಆಗಿಬಿಡುತ್ತದೆಯೋ ಹಾಗೆ (ಆತ್ಮಜ್ಞಾನದಿಂದ) ದೇಹವು ನಷ್ಟವಾದಾಗ ಜೀವವು ಮತ್ತೆ ಬ್ರಹ್ಮವೇ ಆಗಿಬಿಡುತ್ತದೆ. (೧೨-೫-೫)

(೨) ಅನಂತರ ಪರೀಕ್ಷಿತರಾಜನು ಮಹಾಯೋಗಿಯೂ ನಿಃಸಂಗನೂ ಛಿನ್ನಸಂಶಯನೂ ಆಗಿ ಸ್ವಯಂ ಬ್ರಹ್ಮಭೂತನಾದನು. (೧೨-೬-೧೦)

(೩) ಪೇಶಸ್ಕಾರಿಯೆಂಬ ಭ್ರಮರವು ಕೀಟವನ್ನು ಗೋಡೆಯ ಗೂಡಿನಲ್ಲಿ ತಂದಿಡುತ್ತದೆ. ಆ ಕೀಟವು ಭ್ರಮರವನ್ನೇ ನೆನೆಸುತ್ತ, ಪೂರ್ವರೂಪವನ್ನು ಬಿಡದೆಯೇ, ಭ್ರಮರಸ್ವರೂಪವನ್ನು ಪಡೆದುಬಿಡುತ್ತದೆ. (ಹಾಗೆ ನನ್ನನ್ನು ಧ್ಯಾನಿಸುವ ಭಕ್ತನು ನನ್ನ ಸ್ವರೂಪವನ್ನೈದುತ್ತಾನೆ) ೧೧-೯-೨೩)

(೪) ಅವಿದ್ಯೆಯಿಂದ ಬಂಧ. ವಿದ್ಯೆಯಿಂದ ಮೋಕ್ಷ. ಸಂಸಾರವು ವಸ್ತುತಃ ಇಲ್ಲ. ಬದ್ಧ, ಮುಕ್ತ-ಎಂಬ ವ್ಯವಹಾರವು ನನ್ನ ಮಾಯೆಯಿಂದ ತೋರುತ್ತದೆ. ಸಂಸಾರವು ಸ್ವಪ್ನವಿದ್ದಂತೆ. (೧೧-೧೧-೧ ರಿಂದ ೪)

ಸತ್ಯಂ ಜ್ಞಾನಮನಂತಂ ಬ್ರಹ್ಮ; ಆನಂದೋ ಬ್ರಹ್ಮ

(೧) ಕೇವಲಾನುಭವಾನಂದಸಂದೋಹೋ ನಿರುಪಾಧಿಕಃ (೧೧-೯-೧೮)

(೨) ವಿಜ್ಞಾನಮೇತತ್‌ತ್ರಿಯವಸ್ಥಮಂಗ. (೧೧-೨೮-೨೦)

(೩) ವಿಶುದ್ಧಂ ಕೇವಲಂ ಜ್ಞಾನಂ ಪ್ರತ್ಯಕ್ ಸಮ್ಯಗವಸ್ಥಿತಮ್।
ಸತ್ಯಂ ಪೂರ್ಣಮನಾದ್ಯಂತಂ ನಿರ್ಗುಣಂ ನಿತ್ಯಮದ್ವಯಮ್॥
(೨-೬-೨೬)

(೪) ಜ್ಞಾನಮಾತ್ರಂ ಪರಂಬ್ರಹ್ಮ ಪರಮಾತ್ಮೇಶ್ವರಃ ಪುಮಾನ್
(೩-೩೨-೨೬)

(೫) ಯತ್ತದ್ ವಿಶುದ್ಧಾನುಭವಮಾತ್ರಮೇಕಮ್ (೫-೧೯-೪)

ದ್ವೈತನಿಂದೆ

(೧) ದ್ವೈತೇ ಧ್ರುವಾರ್ಥವಿಶ್ರಂಭಂ ತ್ಯಜೋಪಶಮಮಾವಿಶ।
(೬-೧೫-೨೬)

(೨) ಕಿಂ ಭದ್ರಂ ಕಿಮಭದ್ರಂ ವಾ ದ್ವೈತಸ್ಯಾವಸ್ತುನಃ ಕಿಯತ್।
(೧೧-೨೮-೪)

ಅದ್ವೈತಪ್ರಶಂಸೆ

(೧) ಭಾವಾದ್ವೈತಂ ಕ್ರಿಯಾದ್ವೈತಂ ದ್ರವ್ಯಾದ್ವೈತಂ ತಥಾತ್ಮನಃ।
ವರ್ತಯನ್ ಸ್ವಾನುಭೂತ್ಯೇಹ ತ್ರೀನ್‌ಸ್ವಪ್ನಾನ್‌ಧುನುತೇ ಮುನಿಃ॥
(೭-೧೫-೬೨)

ಮಾಯಾಸೃಷ್ಟಾಂ ನಿಖಿಲಜಗತೀಮಾತ್ಮನಾನುಪ್ರವಿಶ್ಯ
ಕ್ಷೇಮಾಯಾಸ್ಯಾ ಹರಿಹರವಿರಿಂಚಾಭಿಧಾನಂ ದಧಾನಃ।
ಶ್ರೇಯಃಪ್ರಾಪ್ತ್ಯೈ ಸುಗಮಪದವೀಮುದ್ಧವವ್ಯಾಜತೋಽಸ್ಮಾನ್
ಯೋಽವಾಶಾಸೀತ್ ಸ ಪರಮಗುರುಃ ಸ್ತೂಯತಾಂ ವಾಸುದೇವಃ॥

ನರನಾಕೃತಿಯಂ ತಳೆರ್ದುಂ
ಪರತತ್ತ್ವದ ಪೆರ್ಮೆಯಂ ಪ್ರಬೋಧಿಸಿ ಧರೆಯಂ।
ಪೊರೆಯುತೆ ದುರುಳರ ತರಿಯುತೆ
ಗುರುವಾಗಿಹ ಕೃಷ್ಣನೆಮಗೆ ನೀಡುಗೆ ಶುಭಮಂ॥

ಅನುಬಂಧ
ಬ್ರಹ್ಮವಲ್ಲೀ

ಇದಕ್ಕೆ ಆನಂದವಲ್ಲಿಯೆಂಬ ಇನ್ನೊಂದು ಹೆಸರೂ ಉಂಟು. ಶಿಕ್ಷಾವಲ್ಲಿಯಲ್ಲಿ ಹೇಳಿದ ಉಪಾಸನೆಗಳು ಸಗುಣೋಪಾಸನೆಗಳು. ಅನಂತರ ಓಂಕಾರ ಮತ್ತು ವ್ಯಾಹೃತಿಗಳು ಬ್ರಹ್ಮವೆಂದು ಹೇಳಿದೆ. ಶಬ್ದಗಳು ಉಪಾಧಿಗಳಾದ್ದರಿಂದ ಅವೆಲ್ಲವೂ ಸೋಪಾಧಿಕವಾದ ಅಪರಬ್ರಹ್ಮದ ವಿಷಯವಾಗುತ್ತದೆ. ಹೃದಯಗುಹೆಯಲ್ಲಿರುವ ಬ್ರಹ್ಮದರ್ಶನವೂ ಸಹ ಸ್ಥಳವಿಶೇಷದಿಂದ ಕೂಡಿದ್ದರಿಂದ ಸೋಪಾಧಿಕವೇ ಸರಿ. ನಿರುಪಾಧಿಕವಾದ ಪರಬ್ರಹ್ಮಜ್ಞಾನದಿಂದಲೇ ಮೋಕ್ಷವೆಂದು ಸಿದ್ಧಾಂತವಿರುವುದರಿಂದ ಅದನ್ನು ತಿಳಿಸುವುದಕ್ಕಾಗಿ ಈ ಬ್ರಹ್ಮವಲ್ಲಿಯು ಹೊರಟಿದೆ. ಸಮಸ್ತ ಉಪದ್ರವಗಳಿಗೆ ಸಂಸಾರವೇ ಮೂಲ. ಈ ಸಂಸಾರಕ್ಕೆ ಅವಿದ್ಯೆಯೇ ಬೀಜ. ಇದರ ನಿವೃತ್ತಿಯು ನಿರುಪಾಧಿಕವಾದ ಪರಬ್ರಹ್ಮಜ್ಞಾನದಿಂದಲೇ ಆಗುತ್ತದೆ. ಅವಿದ್ಯಾನಿವೃತ್ತಿಯೆಂದರೆ ಚೈತನ್ಯ (ಆತ್ಮ)ದೊಡನೆ ಸಂಬಂಧಿಸುವ ಅರ್ಹತೆಯನ್ನು ಅವಿದ್ಯೆಯು ಕಳೆದುಕೊಳ್ಳುವುದು ಎಂದರ್ಥ. ಆಗ ಅವಿದ್ಯಾಫಲವಾದ ಸಂಸಾರವಿರುವುದಿಲ್ಲವಾದ್ದರಿಂದ ಪುನರ್ಜನ್ಮವೇ ತಪ್ಪಿಹೋಗುತ್ತದೆ. ಜೀವಾತ್ಮನು ತನ್ನ ನಿಜಸ್ವರೂಪದಲ್ಲಿ ನಿಲ್ಲುತ್ತಾನೆ. ಅದೇ ಸಂಸಾರದ ಬಿಡುಗಡೆಯೆಂಬ ಮೋಕ್ಷ. 'ಸ್ವಸ್ವರೂಪಾವಸ್ಥಾನಂ ಮೋಕ್ಷಃ' ಎಂದು ಶ್ರೀ ಶಂಕರಾಚಾರ್ಯರು ಹೇಳಿದ್ದಾರೆ.

'ಆತ್ಮನ ಆಕಾಶಃ ಸಂಭೂತಃ' ಇತ್ಯಾದಿ ವಾಕ್ಯಗಳಿಂದ ವಿಶ್ವದ ಸೃಷ್ಟಿಯು ಹೇಗಾಯಿತೆಂಬುದನ್ನು ಉಪನಿಷತ್ತು ವರ್ಣಿಸಿದೆ. ಈ ಸೃಷ್ಟಿಯು ಪಾರಮಾರ್ಥಿಕವಾಗಿ ಇಲ್ಲವಾದರೂ ವ್ಯಾವಹಾರಿಕವಾಗಿ ಕಣ್ಣೆದುರಿನಲ್ಲಿ ಕಾಣಿಸುತ್ತದೆ. ವ್ಯಾವಹಾರಿಕವಾದ ಸತ್ಯವಾದರೂ ನಮ್ಮ ಮನಸ್ಸಿಗೆ ನಾಟುವಂತೆ ವ್ಯವಹಾರದ ಕ್ರಮವನ್ನೇ ತಿಳಿಸಿರುವುದು ಉಪನಿಷತ್ತಿನ ಒಂದು ವೈಶಿಷ್ಟ್ಯವೇ ಸರಿ. ಇಸ್ಲಾಂಮತದಲ್ಲಾಗಲಿ ಕ್ರೈಸ್ತಮತದಲ್ಲಾಗಲಿ ಸೃಷ್ಟಿಯ ಕ್ರಮನಿರ್ದೇಶವಿಲ್ಲ. ದೇವರು ಈ ಜಗತ್ತನ್ನು ಸೃಷ್ಟಿಸಿದನು ಎಂದು ಹೇಳಿ ಅವು

ಕೈತೊಳೆದುಕೊಳ್ಳುತ್ತವೆ. ಆಕಾಶಾದಿಗಳು ಮಿಥ್ಯೆಯಾದ್ದರಿಂದ ಪರಬ್ರಹ್ಮವು 'ವಸ್ತುತಃ' ಅಪರಿಚ್ಛಿನ್ನವೆಂದು ತಿಳಿಯಬೇಕು.

ಆತ್ಮನಿಂದ ಆಕಾಶವು ಹುಟ್ಟಿತು. ಅನಂತರ ಆಕಾಶ ಮೊದಲಾದ ಭೂತಗಳಿಂದ ವಾಯು ಮುಂತಾದವು ಕ್ರಮವಾಗಿ ಹುಟ್ಟಿದವು ಎಂದು ಹೇಳಿದೆಯಷ್ಟೆ. ಜಡವಸ್ತುವಿನಿಂದ ಇನ್ನೊಂದು ವಸ್ತು ಹುಟ್ಟುವುದು ಶಕ್ಯವಲ್ಲ. ಜಡವಸ್ತುವಿಗೆ ಇನ್ನೊಂದನ್ನು ನಿರ್ಮಿಸಲು ಸಾಧ್ಯವಿಲ್ಲ. ಸಾಧ್ಯವಾದರೆ ಅದು ಜಡವೇ ಅಲ್ಲ. ಒಂದು ಕಲ್ಲುಬಂಡೆಯಿಂದ ಇನ್ನೊಂದು ವಸ್ತು ಎಂದಿಗೂ ಹುಟ್ಟದು. ಆದ ಕಾರಣ, ಆಕಾಶದಿಂದ ವಾಯು ಹುಟ್ಟಿತು ಎಂದರೆ, ಆಕಾಶಸ್ವರೂಪವನ್ನು ಪಡೆದ ಆತ್ಮನಿಂದ ಅಥವಾ ಆಕಾಶತಾದಾತ್ಮ್ಯವನ್ನು ಪಡೆದ ಆತ್ಮನಿಂದ ವಾಯು ಹುಟ್ಟಿತು ಎಂದರ್ಥ. ಹೀಗೆಯೇ ವಾಯುಸ್ವರೂಪವನ್ನು ಪಡೆದ ಆತ್ಮನಿಂದ ಅಗ್ನಿಹುಟ್ಟಿತು. ಈ ಪ್ರಕಾರ ಅರ್ಥವನ್ನು ಮಾಡಿಕೊಳ್ಳಬೇಕು. ಇದು ವೇದಾಂತದ ನಿಲುವು.

ಆಕಾಶವು ಹುಟ್ಟಿತು ಎಂದರೇನು? ಆಕಾಶವು ಒಂದು ಶೂನ್ಯವಾಗಿ ನಮಗೆ ತೋರುತ್ತದೆ. ಆಕಾಶವು ಹುಟ್ಟದಿದ್ದಾಗ ಈ ವಿಶ್ವವು ಹೇಗಿದ್ದಿರಬಹುದು ಎಂದು ಊಹಿಸಿಕೊಳ್ಳಲೂ ನಮಗೆ ಸಾಧ್ಯವಾಗುವುದಿಲ್ಲ. ಅವಕಾಶಪ್ರದತ್ವ ಮತ್ತು ಶಬ್ದ ಎಂಬಿವು ಆಕಾಶದ ಗುಣಗಳೆಂದು ಭಗವತ್ಪಾದರು ಹೇಳುತ್ತಾರೆ. ತಾರ್ಕಿಕರೂ ಶಬ್ದವೆಂಬ ಗುಣಕ್ಕೆ ಆಶ್ರಯವಾದದ್ದು ಆಕಾಶವೆಂದು ಹೇಳುತ್ತಾರೆ. ಚಾರ್ವಾಕರು ಆಕಾಶವೆಂಬ ಪದಾರ್ಥವನ್ನು ಒಪ್ಪುವುದಿಲ್ಲ.

ಸುಪ್ರಸಿದ್ಧ ವಿಜ್ಞಾನಿಯಾದ ಐನ್‌ಸ್ಟಿನ್ ಮಹಾಶಯನು ಆಕಾಶವು ಶೂನ್ಯವಲ್ಲ, ಅದು ಒಂದು ವಸ್ತು ಎಂದು ಹೇಳಿದ್ದಾನೆ. ಅತ್ಯಾಧುನಿಕವೆನಿಸಿದ ಕ್ವಾಂಟಮ್ ಭೌತಶಾಸ್ತ್ರವೂ ಆಕಾಶವು ಶೂನ್ಯವಲ್ಲ. ಅದು ಒಂದು ವಸ್ತು. ಅದರಲ್ಲಿ ಅತಿಸೂಕ್ಷ್ಮಕಣಗಳು ತಾವಾಗಿಯೇ ಹುಟ್ಟಿ ನಶಿಸುತ್ತವೆ ಎಂದು ಸಿದ್ಧಾಂತಿಸಿದೆ.

Quantum Physics has accepted space as plenum. It generates particles. it reabsorbs particles. it is something positive. It is not void. Einstein had a clearer understanding of Space, much clearer than modern Quantum Physics.

- Maya in Physics by N.C. Panda (page 376)

ಉಪನಿಷತ್ತು ಹೇಳಿರುವುದು ಸತ್ಯವೆಂದು ವಿಜ್ಞಾನಶಾಸ್ತ್ರವು ಒಪ್ಪಿಕೊಂಡಿತು!

ಆಕಾಶ, ವಾಯು, ಅಗ್ನಿ, ಜಲ, ಪೃಥ್ವಿ ಇವೇ ಪಂಚ ಮಹಾಭೂತಗಳು. ಇವು ಜಗತ್ತಿನ ಮೂಲಭೂತ ದ್ರವ್ಯಗಳು. ಇವಕ್ಕೂ ಮೂಲಕಾರಣವಾದ ಚೈತನ್ಯವೆಂಬ ಆತ್ಮನ

ವಿಷಯ ಒತ್ತಟ್ಟಿಗಿರಲಿ. ಅವನೇ ಜಗದ್ರೂಪನಾದರೂ ಜಗತ್ತಿನಲ್ಲಿ ಅವನು ಸೇರುವುದಿಲ್ಲ. ಜಗನ್ನಿರ್ಮಾಣಕ್ಕೆ ಮೂಲವಾದ ದ್ರವ್ಯವೇ ಆಕಾಶ. ಆಕಾಶದಲ್ಲಿ ಕಾಣಿಸಿಕೊಂಡ ಅತಿಸೂಕ್ಷ್ಮಕಣಗಳು (particles) ಒಟ್ಟುಗೂಡಿ ವಾಯು ಹುಟ್ಟಿತೆಂದೂ ಅನಂತರ ಅಗ್ನಿ, ಜಲ, ಪೃಥ್ವಿಗಳು ಕ್ರಮವಾಗಿ ಜನಿಸಿದವೆಂದೂ ಉಪನಿಷತ್ತು ಹೇಳಿದೆ. ಶಬ್ದ, ಸ್ಪರ್ಶ, ರೂಪ, ರಸ, ಗಂಧಗಳು ಕ್ರಮವಾಗಿ ಇವುಗಳಲ್ಲಿ ಉದ್ಭೂತವಾಗಿ ಗೋಚರಿಸುತ್ತವೆ. ಪಂಚಜ್ಞಾನೇಂದ್ರಿಯಗಳಿಗೆ ಗೋಚರಿಸತಕ್ಕ ಗುಣಗಳು ಇವು ಐದು ಮಾತ್ರ ವಾಸ್ತವವಾಗಿ ಬಾಹ್ಯದಲ್ಲಿ ಇರತಕ್ಕ ಗುಣಗಳು ಇವು ಐದೇ. ಕಾಮ, ಕ್ರೋಧಾದಿಗಳು ಅಂತಃಕರಣದ ಮಾನಸಗುಣಗಳು. ಪಂಚಮಹಾಭೂತಗಳ ಸೃಷ್ಟಿಯಲ್ಲಿ ಒಂದು ವೈಜ್ಞಾನಿಕ ಕ್ರಮವು ನಮಗೆ ತೋರುತ್ತದೆ. ಇದರ ಸ್ಪಷ್ಟೀಕರಣವು ವಿಜ್ಞಾನಿಗಳಿಗೆ ಸೇರಿದೆ.

'ಯತೋ ವಾಚೋ ನಿವರ್ತಂತೇ' ಎಂದು ಆರಂಭವಾಗುವ ನವಮಾನುವಾಕದ ವಾರ್ತಿಕಗಳಲ್ಲಿ ಶ್ರೀ ಸುರೇಶ್ವರಾಚಾರ್ಯರು ಕೆಲವು ಅಮೂಲ್ಯ ವಿಚಾರಗಳನ್ನು ಹೇಳಿದ್ದಾರೆ. ಅವನ್ನು ಅನುಲಕ್ಷಿಸಿ ಕೆಲವು ಅಂಶಗಳನ್ನಿಲ್ಲಿ ಪ್ರಸ್ತಾವಿಸಬಹುದು.

"ಬ್ರಹ್ಮವನ್ನು ವರ್ಣಿಸಲಾರದೆ ವಾಕ್ಕುಗಳು ಹಿಂದಿರುಗುತ್ತವೆ. ಮನಸ್ಸು ಸಹ ಆ ವಸ್ತುವನ್ನರಿಯಲಾಗದೆ ಹಿಂದೆ ಸರಿಯುತ್ತದೆ" ಎಂದು ಮೇಲ್ಕಂಡ ಶ್ರುತಿಯ ಅರ್ಥ. ವಾಕ್ಕು ಎಂದರೆ ಶಬ್ದವು ವರ್ಣಿಸಬೇಕಾದರೆ ಆ ವಸ್ತುವಿನಲ್ಲಿ ಜಾತಿ, ಗುಣ, ಕ್ರಿಯೆಗಳಲ್ಲೊಂದು ನಮಗೆ ಪರಿಚಿತವಾದ ಧರ್ಮವಿರಬೇಕು. ಅಥವಾ ಪೂರ್ವಪರಿಚಿತ ವ್ಯಕ್ತಿಗೆ ಇಟ್ಟಿರುವ ಸಂಜ್ಞೆಯಾಗಿರಬೇಕು. ಈ ನಾಲ್ಕನ್ನು ಶಬ್ದದ ಪ್ರವೃತ್ತಿ ನಿಮಿತ್ತಗಳೆನ್ನುತ್ತಾರೆ. ಶಬ್ದ ಪ್ರಯೋಗಕ್ಕೆ ಇವು ನಿಮಿತ್ತಗಳು. ಇವಿಷ್ಟನ್ನೇ ಬೋಧಿಸುವ ಶಕ್ತಿ ಶಬ್ದಕ್ಕೆ ಇರುತ್ತದೆ. ಉದಾ

1. ಜಾತಿ – ಅಶ್ವತ್ವ, ಗೋತ್ವ, ಮನುಷ್ಯತ್ವ–ಅಶ್ವ, ಗೋವು, ಮನುಷ್ಯ ಇತ್ಯಾದಿ.
2. ಗುಣ – ಬಿಳುಪು, ಕೆಂಪು – ಮುತ್ತು ಬಿಳಿಯದು, ಹವಳ ಕೆಂಪು.
3. ಕ್ರಿಯೆ – ಪಾಚನ, ಅಧ್ಯಾಪನ, ಅವನು ಪಾಚಕ, ಈತನು ಅಧ್ಯಾಪಕ.
4. ಸಂಜ್ಞೆ – ಇವನು ರಾಮ, ಅವನು ಕೃಷ್ಣ.

ಈ ನಾಲ್ಕು ಬಗೆಯ ಶಬ್ದಗಳ ಹೊರತಾಗಿ ಇನ್ನಾವ ವಸ್ತುನಿರ್ದೇಶಕ ಶಬ್ದವೂ ಯಾವ ಭಾಷೆಯಲ್ಲಿಯೂ ಇಲ್ಲ. ಬ್ರಹ್ಮದಲ್ಲಿ ಯಾವ ಜಾತಿ, ಗುಣ, ಕ್ರಿಯೆಗಳೂ ಇಲ್ಲ. ಬ್ರಹ್ಮವು ಪೂರ್ವಪರಿಚಿತವಲ್ಲ ವಾದ್ದರಿಂದ ಬ್ರಹ್ಮ, ಆತ್ಮ ಮುಂತಾದ ಸಂಜ್ಞಾಶಬ್ದಗಳೂ ಅದರ ಸ್ವರೂಪವನ್ನು ತಿಳಿಸಲಾರವು. ಶಿವ, ವಿಷ್ಣು ಮೊದಲಾದ ದೇವತೆಗಳ ವರ್ಣನೆ ಸಗುಣಮೂರ್ತಿಗೆ ಸಂಬಂಧಿಸಿದ್ದು. ನಿರ್ಗುಣಬ್ರಹ್ಮದ ವರ್ಣನೆಯಲ್ಲ. ಹೀಗಿರುವಾಗ

ಯಾವ ವಾಕ್ಕು ಬ್ರಹ್ಮದ ಸ್ವರೂಪವನ್ನು ತಿಳಿಸಿಕೊಟ್ಟೀತು? ಅಪರಿಚಿತವಾದದ್ದನ್ನು ಮನಸ್ಸೂ ಸಹ ಕಲ್ಪಿಸಿಕೊಳ್ಳಲಾರದು. ಶಬ್ದಗೋಚರವಾದ್ದನ್ನು ಸಹ ಮನಸ್ಸೇ ತಿಳಿಯುತ್ತದೆ. ಅಂತಹ ಮನಸ್ಸಿಗೂ ಸಾಕ್ಷಿಯಾಗಿ, ವಾಕ್ಕಿಗೆ ವಾಕ್ಕೂ, ಮನಸ್ಸಿಗೆ ಮನಸ್ಸೂ ಆಗಿರುವ ಬ್ರಹ್ಮವನ್ನು ಮನಸ್ಸು ಹೇಗೆ ತಿಳಿದೀತು? 'ಸತ್ಯಂಜ್ಞಾನಮನಂತಂ ಬ್ರಹ್ಮ' ಇತ್ಯಾದಿ ಶ್ರುತಿಗಳೂ ಸಹ ವಾಚ್ಯವೃತ್ತಿಯಿಂದ ಬ್ರಹ್ಮಸ್ವರೂಪವನ್ನು ತಿಳಿಸಲಾರವು. ಲಕ್ಷಣಾವೃತ್ತಿಯಿಂದ ಬ್ರಹ್ಮದ ಕಡೆಗೆ ಕೈತೋರಿಸಿ ಸುಮ್ಮನಾಗುತ್ತವೆ. "ತತ್ತ್ವಮಸಿ" ಎಂಬ ವಾಕ್ಯವು ಬ್ರಹ್ಮ ಮತ್ತು ಜೀವನಿಗೆ ಐಕ್ಯವನ್ನೇನೋ ತಿಳಿಸಿಕೊಡುತ್ತದೆ. ಆದರೆ ಅದು ಸ್ವಯಂಪ್ರಕಾಶವಾದ ಬ್ರಹ್ಮದ ಸ್ವರೂಪವನ್ನು ತಿಳಿಸಲಾರದೆ ಹಿಂದಿರುಗಿ ಬಿಡುತ್ತದೆ!

ವೇದವಾಗಲಿ ಅದರಿಂದಾಗುವ ಜ್ಞಾನವಾಗಲಿ ಬ್ರಹ್ಮವನ್ನು ವಿಷಯೀಕರಿಸುವುದೇ ಇಲ್ಲವೆಂದಾದರೆ ವೇದದಿಂದಾಗುವ ಪ್ರಯೋಜನವಾದರೂ ಏನು? ಪ್ರಯೋಜನವಿದೆ. ಅವಿದ್ಯೆಯನ್ನು (ಅಜ್ಞಾನವನ್ನು) ಹೋಗಲಾಡಿಸುವುದೇ ಪ್ರಯೋಜನ! ನಿದ್ರಿಸುತ್ತಿರುವವನ ಬಳಿಗೆ ಹೋಗಿ "ಏ ದೇವದತ್ತ ಏಳು" ಎಂದು ಕೂಗಿದೊಡನೆ ಅವನ ನಿದ್ರೆಯು ಹೋಗಿ ಎಚ್ಚರವಾಗಿಬಿಡುತ್ತದೆ. ನಿದ್ರಿಸುವಾಗ ಅವನಿಗೆ ನಮ್ಮ ಮಾತಿನ ಅರ್ಥವೇ ಆಗಿರುವುದಿಲ್ಲ. ಆದರೂ ನಿದ್ರೆಯು ಹೋಗಿ ಎಚ್ಚರವಾಗುತ್ತದೆ. ಶಬ್ದ ಶಕ್ತಿ ಅಂತಹುದು. 'ಸತ್ಯಂಜ್ಞಾನಮನಂತಂ ಬ್ರಹ್ಮ, ತತ್ತ್ವಮಸಿ' ಇತ್ಯಾದಿ ಶ್ರುತಿವಾಕ್ಯವು ಮನುಷ್ಯನ ಅವಿದ್ಯೆಯನ್ನು ತೊಲಗಿಸುತ್ತದೆ. ಅವಿದ್ಯೆಯು ತೊಲಗಿದೊಡನೆ ಬ್ರಹ್ಮವು ಸ್ವಯಂಪ್ರಕಾಶಿಸುತ್ತದೆ. ಅವಿದ್ಯಾನಿವೃತ್ತಿಯೇ ಶ್ರುತಿಯಿಂದ ಆಗುವ ಪ್ರಯೋಜನ. ಇದು ಶಬ್ದಮಹಿಮೆ. ಎಷ್ಟಾದರೂ ಶಬ್ದಜ್ಞಾನಕ್ಕಿಂತ ಅಜ್ಞಾನವು ದುರ್ಬಲ. "ಇದು ಸರ್ಪವಲ್ಲ, ಹಗ್ಗ" ಎಂದೊಡನೆ ಸರ್ಪವೆಂಬ ಭ್ರಮೆ ಹೋಗಿಬಿಡುತ್ತದೆ. ಅವಿದ್ಯೆಯನ್ನು ತೊಲಗಿಸುವ 'ತತ್ತ್ವಮಸಿ' ಎಂಬ ವಾಕ್ಯದಿಂದ 'ಅಹಂ ಬ್ರಹ್ಮಾಸ್ಮಿ' ಎಂಬ ಜ್ಞಾನ ಉದಿಸುತ್ತಲೇ ಅದೂ ಸಹ ಅವಿದ್ಯೆಯೊಡನೆ ತಾನೂ ನಾಶವಾಗಿ ಬಿಡುತ್ತದೆ! ರೋಗವನ್ನು ಹೋಗಲಾಡಿಸುವ ಔಷಧವೂ ರೋಗದೊಡನೆ ನಾಶವಾಗುವಂತೆ ಇದು. ಆಗ 'ಅಹಂ' ಎಂಬುದೂ ಇಲ್ಲ. 'ಅಸ್ಮಿ' ಎಂಬುದೂ ಇಲ್ಲ. ಬ್ರಹ್ಮವೆಂಬ ಚೈತನ್ಯಜ್ಯೋತಿಯೊಂದೇ ವಿರಾಜಿಸುತ್ತದೆ.

ಆನಂದಂ ಬ್ರಹ್ಮಣೋ ವಿದ್ವಾನ್ ನ ಬಿಭೇತಿ ಕುತಶ್ಚನ॥

ಬ್ರಹ್ಮದ ಆನಂದವೆಂದರೆ ಬ್ರಹ್ಮವೇ ಆದ ಆನಂದವೆಂದರ್ಥ. ರಾಹೋಃ ಶಿರಃ- ರಾಹುವಿನ ಶಿರಸ್ಸು ಎಂಬ ಹಾಗೆ ಕಲ್ಪಿತವಾದ ಅವಸ್ಥಾಭೇದದಿಂದ ಷಷ್ಠೀವಿಭಕ್ತಿ ಬಂದಿದೆ. ಈ ಬ್ರಹ್ಮಾನಂದವನ್ನು ತಿಳಿದವನು ಬ್ರಹ್ಮವೇ ಆದಾಗ ಅವನಿಗೆ ಯಾವ ವಸ್ತುವಿನಿಂದಲೂ ಭಯವಿಲ್ಲ. ಇನ್ನೊಂದು ವಸ್ತುವಿದ್ದರೆ ಅದರಿಂದ ಭಯ ಸಂಭವಿಸೀತು. ಇನ್ನೊಂದು

ವಸ್ತುವೇ ಇಲ್ಲದಾಗ ಬ್ರಹ್ಮವಿದನಿಗೆ ಯಾರಿಂದ ಭಯ ಹುಟ್ಟೀತು? ಇನ್ನೊಂದು ವಸ್ತುವಾದರೋ ಅವಿದ್ಯೆಯಿಂದ ಕಾಣಿಸುತ್ತದೆ. ಭಯಹೇತುವಾದ ಅವಿದ್ಯೆಯೇ ನಷ್ಟವಾದಾಗ ಭಯ ಇಲ್ಲದಿರುವುದು ಸಹಜವೇ ಆಗಿದೆ.

'ಯತೋ ವಾಚೋ ನಿವರ್ತಂತೇ' – ಎಂದು ಹೇಳುವ ಶ್ರುತಿಯ ಆಶಯವೇನೆಂದರೆ, ಬ್ರಹ್ಮವು ಯಾವ ಪದದ ಅರ್ಥವೂ ಅಲ್ಲ. ಯಾವ ವಾಕ್ಯದ ಅರ್ಥವೂ ಅಲ್ಲ ಎಂದು ತಿಳಿಸುವುದು. ಅಲ್ಲದೆ ಯಾವ ಬಗೆಯ ಮಾನಸಕಲ್ಪನೆಗೂ ನಿಲುಕತಕ್ಕದ್ದಲ್ಲ ಎಂದು ತಿಳಿಸುವುದಕ್ಕಾಗಿ 'ಮನಸಾ ಸಹ' ಎಂದು ಹೇಳಿದೆ. 'ನಾಯಮಾತ್ಮಾ ಪ್ರವಚನೇನ ಲಭ್ಯಃ' (೧–೧–೨೩) ಎಂಬ ಕಠಶ್ರುತಿಯ ಆಶಯವೂ ಇದೇ ಆಗಿರುತ್ತದೆ. ಅಲ್ಲಿಯೇ 'ಯಮೇವೈಷ ವೃಣುತೇ ತೇನ ಲಭ್ಯಃ' ಎಂದೂ ಹೇಳಿದೆ. ಬ್ರಹ್ಮವು ಸ್ವಾನುಭವಸ್ವರೂಪವೆಂದು ಅದರ ತಾತ್ಪರ್ಯ. ಇದೇ ಪ್ರತ್ಯಗ್‌ಬ್ರಹ್ಮ. ಅನ್ನಮಯಾದಿ ಪಂಚಕೋಶಗಳ ನಿಷೇಧವೂ ಇದರಲ್ಲಿಯೇ ಪರ್ಯವಸಾನಗೊಳ್ಳುತ್ತದೆ. ಹೇಗೆಂದರೆ, ಇದು ಅನ್ನಮಯ ಕೋಶವಲ್ಲ. ಇದು ಪ್ರಾಣಮಯ ಕೋಶವಲ್ಲ. ಇವೆಲ್ಲವೂ ಪ್ರತ್ಯಗ್‌ಬ್ರಹ್ಮವೇ ಎಂದು ಅರ್ಥ. ರಜ್ಜುಸರ್ಪಸ್ಥಳದಲ್ಲಿ ಇದು ಸರ್ಪವಲ್ಲ, ಹಗ್ಗ ಎಂದು ತಿಳಿಯುವಂತೆ ಕೋಶಪಂಚಕ ನಿಷೇಧದಲ್ಲಿಯೂ ತಿಳಿಯಬೇಕು.

ಪೂರ್ಣಮದಃ ಪೂರ್ಣಮಿದಂ ಪೂರ್ಣಾತ್ ಪೂರ್ಣಮುದಚ್ಯತೇ।
ಪೂರ್ಣಸ್ಯ ಪೂರ್ಣಮಾದಾಯ ಪೂರ್ಣಮೇವಾವಶಿಷ್ಯತೇ॥
ಓಂ ಶಾಂತಿಃ ಶಾಂತಿಃ ಶಾಂತಿಃ। _ಈಶಾವಾಸ್ಯಮ್।

ಹಿನ್ನುಡಿ

ವಿದ್ವಾನ್ ಎನ್. ರಂಗನಾಥ ಶರ್ಮಾ ಕನ್ನಡ ನಾಡು ಕಂಡ ಅಪೂರ್ವ ವಿದ್ವಾಂಸರು. ಇವರು ಸಂಸ್ಕೃತ ಮತ್ತು ಕನ್ನಡ ಉಭಯ ಭಾಷಾ ಪರಿಣತರು. ಶಿವಮೊಗ್ಗ ಜಿಲ್ಲೆಯ ಸೊರಬದ ಸಮೀಪದಲ್ಲಿರುವ ನಡಹಳ್ಳಿಯಲ್ಲಿ ಇವರು ಜನಿಸಿದರು. ಬೆಂಗಳೂರಿನ ಶ್ರೀಚಾಮರಾಜೇಂದ್ರ ಸಂಸ್ಕೃತ ಮಹಾಪಾಠಶಾಲೆಯಲ್ಲಿ ವ್ಯಾಕರಣ ಮತ್ತು ಅಲಂಕಾರಶಾಸ್ತ್ರಗಳನ್ನು ಅಧ್ಯಯನ ಮಾಡಿ ವಿದ್ವತ್ ಪದವಿಯನ್ನು ಪಡೆದು ಆ ಮಹಾಪಾಠಶಾಲೆಯಲ್ಲಿಯೇ ಅಧ್ಯಾಪಕರಾಗಿ ನಿಯುಕ್ತರಾದ ಇವರು ಪ್ರಾಧ್ಯಾಪಕರಾಗಿ ಅಲ್ಲಿಯೇ ನಿವೃತ್ತಿ ಹೊಂದಿದರು. ಅವರಿಗೀಗ ೯೫ ವರ್ಷ ವಯಸ್ಸು.

ಎನ್. ರಂಗನಾಥ ಶರ್ಮಾ ಅವರು ವಾಲ್ಮೀಕಿ ಮಹರ್ಷಿಗಳ ಶ್ರೀಮದ್ ರಾಮಾಯಣವನ್ನು ಕನ್ನಡಕ್ಕೆ ತಂದು ಕನ್ನಡದ ಕನ್ನಡಿಯಾದರು. ವಿಷ್ಣುಪುರಾಣ ಮತ್ತು ಶ್ರೀಮದ್‌ಭಾಗವತದ ೧೦.೧೧-೧೨ನೆಯ ಸ್ಕಂಧಗಳನ್ನು ಕನ್ನಡಕ್ಕೆ ಕೊಡಮಾಡಿದರು. ಶ್ರೀಶಂಕರ ದಿಗ್ವಿಜಯವನ್ನು ಕನ್ನಡಕ್ಕೆ ಅನುವಾದಿಸಿ ಸಿದ್ಧಿ ಪಡೆದರು. ಇವರು ಸಂಸ್ಕೃತದಿಂದ ಮುಖ್ಯ ಕೃತಿಗಳನ್ನು ಅನುವಾದ ಮಾಡಿಕೊಟ್ಟು ಕನ್ನಡದ ಸಂಪತ್ತನ್ನು ಹೆಚ್ಚಿಸಿದರು. ಕಾವ್ಯ, ವ್ಯಾಕರಣ, ನಿಘಂಟು, ಅಲಂಕಾರ, ವೇದಾಂತ ಮತ್ತು ಅದ್ವೈತಕ್ಕೆ ಸಂಬಂಧಿಸಿದ ಅಮೂಲ್ಯ ಗ್ರಂಥಗಳನ್ನು ರಚನೆ ಮಾಡಿಕೊಟ್ಟು ಸಂಸ್ಕೃತಕ್ಕೂ ಕನ್ನಡಕ್ಕೂ ಸೇತುವೆಯನ್ನು ನಿರ್ಮಿಸಿದ ಕೀರ್ತಿ ರಂಗನಾಥಶರ್ಮಾ ಅವರದು. ಮಹಾವಿದ್ವಾಂಸರಾದ ಇವರಿಂದ ಎಂಭತ್ತಕ್ಕೂ ಮೇಲ್ಪಟ್ಟು ಕೃತಿಗಳು ಹೊರಬಂದಿವೆ. ಇವರ ನೂರಾರು ಲೇಖನಗಳು ವಿದ್ವತ್‌ಪತ್ರಿಕೆಗಳಲ್ಲಿ ಪ್ರಕಟಗೊಂಡಿವೆ.

ಕನ್ನಡ ಸಾಹಿತ್ಯ ಪರಿಷತ್ತಿನ ಹಳಗನ್ನಡ ಕಾವ್ಯಗಳ ಅನುವಾದಕ ಮಂಡಳಿಯ ಅಧ್ಯಕ್ಷರಾಗಿ ಪ್ರಾಚೀನ ಹಳಗನ್ನಡ ಕಾವ್ಯಗಳ ಸಂಪಾದನೆ ಮತ್ತು ಪರಿಷ್ಕರಣೆಗಳಲ್ಲಿ ಮಹತ್ತ್ವದ ಪಾತ್ರವನ್ನು ವಹಿಸಿದ್ದು ಈಗ ಇತಿಹಾಸ. ಸಂಸ್ಕೃತ ವಿದ್ವಾಂಸರ ವಿವಿಧ ವಾಕ್ಯಾರ್ಥ ಸಭೆಗಳಲ್ಲಿ ಭಾಗವಹಿಸಿ ಪ್ರಾಚೀನ ಶಾಸ್ತ್ರಪಾಂಡಿತ್ಯದ ಮಹತ್ತ್ವವನ್ನು ಸಾರಿದ್ದಾರೆ. ಅನೇಕ ವಿದ್ವತ್‌ಸಭೆಗಳಲ್ಲಿ ಭಾಗವಹಿಸಿ ತಮ್ಮ ಅಪೂರ್ವ ವಿದ್ಯಾಪರಿಣತಿಯನ್ನು ಮೇಲ್ಮೆಗೊಳಿಸಿದ್ದಾರೆ. ಇವರ ಸಂಸ್ಕೃತ ವಿದ್ಯಾಪರಿಣತಿ ಕಂಡು ಕರ್ನಾಟಕ ಸರ್ಕಾರವು

ರಾಜ್ಯಪ್ರಶಸ್ತಿಯನ್ನು ಕೊಡಮಾಡಿದೆ ಭಾರತ ಸರ್ಕಾರವು ರಾಷ್ಟ್ರಮಟ್ಟದ ರಾಷ್ಟ್ರಪತಿ ಪ್ರಶಸ್ತಿಯನ್ನು ಇವರಿಗೆ ಕೊಟ್ಟು ಧನ್ಯತೆಯನ್ನು ಪಡೆದಿದೆ. ಕರ್ನಾಟಕದ ನೂರಾರು ಸಂಸ್ಥೆಗಳು ಇವರನ್ನು ಪುರಸ್ಕರಿಸಿ ಸನ್ಮಾನಿಸಿವೆ. ಇವರು ತಮ್ಮ ಇಳಿವಯಸ್ಸಿನಲ್ಲೂ ಗ್ರಂಥರಚನೆಯಲ್ಲಿ ತೊಡಗಿರುವುದು ಕನ್ನಡದ ಪುಣ್ಯವೆಂದೇ ತಿಳಿಯಬೇಕು. ಈಗ ಪ್ರಕಟಗೊಂಡಿರುವ 'ಪುರಾಣಗಳ ನೆಲೆ ಮತ್ತು ತತ್ತ್ವವಿಚಾರ' ಎಂಬ ಗ್ರಂಥವು ಈ ಮಹನೀಯವಿದ್ವಾಂಸರ ವಿದ್ವತ್ತಿನ ಸೂಚಕವೆಂದೇ ನಾವು ತಿಳಿಯಬಹುದು.

ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ
ಕುಲಪತಿ
ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ

ಗಾಯಂತಿ ದೇವಾಃ ಕಿಲ ಗೀತಕಾನಿ ಧನ್ಯಾಸ್ತು ತೇ ಭಾರತಭೂಮಿಭಾಗೇ।
ಸ್ವರ್ಗಾಪವರ್ಗಾಸ್ಪದಮಾರ್ಗಭೂತೇ ಭವಂತಿ ಭೂಯಃ ಪುರುಷಾಃ ಸುರತ್ವಾತ್।

ವಿಷ್ಣುಪುರಾಣ - ೨, ೩, ೨೪

ಪ್ರತ್ಯಸ್ತಮಿತಭೇದಂ ಯತ್ ಸತ್ತಾಮಾತ್ರಮಗೋಚರಮ್।
ವಚಸಾಮಾತ್ಮಸಂವೇದ್ಯಂ ತಜ್‌ಜ್ಞಾನಂ ಬ್ರಹ್ಮಸಂಜ್ಞಿತಮ್॥

ವಿಷ್ಣುಪುರಾಣ - ೬, ೭, ೫೩

ವಿಶುದ್ಧಂ ಕೇವಲಂ ಜ್ಞಾನಂ ಪ್ರತ್ಯಕ್ ಸಮ್ಯಗವಸ್ಥಿತಮ್।
ಸತ್ಯಂ ಪೂರ್ಣಮನಾದ್ಯಂತಂ ನಿರ್ಗುಣಂ ನಿತ್ಯಮದ್ವಯಮ್॥

ಭಾಗವತ - ೨, ೬, ೩೯

ಜ್ಞಾನಮಾತ್ರಂ ಪರಂ ಬ್ರಹ್ಮ ಪರಮಾತ್ಮೇಶ್ವರಃ ಪುಮಾನ್।

ಭಾಗವತ - ೩, ೩೨, ೨೬

ಉದಯ ಪ್ರಕಾಶನ
೯೮೪, ೧೧ನೇ ಮುಖ್ಯರಸ್ತೆ, ೩ನೇ ವಿಭಾಗ, ರಾಜಾಜಿನಗರ
ಬೆಂಗಳೂರು - ೫೬೦ ೦೧೦ ದೂರವಾಣಿ : ೨೩೩೮೯೧೪೩